ಶ್ರೀ ಷೇರ್ ಖಾನ್.—ಇದರಲ್ಲಿ ವಿದ್ಯಾರ್ಥಿಗಳ ಪ್ರಶ್ನೆ ಇದೆ. ಮಕ್ಕಳ ಪ್ರಶ್ನೆ ಇದೆ.

ಅಧ್ಯಕ್ಷರು.—ಈ ಮಧ್ಯೆ ನೋಡೋಣ.

ಶ್ರೀ ಎಸ್.ಆರ್. ಬೊಮ್ಮಾಯಿ —ಒಂದು ದಿವಸ ಕಾಲ್ ಅಟೆನ್‌ಷನ್ ಹಾಕಲಿಲ್ಲ. ಮುಂದಕ್ಕೆ ಇದು ಮುಂದುವರಿಯಬಾರದು ಎಂಬುದು ನಮ್ಮ ಇಚ್ಛೆ. ನಾಳೆಯಿಂದ ಕಾಲ್ ಅಟೆನ್‌ಷನ್ ಹಾಕಬೇಕು. ರಾಜ್ಯದಲ್ಲಿ ಬರಗಾಲದ ಬಗ್ಗೆ, ಕಾಲ್ ಅಟೆನ್‌ಷನ್ ಕೊಟ್ಟಿದ್ದೇವೆ, ೩೧೨ ಕೆಳಗೆ ಕೊಟ್ಟಿದ್ದೇವೆ. ಇದರ ಬಗ್ಗೆ ಚರ್ಚೆ ಮಾಡಬೇಡವೆ? ವಿದ್ಯಾರ್ಥಿಗಳ ಸಂಪು, ಕಾರ್ಮಿಕರ ಸಂಪು, ರೈತರ ಸಂಪಿನ ಬಗ್ಗೆ, ರಾಜ್ಯದಲ್ಲಿ ೧೨ ಜಿಲ್ಲೆಗಳಲ್ಲಿ ಕುಡಿಯುವ ನೀರಿಲ್ಲದೆ, ಜನ ಬೇರೆ ಕಡೆ ವಲಸೆ ಹೋಗುತ್ತಿದ್ದಾರೆ. ಇಂಥ ಕಷ್ಟಕರ ಸಮಸ್ಯೆಗಳನ್ನು ಸದನದಲ್ಲಿ ಚರ್ಚೆ ಮಾಡದೆ ಹೋದರೆ, ಹೇಗೆ? ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತದೆಂದು ಕೇಳಬೇಕಾಗುತ್ತದೆ.

ಅಧ್ಯಕ್ಷರು.—ಈ ಮಧ್ಯೆ ಒಂದು ದಿವಸ ಎರಡೂವರೆ ಗಂಟೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ —ಸರಿ.

SRI A. LAKSHMI SAGAR.—Sir, the questions that are listed are being completed within half an hour or fortyfive minutes. Some more questions may be listed............... ...

ಅಧ್ಯಕ್ಷರು.—ಇವೊತ್ತು ಸದಸ್ಯರು ಬಂದಿದ್ದರೆ ಅದು ಆಗುತ್ತಿರಲಿಲ್ಲ.

SRI A. LAKSHMI SAGAR.—Sir you are conducting the question hour in such a fashion that they are being finished earlier than expected. This is one happy thing. Therefore, my suggestion is that, some more questions may be listed. There is one difficulty which we experienced last year also. My question, which I tabled some mo ths ago..................

ಅಧ್ಯಕ್ಷರು.—ಮಾನ್ಯ ಸದಸ್ಯರಾದ ರಾಂದೇವ್‌ರವರು ಅದನ್ನೇ ಹೇಳಿದ್ದಾರೆ. ಮಂತ್ರಿಗಳಿಗೆ ಕಾಗದ ಬರೆದಿದ್ದೇನೆ. ಇವತ್ತು ಕಾಗದ ಹೋಗುತ್ತೆ. ಆದಷ್ಟು ಬೇಗ ಉತ್ತರಗಳನ್ನು ಕಳುಹಿಸಿಕೊಡುವಂತೆ ಹೇಳಿದ್ದೇನೆ. ಹೆಚ್ಚು ಪ್ರಶ್ನೆಗಳಿಗೆ ಉತ್ತರ ಬರಲಿಕ್ಕೆ ಪ್ರಯತ್ನ ಮಾಡುತ್ತೇನೆ

SRI A. LAKSHMISAGAR.—I can assure you, I can avoid calling attention motion or matter under Rule 312 if questions are answered within a reasonable time. The difficulty is, for months and months questions are not listed. This is my submission. About price situation, also I have already sent a joint notice covering both price situation and drought situation,

MR. SPEAKER.— You can refer to this matter in 2½ hours discussion.

Discussion on Motion of Thanks to Governors Address :

SRI VEERASHETTY M. KUSHNOOR (Bidar).—Mr. Speaker Sir, I feel it a pleasure to speak on the Motion of Thanks to the Governor's Address which has been delivered by him on 28-1-1981. I was waiting for the last three days to deliver my comments on this address.

Today I got a chance luckily and I am grateful to the Speaker and the Opposition Members, who have not raised any other issues in order to accommodate me to finish my speech today.

Sir, I beg pardon of the House because I can't speak fluently in Kannada I am speaking in English.

ಶ್ರೀ ಪಿ. ರಾಂದೇವ್.—ಇವೊತ್ತು ರಾಜ್ಯಪಾಲರ ಭಾಷಣದ ಬಗ್ಗೆ ಮೋಷನ್ ಆಫ್ ಥ್ಯಾಂಕ್ಸ್ ಮೂವ್ ಮಾಡತಕ್ಕವರು ಇಂಗ್ಲೀಷ್‌ನಲ್ಲಿ ಮಾತನಾಡುತ್ತಿದ್ದಾರೆ. ಇದು ಸರ್ಕಾರದ ನೀತಿ.

ಶ್ರೀ ಭಾಸ್ಕರ್ ಶೆಟ್ಟಿ.—ಮಾನ್ಯ ಸದಸ್ಯರಿಗೆ ಕನ್ನಡ ಸರಿಯಾಗಿ ಬರದೇ ಇರುವುದರಿಂದ, ಇಂಗ್ಲೀಷ್ ನಲ್ಲಿ ಮಾತನಾಡುತ್ತಿದ್ದಾರೆ.

SRI V. M. KUSHNOOR.—Sir, I am going to speak in English. Our Government came into existence in the month of January 1980 and it has completed one year. During this one year it has fulfilled so many obligations and it has completed so many schemes. I am going to narrate one by one. During this one year of this young Government of Sri R. Gundurao, it has faced so many problems boldly first of all he has tried to give a clean administration to the State and he took a drive to clear the files and I think the State and Hon'-ble Members know that. He has cleared more than 2 lakh files. Not only that. For several years, after the establishment of Karnataka, there was a practice of giving extension to those who have retired. Extension was being given to them all these years. Due to Shri Gundu Rao and his Cabinet they have stopped this practice and it was the bold decision Otherwise these old Govt. servants always used to influenceand wanted to continue in Govt. service. This practice has beenstopped and today I say boldly that this is the one State where this extension has been stopped. Not only that. There were several Boards and Corporations which were established by previous Government in order to satisfy some of the disgruntled elements and those Boards and Coporations were not useful for any purpose. Therefore, those Boards and Corporations have been abolished. This is also one of the boldest decision taken by the Government. No hief Minister has taken such a bold decision. Even though there is lot of pressure in the State he took such a step. Sir, in the earlier regime there was lot of interference for tran fers, cancellation and modification of transfers etc. Everytime influence was used to stop transfers. But fortunately due to bold step taken by Sri R. Gundu Rao, nobody can influence, even the MLAs and MPs. Nobody can enthuse or influence in cases of transfers. I think in one or two cases he suspended the officers who brought influence. What I am going to say to this House this at Sri Gundu Rao and his Cabinet have taken a bold step to have a clean administration.

Now I will come to some of the points raised by the Governor in his address. When this Government took charge, immediately there were demands from the public and especially from farmers. They say that their demands were not looked into by the previous Governments. I think if my memory is correct, when he came to Bhalki he announced that he will look into the matter and all the problems of farmers would be solved and he promised that he will constitute a committee immediately. After he constituted a committee under the Chairmanship of Shri S Bangarappa the then Revenue & Agriculture Minister, the committee submitted its interim report in the month of July. And on 30th July' 80 before the House he announced several other concessions to the Agriculturists. Even after that, there was agitation and some incidents took place. Incidents in Belgaum and in North Karnataka were violent and in Hassan and other places there was not so much violence. But after these incidents also Shri Gundu Rao appointed a committee under the leadership of Shri S. R. Bommai to go into the details and to submit a report to find out what are the reasons. After he submitted the report, the Chief Minister himself visited all these plac s where such kind of ineidents took place. He is the first Minister who went to the spot after the incidents. He saw the place and he enquired the people and after that the Finance Minister and other ministers also went to enquire into the matter. Not only that. On 17th October 80 there was an agitation, what you call, the farmers' agitation, and they put 19 demands and out of 19 demands 12 demands have been conceded within 24 hours. Can you show any example in this country where the Chief Minster has accepted demands within 24 hours, that too 12 demands out of 19 ?

SRI P. RAMDEV.—Not in the entire world.

SRI V. S. KUSHNOOR —You will have to accept it. These are all hard facts. What kind of demands were put and what kinds of demands, he conceded. They are all major demands especially I will bring to the notice of this Hon'ble House - First is abolition of betterment levy, another was reduction of water rate, third is abolition of tractors tax and income tax on agriculture. 4th was the reduction of what you call, the power charges on IP sets used by the agriculturists and the reduction of sale tax on fertilisers from 3 ercent to 2 percent. All these demands, he has conceded. even though there was a lot of difficulty to the exchequer. One thing I want to ask here Inspite of that even till today there is a Jatha and there is agitation. There are only two demands which are still unaccepted. I do not know for what purpose they are making this agitation.

2-00 P.M.

One of the reasons is the release of agitators who have been put in jail in connection with the agitation which took place at Naragund and Navalgund. and the other is about the waiver of loans. These are the two demands put forth by them. With regard to waiver of loans, the Government will have to consult the Reserve Bank of India and the Agriculture Re-finance Development Corporation and other nstitutions. I want to bring to the notice of the House that this kind of demands are being made by agriculturists. They want the Government to waive off the betterment levy. In Karnataka 20% of the people are covered under irrigation, if I am wrong, I may be corrected. And we have spent about Rs. 700 lakhs on these projects.

AN HON. MEMBER.—It is not 20%, it is 13%.

SRI V. M. KUSHNOOR —All right, let it be 13% only. What is the demand of the 13% of the people who enjoy the benefits of irrigation facilities ? Their demand is that betterment levy should be abolished. There are still 87% of people who are not getting any irrigation facility at all Now, the question is those people who have got. ......

SRI K. RAMESH KUMAR.—Sir, I think the hon. Member is confused. It is not the percentage of peoplo who are covered under irrigation that is important, but it is the percentage of land that is covered under irrigation, that is important.

SRI V. M KUSHNOOR. —All right, it is 13% of the land which is covered under irrigation and still 87% of the land is dry, which is not covered under irrigation. The people of 13% irrigated land are creating a lot of uproar saying that we must go to their rescue by abolishing the betterment levy. If we abolish the betterment levy, how are we going to get back Rs. 700 lakhs. which has already been invested in these projects and how are we going to cover the remaining 87% of the unirrigated lands under irrigation. How are we going to utilise the other irrigation projects which we will have to take up? The State is not going to stop its progressive activities here itself. We will have to develop agriculture in other areas also. The remaining 87% of the unirrigated lands will also have to be brought under irrigation and cultivated. Today if you say that we will have to for go the loan amount, how can we find the resources to develop the unirrigated areas ? If we do like that, we cannot provide irrigation facilities even to 50% of the 87% of unirrigated areas of our State.

SRI K. H. SRINIVAS.—May I know whether the hon. Member is defending the abolition of the betterment levy or opposing it ?

SRI V. M. KUSHNOOR.—Inspite of giving all these concessions. they are still on agitaion. Therefore, I am asking what for they are agitating and why for they are agitating ?

MR. SPEAKER.—When the Government had taken a decision to give large number of concessions to farmers, still they are agitating, that is his intention, perhaps.

SRI V. M. KUSHNOOR.—I am bringing this point to the notice of the Members with some seriousness. Even after having incurred so much of loss, the Government have conceded so many demands. They must thank the Government. Instead of it, they are continuing their agitation.

SRI B. SUBBAIAH SHETTY.—Sir, he seems to be objecting the abolition of better ment levy.

SRI V. M. KUSHNOOR.—If you take in that sense, I cannot help you. Even after giving all sorts of concessions, you have not stopped your agitations and you are bringing all of them to present memorandum. Therefore, I am asking the persons who are managing this kind of agitation, what are their demands; what more they want from the Government ? When the Government has sustained so much of loss, what more do they want from the Government ? I am not against anybody or in favour of anybody. I say that this agitation is not correct, and further demands putforth are not justified. Now, I would like to go even a step further and say, that if we do not raise the reasources from agriculture, we will not have sufficient money for future irrigation projects Therefore, we have to raise resources from agriculture. There must be a limit for their demands. We have to see that we get resources to complete large number of irrigation projects in Hyderabad-Karnataka areas and other backward areas. which have not yet been completed due to paucity of funds. Unless we have the resources, we cannot complete all these projects.

I will come to another peculiar type of demand, which we still have not accepted. The demand is with regard to waiving of loans due to Scheduled Banks and Co-operative Institutions. This is one of the 19 demands of the farmers. In our State, the Co-operative Land Development Banks and Primary Land Developement Banks have advanced Rs. 160 crores as long term loans. Due to this kind of agitation, the recovery process has been stopped; with the result all the banks have become defaulters. My humble request to the hon. Members on the Opposite side is that, no society will progress with this kind of methods This kind of agitations will not help our farmers. also. The same thing is happening with short term and medium term loans.

ಶ್ರೀ ಆರ್. ಎಸ್. ಪಾಟೀಲ್.—ಇದನ್ನು ಕೊಡುವುದರಿಂದ ಉಪಯೋಗವಾಗಿದೆ ಎಂದು ಹೇಳಿದಿರಿ ಆದರೆ ಇದನ್ನು ಮೊದಲೇ ಏತಕ್ಕೆ ಹೇಳಲಿಲ್ಲ.

SRI V. M. KUSHNOOR.—Even the short term and medium term loans advanced by 19 Central Co-operative Banks, by several Nationalised Banks and some D. C. C Banks except Mandya where 55% recovery is there so far even 5% of the loan is not recovered. This is all due to the agitation. Therefore, I request the responsible hon. Members of this House to say categorically....

SRI K. RAMESH KUMAR.—On a point of order. Sir, I think the hon. Member has to address the Chair, but not the entire House.

SRI VEERA SHETTY KUSHNOOR.—Sir, I appeal to all the hon'ble Members of this House not to support this kind of agitation.

SRI K. H. SRINIVAS.—Sir, the member himself is very disturbed. So, there is no question of hearing him.

SRI VEERA SHETTY KUSHNOOR.—I am not disturbed. I am expressing my feelings about the status of the economy of the State, and about the credit movement of the entire State. I am bringing to the notice of the hon'ble Members through you Sir, the position of the credit movement of this State. Sir, if we do not recover the loan which you have advanced to the farmers, I think it will be difficult for us to see any agricultural development in the coming years and ultimately the agricultural production will suffer to a great extent. That is why I am pleadidg that this demand which has been putforth by the farmers should not be pressed. Sir, Rs. 160 crores which have been given as loan has been obtained from the Agricultural Refinance Development Corporation and the World Bank. These two institutions have advanced loans to the State Land Development Bank of this State and through the State Land Development Bank we have advanced loans to the agriculturalists. That apart, the Government sold debenture bonds to assist the agriculturists. Supposing we do not recover the loans advanced, what will be the position of the debenture holders? Sir, for the first time in the history of our State the State Land Development Bank has become default and it is going to be defaulter in repaying the amount. This is one thing. Secondly, I would like to bring to the notice of the hon'ble Members through you about the working of the D. C. C. Banks. Out of 19 D. C. C. Banks except one, 18 other banks are all defaulters to the Reserve Bank of India. They are not in a position to repay their dues to the Reserve Bank of India. In this situation how are we going to strengthen the agricultural development and how we are going to repay the dues? Therefore, I appeal to all the hon'ble Members to co-operate with the Government in correcting the imbalance. We, as members, of this

House will have to think over the future of the agricultural development in our State. If we do not think in that direction the interest of nearly 35 lakhs of agricultural families in this State will suffer and out of that, there are nearly 17 lakhs small and marginal farmers. Therefore, we must educate the people to pay the loans due to the Government in order to improve the agricultural sector. Otherwise the agricultural economy in our State will suffer to a great extent. Why I am saying this is because due to such an agitation the agricultural economy has been affected in Tamil Nadu and Maharastra, and if this were to continue in this fashion, it may happen in Karnataka also. This is my impression, not only the impression, but I have seen such a position with my own eyes after visiting those States. Therefore, let not the Members indulge in loose talks and say there shall not be recovery of dues from the farmers.

SRI K. H. SRINIVAS — Sir, I was under the impression that the hon'ble Member was thanking the Governor and also the Government for the address that the Governor was pleased to deliver. But while hearing his speech I am inclined to come to irresistable conclusion that he is moving several amendments to the Governor's address. While the Governor in his address has said that several irrigation projects will be taken up, the Member says unless there is some other form of levy we cannot think of executing the projects. Further, the Member was pleased to state that waiving of levy in the agricultural sector should not be entertained. Therefore, I would like to know whether he is thanking the Governor for his address or warning the Government

SRI VEERA SHETTY KUSHNOOR.—Sir, it is not my intention. I am not warning the Government. I only said about the agitation that is going on. I am not moving any amendments nor warning the Government. I am only submitting my plea to solve the problem. I am placing facts before you and expressing my feelings. I am not speaking against the Governor's Address.

Now, I will come to other points which have been stated in several places and on several occassions by the Opposition Members and also by other people, that this Gundu Rao's Government is not serving the weaker sections of the society and earlier Government was very much concerned about them. In this connection I would like to tell the facts and figures about what action Gundu Rao's Government has taken to uplift and to raise the economic conditions of the Backward Classes, Scheduled Castes and Scheduled Tribes and the minorities. I will take one by one. First of all I will tell you about the scheme for SCs/STs. Our Government has prepared a special scheme for the improvement of economic conditions of SCs/STs.

The scheme costing Rs. 89.57 crores has been prepared and will cover 100 villages where scheduled caste people are in a majority. Under this scheme 1650 borewells, 730 irrigation pumpsets and 100 open wells are going to be formed.

Then, Sir, under the Janatha Housing Scheme which was started by the earlier Government, the assistance given was only Rs. 1,500. Now it has been increased to Rs. 2,000. Sir, under the Bhagya Jyothi Scheme, 30,000 houses are going to be covered by the end of this year. The Government is also going to provide electricity to the Scheduled Caste/Scheduled Tribe houses. A special scheme has also been prepared by the Government to supply electricity to the tribal colonies of Mysore, Coorg and South Kanara at a cost of Rs. twenty-two lakhs. This scheme is also going to be completed before the end of this year.

The Employment Affirmation Scheme started earlier in the 45 talukas only is going to be extended to all the talukas of our State. These are all the schemes taken by the Government in order to raise the standards of the Scheduled Castes/Scheduled Tribes and have-nots. I am sure, that these schemes when taken up by our Government will not be helpful to the economically sound and rich sections of the society. These are all the schemes, not only to strengthen the Schedule Castes and Scheduled Tribes, but for the economic uplift-ment and betterment of the backward classes also.

A Scheme for Rs. Nine crores has been prepared under which, nearly two lakhs of artisans will be covered and benefited. The Government is going to supply the artisans with raw materials, marketing facilities etc. Carpenters, Blacksmiths, Cobblers, Tailors and host of others belonging to backward classes will be benefited by this scheme. Another scheme has been introduced by the Government at a cost of Rs. 25 lakhs for the social improvement of the Muslims.

There was a grievance and even now there is, regarding the inadequate representation of the Scheduled Castes and Scheduled Tribes in the services inspite of the Constitutional guarantees. Our Government have therefore constituted a High Power Committee to review the implemention of reservation orders and to suggest measures to increase the representation of Scheduled Castes and Scheduled Tribes in the services. These are all the measures taken by our Government to safeguard the interest of the backward classes, minorities, Harijans and other weaker sections of the society under the dynamic leadership of Sri R. Gundu Rao.

Another important decision taken by our Government is to provide drinking water facilities to all the villages in our State by November, 1981. Since the Gram Panchayats are not in a position to pay the electricity bills, the Government has taken over the responsibility to pay the electricity bills of these Panchayats enabling them to function without any interruption. These decisions have been taken in the interest of the State and in the interest of the people. I think, nobody can deny that these measures are not going to benefit the people of the rural areas.

Then Sir, the Slum Clearance and Improvement Board will be activised to complete 188 schemes including 102 on-going schemes. The Government has given financial back up by earmarking Rs. 119 lakhs for slum clearance and improvement works during the current financial year 1980-81. A sum of Rs. 25 lakhs is set apart specially for Scheduled Castes and Scheduled Tribes as special component plan during 1980-81 and Rs. 80 lakhs during 1981-82. In this way, the Government is making its best to support the have-nots and to bring them on par with the other sections.

The Harangi and Hemavathy projects have been commissioned. Our Sixth Five year Plan has already been approved and our outlay is Rs. 2,265 crores, in addition to Rs. 135 crores which have been given exclusively for the Cauvery Valley Projects. I think, our plan will start in right earnest. The resources will be made available and the Government of India will also extend finances. I am sure, there will not be any hitch for taking up our projects.

Lastly, I would like to take a couple of minutes to speak about the Land Reforms. This year, from 12th January to-date, as many as 50,550 cases have been decided out of which 44,910 are the cases of the tenants. 28,809 cases have been decided in favour of tenants and nearly one lakh pattas have been issued during this period. From all this, it is clear that the Government was not lacking in its efforts. The Government has done its duty. For the past one year, the Government has served faithfully the State and the people of this State.

With these words, I thank the Governor for his Address. Thank you sir.

೨-೩೦ ಪಿ.ಎಂ.

ಶ್ರೀ ಮಂಚೇಗೌಡ (ಮದ್ದೂರು).—ಮಾನ್ಯ ಸಭಾಧ್ಯಕ್ಷರೆ. ಮಾನ್ಯ ಸದಸ್ಯರಾದ ಶ್ರೀ ಕುಶನೂರ್ ಅವರು ರಾಜ್ಯಪಾಲರ ಭಾಷಣದ ಮೇಲೆ ಸೂಚಿಸಿರತಕ್ಕ ವಂದನಾನಿರ್ಣಯವನ್ನು ನಾನು ಮನಃ ಪೂರ್ವಕವಾಗಿ ಅನುಮೋದಿಸುತ್ತೇನೆ. ಹಾಗೂ ಬೆಂಬಲಿಸುತ್ತೇನೆ. ಮಾನ್ಯ ಸದಸ್ಯರು ರೈತರ ಬಗ್ಗೆ, ರೈತರ ಚಳುವಳಿಯ ಬಗ್ಗೆ ಮಾತನಾಡುವುದಕ್ಕೆ ಪ್ರಾರಂಭ ಮಾಡಿದಾಗ ಸ್ವಲ್ಪ ನಮ್ಮ ವಿರೋಧ ಪಕ್ಷ

ದಲ್ಲಿರತಕ್ಕಂತಹ ಸ್ನೇಹಿತರು ಸ್ವಲ್ಪ ಚಕಮುಕಿ ಕೂಡ ಪ್ರಾರಂಭ ಮಾಡಿದರು. ಅವರು ರಾಜ್ಯದಲ್ಲಿ ಬಹಳವಾಗಿ ಸಮಾಜಸೇವೆಯಲ್ಲಿ ಪಳಗಿರತಕ್ಕಂತಹವರು. ಅಂತಹ ಅನೇಕ ಮಂದಿ ಸದಸ್ಯರು ವಿರೋಧ ಪಕ್ಷದಲ್ಲಿಯೂ ಇದ್ದಾರೆ ಬಹುಶಃ ಇದು ನಮ್ಮ ಭಾಗ್ಯ. ಅನುಭವಿಗಳು ವಿರೋಧಪಕ್ಷದಲ್ಲಿ ಇದ್ದದ್ದೇ ಆದರೆ ಸರ್ಕಾರ ನಡೆಸುವುದಕ್ಕೂ ಕೂಡ ಬಹಳ ಸುಲಭವಾಗುತ್ತದೆ, ರಾಜ್ಯಪಾಲರು ಭಾಷಣ ಮಾಡ ತಕ್ಕಂಥಾ ಸಂದರ್ಭದಲ್ಲಿ ಅದರಲ್ಲಿ ಮೊಟ್ಟಮೊದಲನೆಯದಾಗಿ ಏನು ಹೇಳಿದ್ದಾರೆ ಎಂದರೆ ಇಂದಿನ ಸರ್ಕಾರ ಏನು ಇದೆ ಶ್ರೀಮಾನ್ ಗುಂಡೂರಾಯರ ನಾಯಕತ್ವದ ಸರ್ಕಾರ ಏನು ಇದೆ ಈ ಸರ್ಕಾರ ಅಧಿ ಕಾರಕ್ಕೆ ಬಂದ ಕೆಲವೇ ದಿವಸಗಳಲ್ಲಿ ರೈತ ಚಳುವಳಿ ಪ್ರಾರಂಭವಾಗಿ ಈಗ ಅದು ಹಿಂಸಾತ್ಮಕ ಚಳುವಳಿಗೆ ತಿರುಗಿ ಅನೇಕ ಕಷ್ಟನಷ್ಟಗಳು ಸಂಭವಿಸಿತು ಅಂತ ಹೇಳಿದ್ದಾರೆ ಬಹುಶಃ ಅದಕ್ಕೆ ಅನೇಕ ಕಾರಣಗಳು ಉಂಟು. ಅಧ್ಯಕ್ಷರೇ ತಮಗೆ ಗೊತ್ತಿರುವ ಹಾಗೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಫಾರ್ಮರ್ಸ್ ಫೆಡರೇಷನ್ ಅಫ್ ಇಂಡಿಯಾ ಎನ್ನತಕ್ಕಂಥಾದ್ದು ಇದ್ದರೂ ಕೂಡ ಅದು ದೊಡ್ಡ ದೊಡ್ಡ ರೈತರ ಸಂಘಟನೆ ಯಾಗಿತ್ತು. ೧೯೭೩ನೇ ಇಸವಿಯಲ್ಲಿ ರೈತ ಕಾರ್ಮಿಕ ಸಂಘ ಅಸ್ತಿತ್ವಕ್ಕೆ ಬಂದು ಮೊದಲನೇ ಸಮ್ಮೇಳನ ವನ್ನು ಬೆಂಗಳೂರಿನಲ್ಲಿ ಏರ್ಪಾಟು ಮಾಡಲಾಗಿತ್ತು. ಮಾನ್ಯ ಅಧ್ಯಕ್ಷರೆ, ಅವೊತ್ತಿನ ದಿವಸ ತಾವು ಮಂತ್ರಿಗಳಾಗಿದ್ದೀರಿ ಬಹುಶಃ ರೈತ ಚಳುವಳಿಗೆ ಅವರ ಒಂದು ಸಂಘಟನೆಗೆ ಆ ಸಂದರ್ಭದಲ್ಲಿ ಸರ್ಕಾರ ದಿಂದ ಎಷ್ಟರಮಟ್ಟಿಗೆ ನಮಗೆ ಬೆಂಬಲ ದೊರೆಯುತ್ತಾ ಇತ್ತು? ಈಗ ಶ್ರೀಯುತ ಗುಂಡೂರಾಯರಸರ್ಕಾರ ದಲ್ಲಿ ಎಷ್ಟರಮಟ್ಟಿಗೆ ಬೆಂಬಲ ದೊರೆಯುತ್ತಾ ಇದೆ ಎನ್ನುವುದನ್ನು ಬಹುಶಃ ಈ ಸಂದರ್ಭದಲ್ಲಿ ಯೋಚನೆ ಮಾಡತಕ್ಕಂಥಾದ್ದು ಸಮಯೋಚಿತವಾದುದ್ದು ಎಂದು ನನ್ನ ಭಾವನೆಯಾಗಿದೆ, ರೈತ ಕಾರ್ಮಿಕ ಸಂಘದ ವತಿಯಿಂದ ರೈತ ಸಮ್ಮೇಳನವನ್ನು ಬೆಂಗಳೂರು, ಶಿವಮೊಗ್ಗಾ, ಮತ್ತು ಹಾಸನ ಈ ಭಾಗಗಳಲ್ಲಿ ನಡೆಸಿದಾಗ ಎಷ್ಟು ಅಡಚಣೆಗಳು ಉಂಟಾದವು ಅನ್ನುವುದನ್ನು ಯೋಚನೆ ಮಾಡಬೇಕು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಆ ಸಂದರ್ಭದಲ್ಲಿ ನಾನು ರೈತ ಸಂಘದ ಸಂಘಟನಾ ಕಾರ್ಯ ದರ್ಶಿಯಾಗಿ ಹಾಗೂ ಪ್ರಧಾನಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದರಿಂದ ಹೇಳುತ್ತಿದ್ದೇನೆ. ಆಗ ರೈತರ ಈ ಒಂದು ಚಳುವಳಿಯನ್ನು ಮಟ್ಟ ಹಾಕಬೇಕು ಎನ್ನುವುದು ಅಂದಿನ ಸರ್ಕಾರದ ಒಂದು ನೀತಿ ಯಾಗಿತ್ತು, ಬಹುಶಃ ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಈವೊತ್ತು ಯೋಚನೆ ಮಾಡುವು ದಾದರೆ ಇಂದಿನ ಶ್ರೀಯುತ ಗುಂಡೂರಾಯರ ಸರ್ಕಾರವನ್ನು ನಾವು ರೈತರ ಪರವಾಗಿ ಹಾಗೂ ಜನತೆಯ ಪರವಾಗಿ ಶ್ಲಾಘಿಸಬೇಕಾಗಿದೆ.

ಶ್ರೀ ಪಿ. ರಾಂದೇವ್.—ತಾವು ನಮ್ಮ ಅಭಿಪ್ರಾಯನ್ನೂ ಕೂಡ ಮೊದಲು ತಿಳಿದುಕೊಳ್ಳಿ.

ಶ್ರೀ ಮರಿಂಚೇಗೌಡ.—ಮೊದಲು ನಮ್ಮ ಅಭಿಪ್ರಾಯ ತಿಳಿದುಕೊಳ್ಳಿ ಅನಂತರ ತಮ್ಮ ಅಭಿಪ್ರಾಯ ಕೇಳೋಣ. ಅಂದಿನ ಸರ್ಕಾರದಲ್ಲಿ ಈ ರೈತರ ಒಂದು ಸಂಘಟನಾ ಶಕ್ತಿಗೆ ಏನು ಅಡ್ಡಿ ಆತಂಕಗಳು ಇತ್ತೋ ಅದು ಈಗ ಇಲ್ಲ. ಅಷ್ಟೇ ಅಲ್ಲ ಅಂದು ಈ ರೈತರ ಒಂದು ಸಂಘಟನೆಗೆ ಏನೇನು ಅನಾನು ಕೂಲತೆಗಳು ಇತ್ತೋ ಅದು ಈಗ ಇಲ್ಲ, ಬಹಳ ಅನುಕೂಲತೆಗಳನ್ನು ಇಂದಿನ ಸರ್ಕಾರ ರೈತರಗೆ ಕಲ್ಪಿಸಿ ಕೊಟ್ಟಿದೆ. ಅಧ್ಯಕ್ಷರೇ, ತಮಗೆ ಹೇಳಬೇಕಾದರೆ ಬಹುಶಃ ಇಡೀ ರಾಷ್ಟ್ರದಲ್ಲಿ ರೈತರ ಬಗ್ಗೆ ಒಂದು ಶ್ವೇತ ಪತ್ರವನ್ನು ಪ್ರಕಟಣೆ ಮಾಡಿರತಕ್ಕಂಥಾದ್ದು ಎಂದರೆ ಈ ಸರ್ಕಾರ ಅಂದರೆ ಶ್ರೀಯುತ ಗುಂಡೂರಾಯರ ಸರ್ಕಾರ. ಅಷ್ಟೇ ಅಲ್ಲ ರೈತರ ಒಂದು ಕಷ್ಟಸುಖಗಳನ್ನೂ ಕೂಡ ತಿಳಿದುಕೊಂಡು ಅವರಿಗೆ ಅನೇಕ ಕನ್‌ಸೆಷನ್ಸ್‌ಗಳನ್ನು ಕೊಟ್ಟಿದ್ದಾರೆ, ಅದು ಯಾವ ಸರ್ಕಾರ ಎಂದರೆ ಶ್ರೀಯುತ ಗುಂಡೂರಾಯರ ಸರ್ಕಾರ. ರೈತರ ಚಳುವಳಿ ಈ ದಿವಸ ಹೇಳಬೇಕಾದರೆ ಅವಶ್ಯಕತೆ ಏನು ಇತ್ತು ಅದನ್ನೂ ಕೂಡ ನಾವು ಯೋಚನೆ ಮಾಡಬೇಕಾಗಿದೆ. ಅಧ್ಯಕ್ಷರೇ, ಈಗ ನಮ್ಮ ರಾಜ್ಯದಲ್ಲಿರತಕ್ಕಂಥಾ ಜಮೀನನ್ನು ತೆಗೆದು ಕೊಂಡರ್ರೆ ಬೇಸಾಯಕ್ಕೆ ಯೋಗ್ಯವಾದಂಥಾ ಜಮೀನಿನ ಲೆಕ್ಕ ತೆಗೆದುಕೊಂಡರೆ ಸುಮಾರು ೨ ಕೋಟಿ ೬೦ ಲಕ್ಷ ಎಕರೆ ಜಮೀನು ಇದೆ. ಹಿಂದೆ ಅಂದರೆ ೧೯೭೩ನೇ ಇಸವಿಯಲ್ಲಿ ರೈತರು ಚಳುವಳಿ ಪ್ರಾರಂಭ ಮಾಡಿದಾಗ ನಮ್ಮ ದೇಶದ ಜನಸಂಖ್ಯೆ ೩ ಕೋಟಿ ಇದ್ದಿತು. ಇಂದು ೩ ಕೋಟಿ ೬೬ ಲಕ್ಷ ಜನಸಂಖ್ಯೆ ಇದೆ. ಇದನ್ನು ಲೆಕ್ಕ ಹಾಕಿದರೆ ತಮಗೆ ಗೊತ್ತಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಗೆ ಮುಕ್ಕಾಲು ಎಕರೆಯೂ ಕೂಡ ಸಿಕ್ಕುವುದಿಲ್ಲ. ಇಷ್ಟೇ ಅಲ್ಲದೆ ಬಹುಭಾಗ ಜಮೀನು ಪ್ರವಾಹಕ್ಕೆ ಈಡಾಗಿದೆ, ಇದರಿಂದ ಉತ್ಪನ್ನ ಎಷ್ಟು ಎಷ್ಟು ಬರಬೇಕಾಗಿತ್ತೋ ಅಷ್ಟು ಬರುವುದು ಕಡಿಮೆಯಾಗಿದೆ. ಮತ್ತು ಈ ರಾಜ್ಯದ ಬಹುಭಾಗ ಕ್ಷಾಮಕ್ಕೆ ಈಡಾಗಿ ಅಲ್ಲೂ ಕೂಡ ಉತ್ಪನ್ನಕ್ಕೆ ಧಕ್ಕೆ ಬಂದಿದೆ ದೇಶದಲ್ಲಿ ಹೀಗೆ ಉತ್ಪನ್ನ ಕುಸಿದು ಬಿದ್ದಿರುವಾಗ ರೈತರು ಕಷ್ಟಪಟ್ಟು ಮಾಡಿದಂಥಾ ಬೆಳೆಗೆ ಸರಿಯಾದ ಪ್ರತಿಫಲ

ದೊರೆಯದೇ ಹೋದರೆ ನಿಜವಾಗಿ ರೈತರು ತಮ್ಮ ಬುದ್ಧಿ ಸ್ವಾಧೀನತೆಯನ್ನು ಕಳೆದುಕೊಳ್ಳುತ್ತಾರೆ. ಇದು ನಮ್ಮ ರಾಜ್ಯಕ್ಕೆ ಮಾತ್ರ ಸೀಮಿತವಲ್ಲ. ಈ ಸಮಸ್ಯೆ ಇಡಿ ರಾಷ್ಟ್ರದಲ್ಲಿ ಇದೆ. ಇದಕ್ಕೆ ಅನೇಕ ಕಾರಣಗಳು ಇವೆ. ಈಗಿನ ಸರ್ಕಾರವೇ ಆಗಲಿ ಯಾವ ಸರ್ಕಾರವೇ ಆಗಲಿ ಪೂರ್ಣವಾಗಿ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುವುದಿಲ್ಲ. ಬಹುಶಃ ಆರನೇ ಪಂಚವಾರ್ಷಿಕ ಯೋಜನೆಯಲ್ಲಿ, ಹಿಂದಿನ ಒಂದು ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಹಣವನ್ನು ಒದಗಿಸಿದ್ದರೋ ಅದರ ಎರಡು ಪಟ್ಟು ಹಣ ಒದಗಿಸಿ ಕೆಲಸ ತೆಗೆದುಕೊಂಡಿದ್ದೇ ಆದರೆ ಸ್ವಲ್ಪಮಟ್ಟಿಗೆ ಸುಧಾರಿಸಬಹುದು. ತಮಗೆ ಹೇಳಬೇಕಾದರೆ ೧೯೭೧ರ ಜನಸಂಖ್ಯೆಗೂ ಇಂದು ಬೆಳೆದಿರತಕ್ಕಂಥಾ ಜನಸಂಖ್ಯೆಯನ್ನೂ ಕೂಡ ಲೆಕ್ಕಕ್ಕೆ ತೆಗೆದುಕೊಂಡರೆ ಈಗ ನಮ್ಮ ರಾಜ್ಯದಲ್ಲಿ ೭೦ ಲಕ್ಷ ಜನ ಹೆಚ್ಚಾಗಿದ್ದಾರೆ. ಇದರ ಜೊತೆಗೆ ನಿರುದ್ಯೋಗ ಸಮಸ್ಯೆ ತಲೆ ಎತ್ತಿದೆ. ಇದಕ್ಕೆ ಕಾರಣ ಏನು ಇದೆ. ನಮ್ಮ ದೇಶದಲ್ಲಿ ಜನಸಂಖ್ಯೆ ಜಾಸ್ತಿಯಾಗುತ್ತಾ ಇರುವುದೇ ಒಂದು ಮೂಲ ಕಾರಣವಾಗಿದೆ. ಆದುದರಿಂದ ತಮಗೆ ಹೇಳಬೇಕಾದರೆ ಈ ಸ್ವತಂತ್ರಭಾರತದಲ್ಲಿ ಜನಸಂಖ್ಯೆಯನ್ನು ಕಡಿಮೆ ಮಾಡಬೇಕು ಎಂದು ಯಾರಾದರೂ ಪ್ರಯತ್ನ ಪಟ್ಟಿದ್ದರೆ ಇಂದು ನಮ್ಮ ಕಣ್ಮರೆಯಾಗಿರತಕ್ಕಂಥಾ ಶ್ರೀಯುತ ಸಂಜಯಗಾಂಧಿಯವರು ಅವರು ಈ ಬಗ್ಗೆ ಬಹಳ ಪ್ರಾಮಾಣಿಕವಾಗಿ ಪ್ರಯತ್ನ ಪಟ್ಟು ಜನಸಂಖ್ಯೆಯನ್ನು ಕಡಿಮೆ ಮಾಡಬೇಕು ಎನ್ನುವ ಕಾರ್ಯಕ್ರಮ ಹಾಕಿಕೊಂಡರು. ಆ ಬಗ್ಗೆ ಇಡೀ ದೇಶದಲ್ಲಿ ಚಳುವಳಿಯಾಯಿತು. ನಂತರ ಇದನ್ನು ರಾಜಕೀಯವಾಗಿ ಉಪಯೋಗಿಸಿಕೊಂಡು ಈ ಹೋರಾಟ ಹೊರಟುಹೋಯಿತು. ಬಹುಶಃ ನಾವು ಇಂದು ಜ್ಞಾಪಿಸಿಕೊಳ್ಳಬೇಕಾಗಿದೆ ದೇಶದಲ್ಲಿ ಈ ಜನಸಂಖ್ಯೆಯನ್ನು ಕಡಿಮೆ ಮಾಡಬೇಕು ಎಂದು ಈ ಸದನದ ಸದಸ್ಯರು ಮನಸ್ಸು ಮಾಡಬೇಕು ಅಥವಾ ನಮ್ಮ ರಾಷ್ಟ್ರದ ಬುದ್ಧಿವಂತ ಜನ, ಜವಾಬ್ದಾರಿಯಾಗಿರತಕ್ಕಂಥಾ ಜನ ಜನಸಂಖ್ಯೆಯನ್ನು ಮಿತಿಗೊಳಿಸುವುದಕ್ಕೆ ಸರ್ವ ಪ್ರಯತ್ನ ಮಾಡದೇಹೋದರೆ ಈ ದೇಶದಲ್ಲಿರತಕ್ಕಂಥಾ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವೇ ಎನ್ನುವ ಪ್ರಶ್ನೆಯನ್ನು ನಾವು ಹಾಕಿಕೊಳ್ಳಬೇಕಾಗಿದೆ. ಬಹುಶಃ ಇದು ಕಾನೂನು ರಚನೆಯಿಲ್ಲದೆ ಬರೇ ಬೋಧನೆ ಮಾಡಿದರೆ ಆಗುವುದಿಲ್ಲ. ನಮ್ಮ ದೇಶದಲ್ಲಿ ೧೦೦ಕ್ಕೆ ೭೦–೮೦ ರಷ್ಟು ಇರತಕ್ಕಂಥಾ ಅವಿದ್ಯಾವಂತ ಜನರು ಇದನ್ನು ಅರ್ಥಮಾಡಿ ಕೊಳ್ಳತಕ್ಕಂಥಾ ಶಕ್ತಿ ಇದೆಯೇ ? ಅವರನ್ನು ಸಮರ್ಥನೆ ಮಾಡತಕ್ಕಂಥಾ ಶಕ್ತಿ ಸರ್ಕಾರಕ್ಕೆ ಇದೆಯೇ ? ಇದನ್ನೆಲ್ಲಾ ನಾವು ಯೋಚನೆ ಮಾಡದೇ ಬರೇ ಸುಮ್ಮನೆ ದೇಶದಲ್ಲಿ ಬಡತನ ನೀಗಿಸುತ್ತೇವೆ ಅಂತ ಹೇಳುತ್ತಾ ಹೋದರೆ ಈ ಕೆಲಸ ಆಗುತ್ತದೆಯೇ ?

ಶ್ರೀ ಪಿ. ರಾಂದೇವ್.—ಮಾನ್ಯ ಮಂಚೇಗೌಡರಿಗೆ ಎಷ್ಟು ಜನ ಮಕ್ಕಳು ಸ್ವಾಮಿ ?

ಶ್ರೀ ಮಂಚೇಗೌಡ.—ತಮ್ಮ ಭಾವನೆಯನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ನಾವು ರಾಂದೇವರಿಗೆ ಮದುವೆ ಮಾಡಬೇಕು ಎಂದು ಎಷ್ಟು ಪ್ರಯತ್ನ ಪಟ್ಟರೂ ಕೂಡ ಪ್ರತಿಫಲ ದೊರೆಯಲಿಲ್ಲಾ.

ಶ್ರೀ ಜೆ.ಹೆಚ್. ಪಟೇಲ್.—ಜನಸಂಖ್ಯೆಯನ್ನು ಕಡಿಮೆ ಮಾಡಬೇಕಾದರೆ ಮದುವೆ ಆದವರು ಮಾತ್ರ ಕಾಂಟ್ರಿಬ್ಯೂಷನ್ ಮಾಡಬೇಕು ಅಂತಲ್ಲ, ಮದುವೆ ಆಗದೇ ಇದ್ದವರೂ ಕೂಡ ಕಾಂಟ್ರಿಬ್ಯೂಷನ್ ಮಾಡಬೇಕು.

ಶ್ರೀ ಗಟ್ಟಿ ಚಂದ್ರಶೇಖರ್.—ಮಾನ್ಯ ಮಂಚೆ ಗೌಡರಿಗೆ ಅದರೆ ಲೆಕ್ಕ ಸಿಕ್ಕುತ್ತದೆ, ಆದರೆ ತಮ್ಮಂಥಾವರದ್ದಾರೆ ಲೆಕ್ಕ ಸಿಕ್ಕುವದಿಲ್ಲ. ಅವರೆಲ್ಲಾ ಸಹಾಯ ಮಾಡಿದ್ದರೆ ನಮ್ಮ ದೇಶದಲ್ಲಿ ಇಷ್ಟೊಂದು ಅನಾಥಾಶ್ರಮಗಳು ಏತಕ್ಕೆ ಆಗುತ್ತಿತ್ತು ?

ಶ್ರೀ ಮಂಚೇಗೌಡ.—ಮಾನ್ಯ ಅಧ್ಯಕ್ಷರೇ ಸಮಾಜವಾದದ ತತ್ವ ಏನಿದೆ. ನಾವು ಪ್ರತಿನಿತ್ಯ ದಿನ ಪತ್ರಿಕೆಯನ್ನು ಓದಿದಾಗ ಮುಷ್ಕರ ಇಂತಹವುಗಳನ್ನು ನೋಡುತ್ತೇವೆ, ಇದಕ್ಕೆ ಮೂಲ ಕಾರಣ ಜನಸಂಖ್ಯೆಯ ಏರಿಕೆ, ಈ ವಿಷಯವನ್ನು ತಮ್ಮ ಮೂಲಕ ಮಾನ್ಯಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಜನಸಂಖ್ಯೆಯ ನಿಯಂತ್ರಣ ಬರಬೇಕು. ಬರೀ ಭಾಷಣಗಳನ್ನು ಮಾಡುವುದರಿಂದ ಬಹುಮಾನ ಕೊಡುವ ದೃಷ್ಟಿಯಿಂದ ನಾವು ಇದನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ರಾಜ್ಯದಲ್ಲಿ ಈಗಾಗಲೇ ಬಹುಶಃ ೩ ಕೋಟಿ ೬೦ ಲಕ್ಷ ಜನಸಂಖ್ಯೆಯಾಗಿದೆ. ೧೯೯೦ನೇ ಇಸವಿಯೊಳಗೆ ಬಹುಶಃ ೪,೪೨ ಕೋಟಿ ಜನಸಂಖ್ಯೆಯಾಗುತ್ತದೆ. ಆಗ ಮತ್ತಷ್ಟು ಸಮಸ್ಯೆಗಳು ಜಾಸ್ತಿಯಾಗುತ್ತವೆ. ಇದನ್ನು ಏತಕ್ಕೆ ಹೇಳುತ್ತೇನೆಂದರೆ ನಮ್ಮ ಸರ್ಕಾರ ಕಂಕಣಬದ್ಧವಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದೆ,

ಆದರಲ್ಲೂ ನೀರಾವರಿಕ್ಷೇತ್ರದಲ್ಲಿ ಕೈಗಾರಿಕೆ ಕ್ಷೇತ್ರದಲ್ಲಿ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಕೂಡ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡರೂ ಜನಗಳ ಮನಸ್ಸಿಗೆ ಶಾಂತಿ ಬರುತ್ತಿಲ್ಲ. ಎಷ್ಟೇ ಅಭಿವೃದ್ಧಿ ಕೆಲಸ ಮಾಡಿದರೂ ಜನಗಳಲ್ಲಿ ಅತೃಪ್ತಿ ಹೊಗೆಯಾಡುತ್ತಿದೆ ಇದನ್ನು ನಾವು ಗ್ರಹಿಸಬೇಕಾಗಿದೆ. ನಮ್ಮ ಮಾನ್ಯ ಸ್ನೇಹಿತರಾದ ಕುಶನೂರ್‌ರವರು ಹೇಳಿದರು, ರೈತರ ಬೇಡಿಕೆಗಳನ್ನು ನಮ್ಮ ಸರ್ಕಾರ ಎಷ್ಟೇ ಪೂರೈಸಿದರೂ ಸಹ ಅವರು ಪ್ರಚೋದನೆಯಿಂದ ಚಳುವಳಿ ಮಾಡತಕ್ಕಂತಹದ್ದು ಸರಿಯಾದ ಮಾರ್ಗವಲ್ಲ. ರಾಷ್ಟ್ರದ ಹಿತ ದೃಷ್ಟಿಯಿಂದ ರಾಜ್ಯದ ಹಿತದೃಷ್ಟಿಯಿಂದಅಶಾಂತಿಯನ್ನುಂಟುಮಾಡುತ್ತಿರುವುದು ಸರಿಯಾದುದಲ್ಲ. ನಮ್ಮ ದೃಷ್ಟಿಯಿಂದಲೂ ಸಹ ಅವರ ಮಾತನ್ನು ಒಪ್ಪಬೇಕಾಗಿದೆ. ಇವತ್ತು ರೈತರ ಅನೇಕ ಬೇಡಿಕೆಗಳನ್ನು ಈಡೇರಿಸಲಾಗಿದೆ. ಅಲ್ಲಿಗೂ ಕೂಡ ರೈತರು ಜಾಠಾ ಬರುತ್ತಿದ್ದಾರೆ ಇದಕ್ಕೆ ಕಾರಣವೇನು ? ಈಗ ರೈತರಿಗೆ ಕೊಟ್ಟಿರತಕ್ಕಂತಹ ಕನ್‌ಸೇಷನ್‌ಗಳಿಗಿಂತ ಮಿಗಿಲಾಗಿ ಕೊಡಲಿಕ್ಕೆ ಸಾಧ್ಯವಿದ್ದರೆ, ಪ್ರಶ್ನೆಗಳನ್ನು ಹಾಕಿ ಸದನದಲ್ಲಿ ಚರ್ಚೆಮಾಡಿ ಇತ್ಯರ್ಥಮಾಡುವುದಕ್ಕೆ ಸಾಧ್ಯವಿತ್ತು. ಈ ವಿಷಯವನ್ನು ಯಾತಕ್ಕೆ ತಮ್ಮ ಗಮನಕ್ಕೆ ತರುತ್ತೇನೆಂದರೆ. ೧೯೭೬ನೇ ಇಸವಿಯಲ್ಲಿ ಒಂದು ನೋಟೀಫಿಕೇಶನ್‌ನನ್ನು ಹೊರಡಿಸಿ ವಾಟರ್‌ರೇಟನ್ನು ಹೆಚ್ಚು ಮಾಡಿದರು. ಆಗ ನಾನು ಮತ್ತು ನನ್ನ ಸ್ನೇಹಿತರು ಹಿಂದಿನ ಮುಖ್ಯಮಂತ್ರಿಗಳ ಮತ್ತು ರೆವಿನ್ಯೂ ಮಂತ್ರಿಗಳ ಗಮನವನ್ನು ಈ ಸದನದಲ್ಲಿ ಪ್ರಶ್ನೆಗಳ ಮೂಲಕ ಮತ್ತು ಗಮನ ಸೆಳೆಯುವ ಸೂಚನೆಯ ಮುಖಾಂತರ ಅವರ ಗಮನ ಸೆಳೆದಾಗ, ನೀವು ಕಬ್ಬಿನ ಬೆಳೆಯನ್ನು ಬೆಳೆಯುವುದನ್ನು ಬಿಟ್ಟು ಬಿಡಿ ಎಂದು ಹೇಳಿದರು. ನಾವು ಇನ್ನೇನು ಮಾಡುವುದು ಕಬ್ಬನ್ನು ಬೆಳೆಯುವುದನ್ನು ಬಿಟ್ಟು ಬಿಟ್ಟೆವು.

ಅಧ್ಯಕ್ಷರು. —ಅಲ್ಲಿ ಕಬ್ಬನ್ನು ಬೆಳೆಯುವುದನ್ನು ಬಿಟ್ಟಿದ್ದರಿಂದ ಬೆಲ್ಲದ ರೇಟು ಜಾಸ್ತಿಯಾಯಿತು.

ಶ್ರೀ ಮಂಚೇಗೌಡ. —೧೯೭೮ರಲ್ಲಿ ಕಬ್ಬಿಗೆ ವಾಟರ್‌ರೇಟ್ ಜಾಸ್ತಿಮಾಡಿದಾಗ ನಾವು ಕಬ್ಬನ್ನು ಬೆಳೆಯುವುದನ್ನು ನಿಲ್ಲಿಸಿದೆವು. ಈಗ ರೈತರಲ್ಲಿ ಪ್ರಜ್ಞೆ ಜಾಸ್ತಿಯಾಗಿದೆ. ಈಗ ನಮ್ಮ ದೇಶದಲ್ಲಿ ಕಬ್ಬನ್ನು ಏನು ಬೆಳೆಯುತ್ತಿದ್ದಾರೆ ಅದರಲ್ಲಿ ಸುಮಾರು ೧/೫ ಭಾಗ ನಮ್ಮ ಮಂಡ್ಯ ಜಿಲ್ಲೆ ಒಂದರಲ್ಲೇ ಉತ್ಪಾದನೆಯಾಗುತ್ತದೆ. ೧೯೭೮ನೇ ಇಸವಿಯಲ್ಲಿ ಕಬ್ಬನ್ನು ಬೆಳೆಯುವುದನ್ನು ಕಡಿಮೆ ಮಾಡಿದ್ದರಿಂದ ೧೯೭೯–೮೦ರಲ್ಲಿ ನಾವು ಏನನ್ನು ನೋಡುತ್ತಿದ್ದೇವೆ, ಸಕ್ಕರೆ ಅಭಾವ. ಲಂಡನ್ ಮಾರ್ಕೆಟ್‌ನಲ್ಲಿ ಸಕ್ಕರೆ ಬೆಲೆ ಒಂದು ಕ್ವಿಂಟಾಲಿಗೆ ೧,೫೦೦ ರೂಗಳು ಇದೆ. ಅದ್ದರಿಂದ ಹೊರದೇಶಗಳಿಂದಲೂ ನಾವು ಸಕ್ಕರೆಯನ್ನು ಆಮದ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಈಗಿನ ಸರ್ಕಾರ ಕಬ್ಬನ್ನು ಬೆಳೆಯತಕ್ಕಂತಹವರಿಗೆ ಬಹಳ ಉತ್ತೇಜನವನ್ನು ಕೊಡುತ್ತಿದೆ. ವಾಟರ್ ರೇಟನ್ನು ಇಳಿಸಿ, ಒಂದು ಟನ್ ಕಬ್ಬಿನ ಬೆಲೆ ೧೧೦ ರೂಗಳು ಇದ್ದದನ್ನು ಇವತ್ತು ಒಂದು ಟನ್ನಿಗೆ ೨೨೦ಗಳವರೆಗೆ ಜಾಸ್ತಿಮಾಡಿದೆ. ಹಿಂದಿನ ಸರ್ಕಾರ ರೈತರ ಹಿತವನ್ನು ರಕ್ಷಣೆ ಮಾಡಿರಲಿಲ್ಲಾ. ಇವತ್ತಿನ ದಿವಸ ರೈತರ ಹಿತವನ್ನು ರಕ್ಷಣೆ ಮಾಡತಕ್ಕಂತಹ ಸರ್ಕಾರವಿರುವಾಗ ರೈತರು ಜಾಠಾ ಬರುತ್ತಿರತಕ್ಕಂತಹದ್ದು ಅನಾವಶ್ಯಕ. ರೈತರ ಏಳಿಗೆಗೆ ಮತ್ತು ಅವರ ಸಮಸ್ಯೆಗಳಿಗೆ ಪರಿಹಾರವನ್ನು ಇಂದಿನ ಸರ್ಕಾರ ಕಂಡುಕೊಂಡಿದೆ. ನಾವು ಗ್ರಾಹಕರ ಚಿಂತನೆಯನ್ನು ಮಾಡಬೇಕಾಗಿದೆ. ಬೆಳೆ ಬೆಳೆದವನ ಚಿಂತೆ ಮಾತ್ರವಲ್ಲ. ನಾವು ಒಂದೇ ಸಾರಿ ಬೆಲೆಯನ್ನು ಏರಿಸಿದಾಗ ಗ್ರಾಹಕನಿಗೆ ಕಷ್ಟವಾಗುತ್ತದೆ. ನಾವು ಯಾವುದನ್ನೆ ಮಾಡಬೇಕಾದರೂ ಹಂತಹಂತವಾಗಿ ಮಾಡಬೇಕಾಗುತ್ತದೆ. ರಾಜ್ಯಪಾಲರು ರೈತಾಪಿ ಜನಗಳ ಬಗ್ಗೆ ತಮ್ಮ ಭಾಷಣದಲ್ಲಿ ಹೇಳಿದ್ದಾರೆ, ನಮ್ಮ ಮುಖ್ಯಮಂತ್ರಿಗಳಿಗೆ ರೈತರ ಬಗ್ಗೆ ಅನುಕಂಪವಿದೆ. ಹಾಗೆಯೇ ಶಿಕ್ಷಣ ಕ್ಷೇತ್ರದಲ್ಲಿ ಹೇಳುವುದಾದರೆ ೧೯೮೦ನೇ ಇಸವಿಯಲ್ಲಿ ನಮ್ಮ ಸರ್ಕಾರ ೧೪೩ ಪ್ರೌಢಶಾಲೆಗಳನ್ನು ಹೊಸದಾಗಿ ಮಂಜೂರುಮಾಡಿದ್ದಾರೆ. ೨೯ ಜೂನಿಯರ್ ಕಾಲೇಜು, ೧೫ ಪೋಸ್ಟ್ ಗ್ರಾಜುಯೇಟ್ ಕಾಲೇಜುಗಳು, ೧೧ ಇಂಜಿನೀಯರ್ ಕಾಲೇಜುಗಳು ೧೧ ಶಿಕ್ಷಣ ಕಾಲೇಜುಗಳು ೨ ಮೆಡಿಕಲ್ ಕಾಲೇಜುಗಳನ್ನು ಮಂಜೂರು ಮಾಡಿದ್ದಾರೆ. ಮೆಡಿಕಲ್ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡಿಯೆಂದು ಮಾನ್ಯಸದಸ್ಯರು ಹೇಳುತ್ತಿರುವುದು ಸರಿಯಲ್ಲ. ೩೫ ಸಾವಿರ ಪ್ರಾಥಮಿಕ ಶಾಲೆಗಳಿವೆ, ೫೬೪ ಕಾಲೇಜುಗಳಿವೆ ಎರಡೂವರೆ ಸಾವಿರ ಪ್ರೌಢಶಾಲೆಗಳಿವೆ ಇವುಗಳನ್ನು ಬಹುತೇಕ ಖಾಸಗೀಯವರು ನಡೆಸುತ್ತಾರೆ. ಸರ್ಕಾರದವರು ಶೇಕಡ ೩೦ರಷ್ಟು ಶಾಲೆಗಳನ್ನು ನಡೆಸುತ್ತಾರೆ. ಇವುಗಳನ್ನು ರಾಷ್ಟ್ರೀಕರಣ ಮಾಡಬಹುದಲ್ಲ ನನ್ನ ವೈಯಕ್ತಿಕ ಅಭಿಪ್ರಾಯ ರಾಷ್ಟ್ರೀಕರಣ ಮಾಡಬಾರದು. ಇವತ್ತು ಮೆಡಿಕಲ್ ಕಾಲೇಜು ರಾಷ್ಟ್ರೀಕರಣ ಮಾಡುವಂತೆ ಹೇಳುತ್ತಾರೆ, ನಾಳೆ ಇನ್ನೊಂದನ್ನು ಹೇಳುತ್ತಾರೆ ಈ ರೀತಿ ಮಾಡುತ್ತಾ ಹೋದರೆ, ನಮ್ಮ ಬಡ್ಜೆಟ್‌ನ ಆದಾಯ ಬಹುತೇಕ ಶಿಕ್ಷಣ ಕ್ಷೇತ್ರಕ್ಕೆ ಖರ್ಚಾಗುತ್ತದೆ.

ಈಗ ಸರ್ಕಾರ ಮೆಡಿಕಲ್ ಮತ್ತು ಇಂಜಿನೀಯರ್ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡಿದರೂ ನಮ್ಮ ಬಜೆಟ್ಟಿನ ಮೇಲೆ ಹೊರೆ ಬೀಳುತ್ತದೆ. ಇದನ್ನು ಯಾವರೀತಿ ನಿವಾರಣೆ ಮಾಡುವುದಕ್ಕೆ ಸಾಧ್ಯವಿದೆ. ಹೆಚ್ಚಾಗಿ ತೆರಿಗೆಯನ್ನು ಹಾಕಿದರೆ ಗಲಾಟೆ ಮಾಡುತ್ತಾರೆ. ಕಾಲೇಜುಗಳು ಕಡಿಮೆ ಇವೆಯೆಂದು ಕೇಳಿದ ಕಡೆಯಲ್ಲಿ ಮಂಜೂರುಮಾಡುತ್ತಿದ್ದಾರೆ. ೧೦ ವರ್ಷಗಳಲ್ಲಿ ಕೇವಲ ಒಂದೇ ಒಂದು ಕಾಲೇಜನ್ನ ಎಂ. ಎಸ್. ರಾಮಯ್ಯನವರು ತೆರೆಯುವಂತೆ ಮಂಜೂರುಮಾಡಿದ್ದರು. ಈ ಸಾರಿ ಎರಡು ಮೆಡಿಕಲ್ ಕಾಲೇಜುಗಳು ಆಗಿವೆ. ಉದಾಹರಣೆಗೆ ನಮ್ಮ ಜಿಲ್ಲೆಯಲ್ಲಿಯೇ ಯಾರಾದರೂ ಖಾಯಿಲೆ ಬಿದ್ದರೆ ೧೨ ಮೈಲಿ, ೧೫ ಮೈಲಿ ಡಾಕ್ಟರುಗಳನ್ನು ಹುಡುಕಿಕೊಂಡು ಹೋಗತಕ್ಕಂತಹ ಪರಿಸ್ಥಿತಿಯಿದೆ. ಆದ್ದರಿಂದ ಹೆಚ್ಚು ಹೆಚ್ಚು ಡಾಕ್ಟರುಗಳನ್ನು ತಯಾರು ಮಾಡುವುದು ತಪ್ಪೇ. ಮಾನ್ಯ ಸದಸ್ಯರಾದ ಶ್ರೀ ಜೆ. ಎಚ್. ಪಟೇಲ್‌ರವರು ಹೇಳಿದರು ೨ ಸಾವಿರ ಜನಗಳಿಗೆ ಒಬ್ಬ ಡಾಕ್ಟರು ಇರಬೇಕು ಎನ್ನುವ ನಿಯಮವನ್ನು ಹೇಳಿದರು. ಆ ರೀತಿ ನಾವು ಮಾಡಬೇಕಾದರೆ ಇನ್ನು ನಾಲ್ಕಾರು ಮೆಡಿಕಲ್ ಕಾಲೇಜುಗಳನ್ನು ತೆರೆಯಬೇಕಾಗಿದೆ. ಈ ಎಲ್ಲಾ ದೃಷ್ಟಿಯಿಂದ ನಮ್ಮ ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಹೊಸ ವಿದ್ಯಾಸಂಸ್ಥೆಗಳನ್ನು ತೆರೆಯುವುದಕ್ಕೆ ಪರ್ಮಿಷನ್ ಕೊಟ್ಟು, ಒಳ್ಳೆಯ ಡಾಕ್ಟರುಗಳು ಇಂಜನೀಯರ್‌ಗಳನ್ನು ತಯಾರುಮಾಡುವುದರಿಂದ ನಾವು ಜನಗಳ ಬೇಡಿಕೆಯನ್ನು ಈಡೇರಿಸಲು ಸಾಧ್ಯ. ಇದು ನಮ್ಮ ಸರ್ಕಾರದ ಗುರಿ.

ಅಧ್ಯಕ್ಷರೇ, ದಕ್ಷ ಆಡಳಿತವನ್ನು ಒದಗಿಸಿಕೊಡುವುದೇ ನಮ್ಮ ಸರ್ಕಾರದ ಗುರಿಯಾಗಿದೆ. ಇದರ ಬಗ್ಗೆ ಒಂದೇ ಒಂದು ಉದಾಹರಣೆ ಕೊಡಬೇಕೆಂದರೆ, ಈ ಮೊದಲು ರೈತರು ಸರ್ಕಾರಕ್ಕೆ ಕೊಟ್ಟ ದೂರುಗಳ ಬಗ್ಗೆ ಈ ಹಿಂದಿನ ಸರ್ಕಾರ ಗಮನವನ್ನೇ ಕೊಡುತ್ತಿರಲಿಲ್ಲ. ಆದರೆ ಈಗಿನ ನಮ್ಮ ಮುಖ್ಯಮಂತ್ರಿಗಳು ಕಡತಗಳ ವಿಲೇವಾರಿ ಬಗ್ಗೆ ಒಂದು ಕಾರ್ಯಕ್ರಮ ಹಾಕಿಕೊಂಡು ಅದರಂತೆ ಕೆಲಸ ಮಾಡುತ್ತಿದ್ದಾರೆ. ಜೊತೆಗೆ ರಾಜ್ಯಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಜನರು ಕೊಟ್ಟ ಅರ್ಜಿಗಳಿಗೆ ಕೂಡಲೇ ಉತ್ತರ ಬರುವಂತಹ ವ್ಯವಸ್ಥೆ ಮಾಡಿದ್ದಾರೆ. ಈ ವಿಚಾರದಲ್ಲಿ ಈ ಹಿಂದಿನ ಸರ್ಕಾರದವರು ಪ್ರಯತ್ನ ಮಾಡಿದ್ದರೂ ಸಹ ಅದರಲ್ಲಿ ಯಶಸ್ವಿಯಾಗಿರಲಿಲ್ಲ. ಆದರೆ ಈಗ ರೈತರು ಕೊಟ್ಟ ದೂರುಗಳ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ತಾಲ್ಲೂಕ್ ಮಟ್ಟದಲ್ಲಿ ಇದು ಇನ್ನೂ ಜಾರಿಗೆ ಬಂದಿಲ್ಲ. ತಾಲೂಕ್ ಮಟ್ಟಕ್ಕೂ ಇದನ್ನು ಸರ್ಕಾರದವರು ಅನ್ವಯ ಮಾಡಿ, ಸಾಮಾನ್ಯ ಜನರು ಏನಾದರೂ ದೂರು ಕೊಟ್ಟರೆ ಅದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಂಡು ಸಂಬಂಧಪಟ್ಟವರಿಗೆ ಉತ್ತರ ಕೊಡುವಂತಹ ವ್ಯವಸ್ಥೆ ಜಾರಿಗೆ ಬರಬೇಕು, ಆಗ ಬಹುಶಃ ನಮ್ಮ ಸರ್ಕಾರ ಅಸ್ತಿತ್ವದಲ್ಲಿದೆ, ದೂರು ಕೊಟ್ಟರೆ, ಸರ್ಕಾರದಿಂದ ನಮಗೆ ನ್ಯಾಯ ಸಿಗುತ್ತದೆಂಬ ಭಾವನೆ ಜನರಲ್ಲಿ ಮೂಡುತ್ತದೆ. ಆದಕಾರಣ ಮೇಲ್ಮಟ್ಟದಲ್ಲಿ ಈಗ ಏನು ಕಾನೂನು ಮಾಡಿದ್ದೀರಿ, ಅದನ್ನು ಕೆಳಮಟ್ಟಕ್ಕೂ ಅನ್ವಯ ಮಾಡಬೇಕೆಂದು ಹೇಳುತ್ತೇನೆ ಮತ್ತು ಅದು ಕಟ್ಟುನಿಟ್ಟಾಗಿ ಪಾಲನೆಯಾಗುವಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಇದೇ ಮೊಟ್ಟಮೊದಲನೆ ಬಾರಿಗೆ ನಮ್ಮ ಸರ್ಕಾರದವರು ಕೇಂದ್ರಸರ್ಕಾರಕ್ಕೆ ಮನವಿ ಸಲ್ಲಿಸುವುದರ ಮೂಲಕ ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಕ್ಷಾಮ ಪೀಡಿತ ಪ್ರದೇಶಗಳಿವೆ, ಅಲ್ಲೆಲ್ಲಾ ತಾತ್ಕಾಲಿಕ ಪರಿಹಾರ ಒದಗಿಸಿದರೆ ಜನತೆಗೆ ಅನುಕೂಲವಾಗುವುದಿಲ್ಲವೆಂಬ ದೃಷ್ಟಿಯಿಂದ ಶಾಶ್ವತವಾದಂಥ ಪರಿಹಾರ ಕಾಮಗಾರಿ ಕೆಲಸಗಳನ್ನು ಕೈಕೊಳ್ಳಲು ಏರ್ಪಾಡು ಮಾಡಿದ್ದಾರೆ. ಇವುಗಳಲ್ಲಿ ಮುಖ್ಯವಾದವುಗಳೆಂದರೆ, ಲಿಫ್ಟ್ ಇರಿಗೇಷನ್ ಸ್ಕೀಮುಗಳು, ಬೋರ್‌ವೆಲ್‌ಗಳು, ಹಾಗೂ ನೀರಾವರಿ ಯೋಜನೆಗಳನ್ನು ಕೈಕೊಳ್ಳುವುದರ ಮೂಲಕ ರೈತರಿಗೆ ನೀರನ್ನು ಒದಗಿಸಲು ಏರ್ಪಾಡು ಮಾಡಲಾಗುತ್ತಿದೆ. ಈ ಕೆಲಸಗಳು ಬಜೆಟ್‌ನಲ್ಲಿ ಸೇರಿದೆಯೋ ಅಥವಾ ಇಲ್ಲವೋ ಎಂಬುದನ್ನು ನೋಡದೆ ಮತ್ತು ದುಡ್ಡು ಇದೆಯೋ ಅಥವಾ ಇಲ್ಲವೋ ಎಂಬುದನ್ನು ಯೋಚನೆ ಮಾಡದೆ ಬಹಳ ದಿಟ್ಟತನದಿಂದ ಹಾಗೂ ಧೈರ್ಯದಿಂದ ಈ ಕೆಲಸಗಳನ್ನು ನಮ್ಮ ಮುಖ್ಯಮಂತ್ರಿಗಳಾದಂಥ ಶ್ರೀಮಾನ್ ಗುಂಡುರಾವ್ ಅವರು ಮಂಜೂರು ಮಾಡುತ್ತಿದ್ದಾರೆ. ಇದನ್ನು ನಾವು ಮೆಚ್ಚಿಕೊಳ್ಳಬೇಕಾಗಿದೆ. ಇದರ ಜೊತೆಗೆ ಮುಖ್ಯಮಂತ್ರಿಗಳು ಪ್ರವಾಸ ಹೋದ ಕಡೆಗಳಲ್ಲಿ ಸ್ಥಳೀಯ ಜನರು ತಮ್ಮ ಭಾಗದಲ್ಲಿ ರಸ್ತೆ ಕೆಲಸವಾಗಬೇಕು, ಇಲ್ಲವೇ ಕೆರೆ ಕಾಲುವೆ ಕೆಲಸವಾಗಬೇಕು ಇಲ್ಲವೇ ಸೇತುವೆ ಕೆಲಸವಾಗಬೇಕು ಎಂದು ಕೇಳಿಕೊಂಡರೆ, ಅದನ್ನು ಸ್ಥಳದಲ್ಲಿಯೇ ಮಂಜೂರು ಮಾಡುತ್ತಿದ್ದಾರೆ. ಇದನ್ನೇ ಆಧಾರವಾಗಿಟ್ಟುಕೊಂಡು ಮುಖ್ಯಮಂತ್ರಿಗಳು ಆಕಾಶ ಕೇಳಿದರೂ ಕೊಡುತ್ತಾರೆ, ಮೈಸೂರು ಅರಮನೆ ಕೇಳಿದರೂ ಕೊಡುತ್ತಾರೆ ಎಂದು ಒಂದು ರೀತಿಯಲ್ಲಿ ವ್ಯಂಗ್ಯವಾಗಿ ಒಬ್ಬರು ಹೇಳಿದಂಥ ವಿಚಾರ ಮೊನ್ನೆತಾನೆ ಪತ್ರಿಕೆಯಲ್ಲಿ ಬಂದಿದೆ. ಬಹುಶಃ ಈ

ಹಿಂದೆ ಶ್ರೀ ಕಾಮರಾಜ್ ಅವರು ಮುಖ್ಯಮಂತ್ರಿಗಳಾಗಿದ್ದಾಗ ಈಗಿನ ನಮ್ಮ ಮುಖ್ಯಮಂತ್ರಿಗಳಂತೆ ಕೆಲಸ ಮಾಡುತ್ತಿದ್ದರು. ಅವರು ಪ್ರವಾಸ ಹೋಗುವಾಗ ತಮ್ಮ ಜೊತೆಯಲ್ಲಿ ಸೆಕ್ರೆಟೇರಿಯಟ್‌ನ ಅಂಡರ್-ಸೆಕ್ರೆಟರಿ, ಡೆಪ್ಯೂಟಿ-ಸೆಕ್ರೆಟರಿಯವರನ್ನು ಸಹ ಕರೆದುಕೊಂಡು ಹೋಗುತ್ತಿದ್ದರು. ಪ್ರವಾಸ ಕಾಲದಲ್ಲಿ ರೈತರು ಏನಾದರೂ ಮನವಿಗಳನ್ನು ಕೊಟ್ಟರೆ, ಆ ಬಗ್ಗೆ ತಕ್ಷಣವೇ ಕ್ರಮ ಕೈಕೊಳ್ಳುತ್ತಿದ್ದರು. ಮತ್ತು ಅವರು ಆ ಜಿಲ್ಲೆಯನ್ನು ಬಿಟ್ಟು ಮುಂದಿನ ಜಿಲ್ಲೆಗೆ ಪ್ರವಾಸ ಹೋಗುವುದರೊಳಗಾಗಿ ಜನರು ಕೇಳಿಕೊಂಡ ಕೆಲಸಗಳಿಗೆ ಮಂಜೂರಾತಿ ಕೊಡುತ್ತಿದ್ದರು. ಅವರು ಈ ರೀತಿಯ ಕ್ರಮ ತೆಗೆದುಕೊಂಡ ಕಾರಣದಿಂದಲೇ ಇವೊತ್ತಿನದಿವಸ ಮದ್ರಾಸ್ ರಾಜ್ಯ ಮುಂದೆ ಬರಲು ಕಾರಣವಾಗಿದೆ. ಇವೊತ್ತು ನಮ್ಮ ರಾಜ್ಯದಲ್ಲಿರುವಂತಹ ಲಂಚಕೋರತನ ಹೋಗಬೇಕಾದರೆ ಮತ್ತು ನಮ್ಮ ಜನರ ಸಂಕಷ್ಟಗಳು ಪರಿಹಾರವಾಗಬೇಕಾದರೆ ನಮ್ಮ ಮುಖ್ಯಮಂತ್ರಿಗಳು ಸ್ಥಳದಲ್ಲಿಯೇ ಮಂಜೂರಾತಿ ಮಾಡುವಂತಹ ಕೆಲಸ ಇನ್ನೂ ಮುಂದುವರೆಯಬೇಕೆಂದು ಹೇಳುತ್ತೇನೆ. ಅವರ ಈ ಕೆಲಸವನ್ನು ನಾವು ಸ್ಮರಿಸಿಕೊಳ್ಳಬೇಕಾಗಿದೆ ಮತ್ತು ಶ್ಲಾಘನೆ ಮಾಡಬೇಕಾಗಿದೆ. ಇದು ನಮ್ಮ ಧರ್ಮ. ಮೆಡಿಕಲ್ ಕಾಲೇಜ್‌ಗಳ ಸ್ಥಾಪನ ವಿಚಾರದಲ್ಲಿ ಈ ಕಡೆಯವರು ಮಾತ್ರವಲ್ಲ, ವಿರೋದಪಕ್ಷದವರು ಸಹ ನೆನ್ನೆದಿವಸ ಬಹುವಾಗಿ ಪ್ರಶಂಸೆ ವ್ಯಕ್ತಮಾಡಿದರು. ಮಾನ್ಯ ದೇವೆಗೌಡರು ಒಂದು ಮಾತನ್ನು ಹೇಳಿದ್ದಾರೆ. ಅವರು ಈ ಮೊದಲು ವಿರೋಧಪಕ್ಷದ ನಾಯಕರಾಗಿದ್ದರು ಅದೇನೆಂದರೆ, ನೀರಾವರಿ ಕಾಮಗಾರಿ ಕೆಲಸಗಳನ್ನು ಕೈಕೊಳ್ಳುವ ವಿಚಾರದಲ್ಲಿ ಸ್ಥಳದಲ್ಲಿಯೇ ಮಂಜೂರಾತಿ ಕೊಡುವಂತಹ ಒಂದು ದಿಟ್ಟತನದ ನಿಲುವನ್ನು ಈಗಿನ ಮುಖ್ಯ ಮಂತ್ರಿಗಳು ಕೈಕೊಂಡಿದ್ದಾರೆ, ಇಂತಹ ಮುಖ್ಯಮಂತ್ರಿಗಳು ಹಿಂದೆ ಇರಲಿಲ್ಲ, ಮುಂದೆ ಇಂತಹವರು ಬರುತ್ತಾರೋ ಅಥವಾ ಇಲ್ಲವೋ ಎಂಬತಕ್ಕಂಥ ಮಾತನ್ನು ಹೇಳಿದ್ದಾರೆ. ಇದನ್ನು ನಾನು ಮನಸಾರೆ ಪುಷ್ಟೀಕರಿಸುತ್ತೇನೆ. ನಮ್ಮ ಮುಖ್ಯ ಮಂತ್ರಿಗಳು ಇದೇರೀತಿ ಕೆಲಸ ಮಾಡಿದ್ದೇ ಆದರೆ ನಮ್ಮ ರಾಜ್ಯ ದಲ್ಲಿರುವಂತಹ ಕ್ಷಾಮ ಪೀಡಿತ ಭಾಗಗಳು, ಹಿಂದುಳಿದ ಭಾಗಗಳೆಲ್ಲಾ ಅಭಿವೃದ್ಧಿ ಹೊಂದಿ, ಈಗಿರುವಂತಹ ರೀಜನಲ್ ಇಂಬ್ಯಾಲೆನ್ಸ್ ಹೋಗುವುದಕ್ಕೆ ಸಾಧ್ಯವಾಗುತ್ತದೆ. ಆಗ ಎಲ್ಲ ಜನರ ಮನಸ್ಸಿನಲ್ಲಿಯೂ ನೆಮ್ಮದಿ ಉಂಟಾಗುತ್ತದೆ. ಆದಕಾರಣ ನಮ್ಮ ಮುಖ್ಯಮಂತ್ರಿಗಳು ಧೈರ್ಯದಿಂದ ಯಾರಿಗೂ ಅಂಜದೆ ದಿಟ್ಟತನದಿಂದ ಕೆಲಸ ಮಾಡಿದ್ದೇ ಆದರೆ, ನಮ್ಮ ರಾಜ್ಯ ಪ್ರಗತಿ ಹೊಂದಲು ಸಾಧ್ಯ ಮತ್ತು ನಮ್ಮ ಜನರು ಏಳಿಗೆ ಹೊಂದಲು ಸಾಧ್ಯ ಎಂದು ಹೇಳಿ ಮತ್ತೊಮ್ಮೆ ಈ ಸಭೆಯ ಮುಂದಿರುವಂತಹ ನಿರ್ಣಯ ವನ್ನು ಅನುಮೋದಿಸಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ. ಎಚ್. ಪಟೇಲ್ (ಚೆನ್ನಗಿರಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಮೇಲೆ, ವಂದನಾ ನಿರ್ಣಯವನ್ನು ಮಂಡನೆ ಮಾಡಿ ಮಾತನಾಡಿದಂಥ ಶ್ರೀ ಕುಸನೂರ್ ಅವರ ಭಾಷಣವನ್ನು ಮತ್ತು ಅದನ್ನು ಅನುಮೋದನೆ ಮಾಡಿ ಶ್ರೀ ಮಂಜೇಗೌಡರು ಮಾಡಿದ ಭಾಷಣವನ್ನು ನಾನು ಕೇಳಿದ ಮೇಲೆ ಇಲ್ಲಿ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ್ದಾರೆಂದು ತಿಳಿಯಿತು. ಏಕೆಂದರೆ ಆ ಸಮಯದಲ್ಲಿ ನಾವು ಇಲ್ಲಿ ಇರಲಿಲ್ಲ. ಈಗ ಇವರಿಬ್ಬರು ಭಾಷಣ ಮಾಡಿದ ಮೇಲೆ ರಾಜ್ಯಪಾಲರು ಇಲ್ಲಿ ಭಾಷಣ ಮಾಡಿದ್ದು ನಿಜ ಎಂದು ಅರ್ಥವಾಯಿತು. ಇವರುಗಳು ಮಾತನಾಡುವಾಗ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವುದರ ಬಗ್ಗೆ ಮತ್ತು ಹೇಳದಿರುವುದರ ಬಗ್ಗೆ ಜೊತೆಗೆ ಅದಕ್ಕೆ ವಿರುದ್ಧವಾಗಿಯೂ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಸಂಸದೀಯ ಪ್ರಜಾತಂತ್ರದಲ್ಲಿ ಬಡ್ಜೆಟ್ ಅಧಿವೇಶನ ಪ್ರಾರಂಭವಾಗುವುದಕ್ಕೆ ಮೊದಲು ಪ್ರತಿವರ್ಷವೂ ರಾಜ್ಯಪಾಲರು ಹಾಗೂ ರಾಷ್ಟ್ರಪತಿಯವರು ಉಭಯ ಸದನಗಳನ್ನು ಉದ್ದೇಶಿಸಿ ಮಾತನಾಡುವುದು ಒಂದು ಸಂಪ್ರದಾಯ. ರಾಜ್ಯಪಾಲರ ಭಾಷಣದಲ್ಲಿ ಹಿಂದಿನ ಸರ್ಕಾರ ಏನು ಮಾಡದೆ ಬಿಟ್ಟಿದೆ ಎಂಬುದನ್ನು ಹೇಳುವುದು ಮುಖ್ಯವಲ್ಲ, ಇಲ್ಲಿಯವರೆಗೆ ಆಗಿರುವಂತಹ ಸಮಗ್ರ ಪರಿಸ್ಥಿತಿಯ ಒಂದು ಚಿತ್ರವನ್ನು ಕನ್ನಡಿಯಲ್ಲಿ ಕಾಣುವ ರೀತಿಯಲ್ಲಿ ಅವರ ಭಾಷಣ ಇರಬೇಕು. ಬಡ್ಜೆಟ್‌ನಲ್ಲಿ ಸಾಕಷ್ಟು ವಿವರಗಳನ್ನು ಕೊಡಲು ಸಮಯವಿರುತ್ತದೆ. ಆದರೆ ರಾಜ್ಯಪಾಲರ ಭಾಷಣದಲ್ಲಿ ವಾಸ್ತವಿಕವಾದಂಥ ಚಿತ್ರ ಇರಬೇಕಾಗುತ್ತದೆ. ಆದರೆ ನಾವು ಈಗ ನೋಡುತ್ತಿರುವುದೇನೆಂದರೆ, ವಾಸ್ತವಿಕ ವಾಗಿ ನಾವು ಏನನ್ನು ನೋಡುತ್ತಿದ್ದೇವೆ. ಅದಕ್ಕೆ ತದ್ವಿರುದ್ಧವಾದಂಥ ಚಿತ್ರ ಇದರಲ್ಲಿದೆ. ನಮ್ಮ ಸರ್ಕಾರ ಅಂಥಾದ್ದು ಮಾಡಿದೆ, ಇಂಥಾದ್ದು ಮಾಡಿದೆ ಎಂದು ಹೇಳುವುದು ಒಂದು ತರಹ;

It is somewhat hypocratic. If you think hypocracy is necessary in a democracy then I don't dispute. But, ಗೊತ್ತಿದ್ದೂ ಗೊತ್ತಿದ್ದೂ, ಅಂದರೆ ಜನರ ಜೀವನ ಪರಿಸ್ಥಿತಿ ದುರ್ಬಲವಾಗಿದೆ, ಜನರ ಪರಿಸ್ಥಿತಿ ಚೆನ್ನಾಗಿಲ್ಲ, ಸರ್ಕಾರದ ಕಾರ್ಯಕ್ರಮಗಳು ಹಣ

ಕಾಸಿನ ದೃಷ್ಟಿಯಿಂದ ಮತ್ತು ಆಡಳಿತದ ಮೆಷಿನರಿ ದೃಷ್ಟಿಯಿಂದ ಕೆಟ್ಟಿದೆ ಎಂಬುದು ಇವರಿಗೆ ಗೊತ್ತಿದ್ದೂ ಸಹ ಯಥಾಪ್ರಕಾರ ನಮ್ಮ ಸರ್ಕಾರ ಇಂಥಾದ್ದು ಮಾಡಿದೆ ಅಂಥಾದ್ದು ಮಾಡಿದೆ ಎಂದು ಹೇಳಿಕೊಂಡಿರುವುದು ಸರಿಯೇ ? ಕಳೆದ ಸಲದ ರಾಜ್ಯಪಾಲರ ಭಾಷಣದಲ್ಲಿ ಮೊದಲಲ್ಲೇ ಏನು ಹೇಳಿದ್ದಾರೆಂದರೆ.—

> ''ದೇಶವನ್ನು ಚಕಿತಗೊಳಿಸುವ ಬದಲಾವಣೆಗಳು ಸಂಭವಿಸಿದ ತರುವಾಯ ನಾವು ಇಲ್ಲಿ ಸಭೆ ಸೇರಿದ್ದೇವೆ,.........

ಅಂದರೆ ಶ್ರೀ ಗುಂಡೂರಾಯರ ಸರ್ಕಾರ ಹೊಸದಾಗಿ ಅಧಿಕಾರಕ್ಕೆ ಬಂದಮೇಲೆ ಇವರ ಹಿಂದಿನ ಸರ್ಕಾರ ಏನೇನು ಮಾಡಿತ್ತು ಎಂಬುದನ್ನು ಹೇಳಬೇಕಾಗಿತ್ತು. ಆದರೆ ಅದನ್ನು ಹೇಳಲಿಲ್ಲ. ಈ ಸಲವೂ ಕೂಡ ಮಾನ್ಯ ರಾಜ್ಯಪಾಲರ ಭಾಷಣದ ಎರಡನೇ ಪ್ಯಾರಾದಲ್ಲಿ ಈ ರೀತಿ ಹೇಳಿದ್ದಾರೆ.—

''ದುರದೃಷ್ಟವಶಾತ್ ವರ್ಷದ ಮೊದಲ ಅವಧಿಯಲ್ಲಿ ಹಲವಾರು ಜಿಲ್ಲೆಗಳಲ್ಲಿ ಭಾರಿ ನೆರೆಹಾವಳಿ ಉಂಟಾಯಿತು ಮತ್ತು ಈಗ ರಾಜ್ಯದ ೧೦೨ ತಾಲ್ಲೂಕುಗಳಲ್ಲಿ ತೀವ್ರ ಕ್ಷಾಮ ತಲೆದೋರಿದೆ'' ಎಂದು ಹೇಳಿದ್ದಾರೆ. ನಾನು ಇದರ ವಿವರಗಳಿಗೆ ನಂತರ ಹೋಗುತ್ತೇನೆ. ಈಗ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದ ಪ್ರಾರಂಭದಲ್ಲಿ ರೈತರ ಚಳುವಳಿ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ರೈತರು ಚಳುವಳಿ ಮಾರ್ಗ ಹಿಡಿಯಬಾರದಾಗಿತ್ತು; ಏಕೆಂದರೆ, ಅವರು ಈ ದೇಶವನ್ನು ಉಳಿಸತಕ್ಕಂಥ ಒಂದು ಅಂಗವಾದ ಕಾರಣ ಅವರು ಚಳುವಳಿ ಮಾರ್ಗವನ್ನು ಹಿಡಿಯಬಾರದಾಗಿತ್ತು ಎಂಬತಕ್ಕಂಥ ಸರ್ಕಾರದ ಇಚ್ಛೆಯನ್ನು ರಾಜ್ಯಪಾಲರ ಭಾಷಣದ ಮೂಲಕ ವ್ಯಕ್ತಪಡಿಸಿದ್ದಾರೆ. ನಾನು ಈಗ ಮೊದಲು ರೈತರ ಚಳುವಳಿ ಬಗ್ಗೆ ಪ್ರಸ್ತಾಪ ಮಾಡುತ್ತೇನೆ.

೩-೦೦ ಪಿ.ಎಂ.

ಇವತ್ತಿನ ದಿವಸ ನರಗುಂದದ ರೈತರ ಬೃಹತ್ ಜಾಥಾ ಬರುತ್ತಿದೆ. ಈ ಸಂಬಂಧದಲ್ಲಿ ಈ ಹಿಂದೆ ಸಾವಿರಾರು ಜನ ಜೈಲಿಗೆ ಹೋದದ್ದು, ಅವರ ಪ್ರತಿನಿಧಿಗಳು ಮಾನ್ಯ ಮುಖ್ಯಮಂತ್ರಿಯವರೊಡನೆ ಮಾತನಾಡಿದ್ದು, ಸಂಧಾನ ವಿಫಲವಾದಾಗ ಮೊದಲು ನರಗುಂದದಲ್ಲಿ ತೀವ್ರ ಚಳುವಳಿ ನಡೆದದ್ದು, ಹಲವರ ಸಾವು ಆದದ್ದು—ಇದೆಲ್ಲದರ ಮತ್ತು ಆಳುವ ಪಕ್ಷದವರ ದುರಾಡಳಿತ ಕ್ರಮವಾಗಿ ಸಿಡಿದೆದ್ದ ಜನ ನರಗುಂದದಲ್ಲಿ ಸರ್ಕಾರದ ವಿರುದ್ಧ ಹೋರಾಟ ಮಾಡಿದರು. ಅವರ ಮೇಲೆ ಗೋಲೀಬಾರ್ ಆಯಿತು. ಅವರಿಂದ ಇದು ದೊಡ್ಡ ಸ್ವರೂಪವನ್ನು ತಾಳಿ ಷುರುವಾಯಿತು. ಎಲ್ಲೋ ಒಂದು ಕಡೆ ಕಿಡಿ ಹಾರಿದರೆ ಅದು ಯಾವಾಗ ಹೊತ್ತಿಕೊಳ್ಳುತ್ತದೆ ಎಂದರೆ ಎಲ್ಲಾ ಕಡೆ ಆ ಉದ್ವಿಗ್ನತೆ ಇದ್ದರೆ ಮಾತ್ರ ಅದು ಹೊತ್ತಿಕೊಳ್ಳುತ್ತದೆ. ಒಂದು ಕಡೆ ಒಣಗಿದ ಗುಡ್ಡಕ್ಕೆ ಒಬ್ಬ ಬೀಡಿ ಸೇದುವ ಹುಡುಗ ಒಂದು ಕಡ್ಡಿ ಗೀರಿದರೂ ಅದು ಬೃಹದಾಕಾರವಾಗಿ ಎಲ್ಲೆಡೆಯೂ ಆವರಿಸಿಕೊಂಡು ಹೊತ್ತಿಕೊಂಡು ಉರಿಯುತ್ತದೆ. ಅಲ್ಲಿ ಹಸಿರು ಚೆನ್ನಾಗಿ ಇತ್ತು ಎಂದರೆ ಏನು ಮಾಡಿದರೂ ಆ ಗುಡ್ಡಕ್ಕೆ ಬೆಂಕಿ ಹತ್ತುವುದಿಲ್ಲ. ಇವತ್ತು ಆ ಮಹಾಶಯರ ಆಡಳಿತದಲ್ಲಿ ಎಲ್ಲೋ ಒಂದು ಕಡೆ ಕಡ್ಡಿ ಗೀರಿದರೂ ಕೂಡ ಅದು ಬೆಂಕಿ ಹತ್ತಿಕೊಂಡು ಇಡೀ ದೇಶಕ್ಕೇ ಬೆಂಕಿ ಹತ್ತತಕ್ಕಂಥ ಸ್ಥಿತಿ ಇದೆ. ದೇಶದ ಎಲ್ಲಾ ಕಡೆಗಳಿಂದ ರೈತರ ಜಾಥಾ ಇವತ್ತು ಇಲ್ಲಿಗೆ ಬರುತ್ತಿದೆ. ಇವತ್ತಿನ ದಿವಸ ನಾವು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಒಂದು ರೀತಿಯ ಪಾಪರ್‌ಗಿರಿಗೆ ಬಂದಿದ್ದೇವೆ. ಮೊದಲು ರೈತರು ನರಗುಂದದಲ್ಲಿ ಏತಕ್ಕೆ ಸರ್ಕಾರದ ವಿರುದ್ಧ ಹೋರಾಟ ಮಾಡಿದರು ಎಂಬುದರ ಬಗ್ಗೆ ನಾವು—ಈಗಾಗಲೇ ಈ ಸದನದಲ್ಲಿ ಸಾಕಷ್ಟು ಚರ್ಚೆ ಮಾಡಿದ್ದೇವೆ. ಇವತ್ತು ಶ್ರೀಮಾನ್ ಮಂಚೇಗೌಡರಂತಹ ರೈತರೂ ಕೂಡ ಇವತ್ತು ನಮ್ಮ ಸರ್ಕಾರದವರು ಅಧಿಕಾರಕ್ಕೆ ಬಂದ ಮೇಲೆ ರೈತರಿಗೆಲ್ಲಾ ಅನುಕೂಲಗಳನ್ನು ಮಾಡಿಕೊಟ್ಟಿದ್ದಾರೆ ಎಂಬುದಾಗಿ ಹೇಳಿ, ಅವರು ತಲೆಯಮೇಲಿನ ಸುದ್ದಿಯನ್ನು ಮಾತನಾಡಿದ್ದಾರೆ, ಅವರು ಹೃದಯಾಂತರಾಳದಿಂದ ಆ ಮಾತನ್ನು ಹೇಳಲಿಲ್ಲ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ರೈತರ ಪರಿಸ್ಥಿತಿ ಏನಿದೆ ಎಂಬುದು ತಮಗೂ ಗೊತ್ತಿದೆ, ನನಗೂ ಗೊತ್ತಿದೆ, ಮಿಕ್ಕ ಎಲ್ಲಾ ಮಾನ್ಯ ಸದಸ್ಯರಿಗೂ ಗೊತ್ತಿದೆ. ಇವತ್ತು ನಿಜ ಪರಿಸ್ಥಿತಿಯನ್ನು ಇಲ್ಲಿ ಹೇಳಬೇಕಾಗಿದೆ. ಇದಕ್ಕೆಲ್ಲಾ ಕಾರಣರು ಯಾರು ಎಂಬುದು ಅದು ಬೇರೆ ವಿಷಯ. ನಮ್ಮ ರಾಜ್ಯದಲ್ಲಿ ರೈತರ ಚಳುವಳಿ ಏತಕ್ಕೆ ಪ್ರಾರಂಭವಾಯಿತು ಎಂದರೆ ಕಳೆದ ೩೩ ವರ್ಷಗಳ ಆಡಳಿತದಲ್ಲಿ ಅತ್ಯಂತ ನಿಕೃಷ್ಟವಾಗಿ ಕಡೆಗಣಿಸಲ್ಪಟ್ಟಂಥ, ಅತ್ಯಂತ ಕೆಳಮಟ್ಟಕ್ಕೆ ತುಳಿಯಲ್ಪಟ್ಟಂಥ ಆ ಒಂದು ಜನಸಮೂಹ ಅಥವಾ ವರ್ಗ ಇಂದಿಗೆ ಅವರು ದುರಾಡಳಿತ ನಿಜಪರಿಸ್ಥಿತಿಯನ್ನು ಅರಿತುಕೊಂಡು ಚಳವಳಿಯ ಮೂಲಕ ಅದನ್ನು ಇಡೀ ದೇಶಕ್ಕೇ ತೋರಿಸುತ್ತಿದ್ದಾರೆ. ರೈತರ ವರ್ಗವನ್ನು ಬಿಟ್ಟು ಯಾರೂ ಈ ದೇಶದಲ್ಲಿ ರಾಜಕೀಯವನ್ನು ಮಾಡುವುದ

ಕ್ಕಾಗುವುದಿಲ್ಲ. ನೂಲು ಇಲ್ಲದಿದ್ದರೆ ಬಟ್ಟೆಯನ್ನು ನೇಯುವುದಕ್ಕೆ ಹೇಗೆ ಆಗುವುದಿಲ್ಲವೋ ಹಾಗೆ ರೈತರು ಇಲ್ಲದೇ ಯಾರೂ ರಾಜಕೀಯ ಮಾಡುವುದಕ್ಕಾಗುವುದಿಲ್ಲ. ಇಡೀರಾಷ್ಟ್ರ ಮತ್ತು ರಾಜ್ಯಗಳು ಅವರ ಮೇಲೆ ಅವಲಂಬಿಸಿದೆ. ರೈತರನ್ನು ರಾಜಕೀಯಕ್ಕೆ ಬಳಸಬಾರದು ಎಂದು ಹೇಳಿಕೊಂಡು ಬಂದಂಥ ಗೋಸುಂಬೆಗಳು ಇವತ್ತಿನ ದಿವಸ ರೈತರು ರಾಜಕೀಯಕ್ಕೆ ಬರಬೇಕು ಎನ್ನತಕ್ಕಂಥ ತೀರ್ಮಾನಕ್ಕೆ ಬಂದಿದ್ದಾರೆ. ಶ್ರೀಮತಿ ಇಂದಿರಾಗಾಂಧಿಯವರೂ ಕೂಡ ಆ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ರೈತರ ಸಮಸ್ಯೆ ಹೊಸದೇನೂ ಅಲ್ಲ. ಅದು ಬಹಳ ಹಳೆಯ ಕಾಲದ್ದು. ಅವರ ಸಮಸ್ಯೆಗಳನ್ನು ಒಂದೇ ಸಾರಿ ಜಾದುಮಾಡಿ ತೆಗೆಯುವುದಕ್ಕೂ ಆಗುವುದಿಲ್ಲ. ಮೊದಲಿನಿಂದಲೂ ಕೂಡ ರೈತರ ಶೋಷಣೆ ಅನುಚಾನವಾಗಿ ನಡೆದುಕೊಂಡು ಬಂದಿದೆ. ಪ್ರತಿವರ್ಷ ಕೊನೆಯಪಕ್ಷ ೧೮–೧೫ ಕೋಟಿ ರೂಪಾಯಿಗಳನ್ನು ಸರ್ಕಾರ ರೈತರಿಂದ ಪಿಕ್‌ಪ್ಯಾಕೆಟ್ ಮಾಡುತ್ತಾ ಇತ್ತು. ಈಗಲೂ ಅದು ನಡೆಯುತ್ತಲೇ ಇದೆ. ಅದು ಹೇಗೆ ಎಂದರೆ ರೈತರು ಕಷ್ಟಪಟ್ಟು ದುಡಿದು ಬೆಳೆಯನ್ನು ತೆಗೆದು ಮಾರ್ಕೆಟ್‌ಗೆ ತರುವ ಹೊತ್ತಿಗೆ ಬೆಲೆಯೆಲ್ಲಾ ಏರಿರುತ್ತವೆ. ಇದು ಅಧಿಕಾರಿಗಳ ಪಿತೂರಿ, ಇದರಲ್ಲಿ ಕಾರ್ಖಾನೆಗಳ ಮಾಲೀಕರ, ಅಧಿಕಾರಿಗಳ, ವ್ಯಾಪಾರಸ್ಥರ ಪಿತೂರಿಯೂ ಇರುತ್ತದೆ. ರೈತರು ಬೆಳೆದ ಬೆಳೆಯನ್ನು ಪಟ್ಟಣಕ್ಕೆ ತಂದು ಅನಿವಾರ್ಯವಾಗಿ ಇಲ್ಲಿಯ ಬೆಲೆಗೆ ಮಾರಿ ಅದರಿಂದ ಬಂದಂತಹ ಹಣದಿಂದ ಮಕ್ಕಳ ಫೀಜು, ಬಟ್ಟೆಬರೆ ವಗೈರೆ ಅನುಕೂಲ ಮಾಡಿಕೊಳ್ಳಬೇಕಾಗುತ್ತದೆ, ಅವನು ಪುನಃ ಬೆಳೆ ಇಡಬೇಕಾದರೆ ಸಾಲಸೋಲ ಮಾಡಲೇಬೇಕಾಗುತ್ತದೆ. ಅವನೇ ಮಾರಿದ ಶೇಂಗಾ ೩ ತಿಂಗಳ ನಂತರ ಮಾರ್ಕೆಟ್‌ಗೆ ಹೋದರೆ ಹೆಚ್ಚು ದುಡ್ಡು ಕೊಟ್ಟು ಕೊಳ್ಳಬೇಕಾಗುತ್ತದೆ. ಇದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಅವನು ಮಾರಿದಂಥ ಜೋಳದ ಬೆಲೆ ಅವನಿಗೇ ದುಬಾರಿಯಾಗಿರುತ್ತದೆ. ಇದು ಪ್ರತಿವರ್ಷ ನಡೆಯತಕ್ಕಂಥ ಲೂಟಿ. ಇದಕ್ಕಿಂತ ದೊಡ್ಡ ಲೂಟಿ ಇಡೀ ದೇಶದಲ್ಲಿ ಬೇರೊಂದು ಇಲ್ಲ. ಇದನ್ನೆಲ್ಲಾ ಅರಿತುಕೊಂಡಿರುವಂಥ ರೈತ ವರ್ಗದವರು ಇವತ್ತು ತಮ್ಮ ಬೇಡಿಕೆಗಳನ್ನು ಮುಂದಿಟ್ಟು ಚಳುವಳಿ ಮಾಡುತ್ತಿದ್ದಾರೆ. ಅವರಿಗೆ ಸಮಾಧಾನವಾಗಲೆಂದು ಅವರ ಬೇಡಿಕೆಗಳಲ್ಲಿ ಕೆಲವನ್ನು ಈಡೇರಿಸಿದ್ದಾರೆ. ಇದು ಹೇಗಿದೆ ಎಂದರೆ ಉರಿಯುವ ಬೆಂಕಿಗೆ ಒಂದೆರಡು ಹನಿ ನೀರು ಹಾಕಿದರೆ ತಣ್ಣಗಾಗುತ್ತದೆಯಲ್ಲ ಆ ರೀತಿ ಇದೆ. ಮಾನ್ಯ ಮಂಚೇಗೌಡರು ಮಾತನಾಡತಕ್ಕಂಥ ಕಾಲದಲ್ಲಿ ಸರ್ಕಾರದವರು ಬಿಡುಗಡೆ ಮಾಡಿರತಕ್ಕಂಥ ಶ್ವೇತಪತ್ರವನ್ನು ಇನ್ಯಾವ ಸರ್ಕಾರದವರೂ ಮಾಡಿಲ್ಲ ಎಂದು ಹೇಳಿದರು. ಶ್ವೇತಪತ್ರವನ್ನು ಬಿಡುಗಡೆ ಮಾಡಿದ್ದೇ ಒಂದು ಸಾಧನೆ ಎಂದರೆ ಹೇಳಿದರೆ ಇದೂ ಒಂದು ತರಹ ಸಾಧನೆ ಎಂದು ಒಪ್ಪಿಕೊಳ್ಳುತ್ತೇನೆ. ಆದರೆ ಶ್ವೇತಪತ್ರದಲ್ಲಿ ಹೇಳಿದ್ದು ಏನಾಗಿದೆ ಇವತ್ತಿನ ದಿವಸ? ಇದನ್ನು ನಾವು ಯೋಚನೆ ಮಾಡಬೇಕು ಆಗಲೇ ಸಹಕಾರ ಬ್ಯಾಂಕುಗಳ ಪರಿಸ್ಥಿತಿಯ ಬಗ್ಗೆ ಮಾತನಾಡುತ್ತಿದ್ದ ಮಾನ್ಯ ಸದಸ್ಯರೊಬ್ಬರು, ರೈತರು ಹೀಗೆಲ್ಲಾ ಕೇಳುತ್ತಾ ಹೋದರೆ ಸಾಲ, ಸುಸ್ತಿ ಬಡ್ಡಿ ಕೊಡುವುದಿಲ್ಲ ಎಂದರೆ ದೇಶದಲ್ಲಿ ಕೃಷಿ ಉತ್ಪನ್ನ ಹೇಗೆ ನಡೆಯಬೇಕು? ಎಂದು ಕೇಳಿದರು. ನಾನು ಹೇಳುತ್ತೇನೆ ಅದೆಲ್ಲಾ ನಡೆಯಬೇಕಾಗಿರುವುದು ಕೃಷಿಕರು ಕೊಡುವ ಸಾಲ ಮತ್ತು ಸುಸ್ತಿ ಬಡ್ಡಿಯಿಂದಲ್ಲ. ಕೃಷಿ ಮಾಡತಕ್ಕಂಥವರು ಬೇರೆಬೇರೆ ರೀತಿಯಲ್ಲಿ ಕೊಡುತ್ತಿದ್ದಾರೆ. ಬಟ್ಟೆಯ ಮೇಲೆ ಹಾಕತಕ್ಕಂಥ ಎಕ್ಸೈಜ್ ಶುಲ್ಕವನ್ನು ಅವರು ಕೊಡುತ್ತಿದ್ದಾರೆ, ಒಂದು ಕಟ್ಟು ಬೀಡಿ, ಒಂದು ಬೆಂಕಿಪೊಟ್ಟಣವನ್ನು ತೆಗೆದುಕೊಂಡರೆ ಶುಲ್ಕವನ್ನು ಕೊಡುತ್ತಾರೆ. ಅವರು ಹೀಗೆ ಅನೇಕ ರೀತಿಯಲ್ಲಿ ಕೊಡುತ್ತಿದ್ದಾರೆ. ಇದನ್ನು ಲೆಕ್ಕ ಹಾಕಿದರೆ ಭಾರತ ಸರ್ಕಾರಕ್ಕೆ ೧೫೦೦ ಕೋಟಿ ರೂಪಾಯಿಗಳು ಬರುತ್ತಾ ಇದೆ. ಆದರೆ ಸರ್ಕಾರದವರಿಗೆ ರೈತರು ಮಾಡಿರತಕ್ಕಂಥ ಸಾಲವನ್ನು ಬಿಡುವುದಕ್ಕೆ ಆಗುತ್ತಾ ಇಲ್ಲ. ಉದ್ಯಮಗಳಿಗೆ ಎಷ್ಟೋ ಹಣವನ್ನು ಮಾಫಿ ಮಾಡಿಬಿಡುತ್ತಾರೆ. ಈ ಸರ್ಕಾರದವರಿಗೆ ಬೇಕಾದಂಥ ಉದ್ಯಮಿಗಳಿಗೆ ಹಣವನ್ನು ಮಾಫಿ ಮಾಡಿಬಿಡುತ್ತಾರೆ. ಉದ್ದಿಮೆದಾರರು ಏನು ಮಾಡುತ್ತಾರೆ ಎಂದರೆ ೬೦ ಕೋಟಿ ರೂಪಾಯಿಗಳನ್ನು ಸಾಲ ತೆಗೆದುಕೊಂಡು ಅದನ್ನು ಅಭಿವೃದ್ಧಿಪಡಿಸದೇ ಹಾಳು ಮಾಡುತ್ತಾರೆ. ಅನಂತರ ಸಿಕ್ ಇಂಡಸ್ಟ್ರೀಸ್ ಎಂದು ಹೇಳಿ ಅದನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಉದ್ದಿಮೆದಾರ ಮಾಡತಕ್ಕಂಥ ಅಪರಾಧಗಳನ್ನು ಕ್ಷಮಿಸಿಬಿಟ್ಟು ಪೋಲೀಸರಿಗೆ ಹ್ಯಾಂಡ್‌ಓವರ್ ಮಾಡಿಬಿಡುತ್ತಾರೆ. ಸುಮಾರು ೧೮೦೦ ಕೋಟಿ ರೂಪಾಯಿಗಳನ್ನು ಭಾರತ ಸರ್ಕಾರ ಕೆಲವು ಉದ್ಯಮಗಳಿಗೆ ರೈಟ್‌ಆಫ್ ಮಾಡಿದೆ. ಈ ವಿಷಯ ಯಾರಿಗೂ ಗೊತ್ತಿಲ್ಲ. ಸರ್ಕಾರ ತಕಾವಿ ಲೋನನ್ನು ನಿಲ್ಲಿಸಿದ ತಕ್ಷಣ ಅದರಿಂದ ರೈತರಿಗೆ ಉಪಕಾರವಾಯಿತು ಎಂದು ಹೇಳುತ್ತಾರೆ. ಇದು ಇರಬಹುದು. ಅದನ್ನು ಆಗಿಲ್ಲವೆಂದು ಹೇಳಬಾರದು. ಎಷ್ಟು ಆಗಬೇಕಾಗಿತ್ತೋ ಅಷ್ಟು ಆಗಿದೆ ಎಂದು ಹೇಳಬೇಕು ಅಷ್ಟೆ. ಸರ್ಕಾರದವರಿಗೆ ಶ್ವೇತಪತ್ರವನ್ನು ಮಂಡಿಸಿದ್ದೇ ಒಂದು ದೊಡ್ಡ ಸಾಧನೆಯಾಗಿದೆ. ಅದರ ಪ್ರಕಾರ ಬೆಟರ್‌ಮೆಂಟ್ ಲೆವಿಯನ್ನು ಬಿಟ್ಟಿದ್ದಾರೆ. ಅದನ್ನು ಬಿಟ್ಟು ವಾಟರ್‌ರೇಟ್‌ನಲ್ಲಿ ಕೆಲವು ಭಾಗವನ್ನು ಹೆಚ್ಚು ಮಾಡಿದ್ದಾರೆ. ಈ ಬಗ್ಗೆ ೧೦–೧೫ ವರ್ಷದ ಲೆಕ್ಕಾಚಾರವನ್ನು ತೆಗೆದುಕೊಂಡರೆ

ರೈತರು ವಾಟರ್‌ರೇಟನ್ನು ಪ್ರತಿವರ್ಷ ಜಾಸ್ತಿ ಕೊಡುತ್ತಿದ್ದಾರೆ. ಅವರ ಲೆಕ್ಕಾಚಾರದ ಪ್ರಕಾರ ಬೆಟರ್ ಮೆಂಟ್ ಲೆವಿ ೬೦೦ ಕೋಟಿ ರೂಪಾಯಿಗಳಷ್ಟು ಬ್ಯಾಲೆನ್ಸ್ ಇದೆಯಂತೆ. ೧೧೫ ಕೋಟಿ ರೂಪಾಯಿ ಗಳಷ್ಟು ವಾಟರ್‌ರೇಟ್ ಬ್ಯಾಲೆನ್ಸ್ ಇದೆಯಂತೆ. ಈ ಬ್ಯಾಲೆನ್ಸ್ ಇರುವುದನ್ನು ವಸೂಲು ಮಾಡಲು ಇನ್ನು ಮೇಲೆ ಪ್ರತಿವರ್ಷ ಕೊನೆಯಪಕ್ಷ ೨೦–೨೫ ರೂಪಾಯಿಗಳಷ್ಟು ಜಾಸ್ತಿ ಮಾಡಬೇಕಾಗುತ್ತದೆ ಎಂದು ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ. ಇದನ್ನು ವಸೂಲು ಮಾಡಿದರೆ ಎಡಗೈಯಲ್ಲಿ ಸ್ವಲ್ಪ ಕೊಟ್ಟಹಾಗೆ ಮಾಡಿ ಬಲಗೈಯಲ್ಲಿ ತೆಗೆದುಕೊಂಡ ಹಾಗೆ ಆಗುತ್ತದೆ. ಇದಕ್ಕೆ ನಾವು ಏನು ಹೇಳುವುದಕ್ಕಾಗುತ್ತದೆ? ಇದನ್ನು ನಾನು ಇಷ್ಟಕ್ಕೆ ಬಿಟ್ಟಿದ್ದೇನೆ. ಇನ್ನು ಹೆಚ್ಚಿಗೆ ಹೇಳಿದರೆ ನೀವೆಲ್ಲಾ ನಗುತ್ತೀರಿ–ಅಷ್ಟೆ. ಸರ್ಕಾರ ದವರು ಬೆಟರ್‌ಮೆಂಟ್ ಲೆವಿಯನ್ನು ಬಿಟ್ಟಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಆದರೆ ವಾಟರ್‌ರೇಟನ್ನು ಜಾಸ್ತಿ ಮಾಡಿದ್ದಾರೆ. ಇದರ ಬಗ್ಗೆ ರೈತರು, ರೈತಕಾರ್ಮಿಕರು, ಬಡರೈತರು ವಾಟರ್‌ರೇಟನ್ನು ಕಡಿಮೆ ಮಾಡಿ ಎಂದು ಹೇಳಿದ ಕೂಡಲೇ ಸರ್ಕಾರದವರು ಇದು ಶ್ರೀಮಂತ ರೈತರದು ಎಂದು ಹೇಳುತ್ತಾರೆ. ಶ್ರೀಮಂತ ರೈತರದನ್ನು ಪರ್ಸೆಂಟ್ ಹೆಚ್ಚು ಮಾಡಿರಬಹುದು. ಅದೇನೇ ಇದ್ದರೂ ಅವರ ವಿಚಾರ ನಮಗೂ ಬೇಡ.

ಶ್ರೀ ಎ. ಲಕ್ಷ್ಮೀಸಾಗರ್.—ಲ್ಯಾಂಡ್ ರಿಫಾರಂಸ್ ಆಕ್ಟ್ ಜಾರಿಗೆ ಬಂದಮೇಲೆ ದೊಡ್ಡ ರೈತರು ಎಲ್ಲಿದ್ದಾರೆ ?

ಶ್ರೀ ಜೆ. ಹೆಚ್. ಪಟೇಲ್.—ಈಗಲೂ ಇದ್ದಾರೆ. ಆದರೆ ಟೆಕ್ನಿಕಲ್ ಪಾಯಿಂಟ್ ಪ್ರಕಾರ ಅವರು ಇರುವ ಹಾಗೆ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಇದ್ದರೆ ಕಾನೂನಿನಲ್ಲಿ ದೋಷವಿದೆ ಎಂದು ಹೇಳಬೇಕಾಗು ತ್ತದೆ.

ಶ್ರೀ ಜೆ. ಹೆಚ್. ಪಟೇಲ್ — ಆ ಕಾನೂನನ್ನು ಜಾರಿಗೆ ಕೊಡದೇ ಇರತಕ್ಕಂಥಾದಕ್ಕೆ, ಅದು ಜಾರಿ ಯಾಗದೇ ಇರತಕ್ಕಂಥಾದಕ್ಕೆ ಒಂದು ಬಹಳ ಸೂಕ್ಷ್ಮವಾದ ಆಡಳಿತ ಯಂತ್ರ ನಮ್ಮ ದೇಶದಲ್ಲಿದೆ. ಭೂ ಸುಧಾರಣಾ ಕಾನೂನಿನಲ್ಲಿ ಸುಧಾರಣೆಯಾಗಿದ್ದರೂ ಕೂಡ ಜನರಿಗೆ ಅದು ತಿಳಿಯದಂಥ ರೀತಿಯಲ್ಲಿ ಇದೆ. ಕೆಲವು ಕಡೆ ಅವರಿಂದ ಬಹಳ ಪರಿಣಾಮವಾಗಿದೆ, ಕೆಲವು ಕಡೆ ಕೆಲವರಿಗೆ ಪ್ರಯೋಜನವೂ ಸಿಕ್ಕಿದೆ. ಇನ್ನು ರೈತರಿಗೆ ಸರ್ಕಾರದವರು ಕೆಲವು ಸವಲತ್ತುಗಳನ್ನು ಕೊಟ್ಟಿದ್ದಾರೆ. ಇದು ರೈತರ ಮೂಲಭೂತ ಕಷ್ಟಗಳನ್ನು ನಿವಾರಣೆ ಮಾಡತಕ್ಕಂಥ ಕ್ರಮವಲ್ಲ. ಇವತ್ತಿನ ದಿವಸ ಅವರ ದುಸ್ಥಿತಿ ಏನಿದೆ ಅದು ಇಲ್ಲಿಯವರೆಗ ಬದಲಾವಣೆ ಆಗಿಲ್ಲ. ಅವನ ಮೂಲರೋಗ ಹೇಗಿದೆಯೋ ಹಾಗೆಯೇ ಇದೆ. ಒಬ್ಬನಿಗೆ ಒಳಗಡೆ ಗುಲ್ಮರೋಗ ಇದೆಯೆಂದು ಇಟ್ಟುಕೊಂಡರೆ ಅದರ ಪರಿಣಾಮವಾಗಿ ಮೂಗಿನಿನಲ್ಲಿ ನೀರು ಬರುತ್ತಾ ಇದ್ದರೆ, ಮೂಗಿನಲ್ಲಿ ನೀರು ಬರತಕ್ಕಂಥಾದ್ದನ್ನು ನಿಲ್ಲಿಸಿದರೆ ರೋಗವೇ ಹುಷಾರಾಯಿತು ಅಂತ ಅಲ್ಲ. ಇದನ್ನು ತಿಳಿದುಕೊಳ್ಳಬೇಕು. ಆಹಾರ ಸಮಸ್ಯೆಯನ್ನು ಅರ್ಥ ಮಾಡಿಕೊಂಡೆವು. ಈಗ ೮೫ ಕೋಟಿ ರೂಪಾಯಿಗಳನ್ನು ಅನೌನ್ಸ್ ಮಾಡಿದ್ದಾರೆ. ಅದಕ್ಕೆ ಲೆಕ್ಕ ಎಲ್ಲಿದೆ. ಈ ೮೫ ಕೋಟಿಯಲ್ಲಿ ವಾಸ್ತವಿಕ ವಾಗಿ ೧೫–೨೦ ಕೋಟಿ ಮಾತ್ರ ಅವರಿಗೆ ಬೆನಿಫಿಟ್ ಆಗುವುದು. ಇನ್ನೆಲ್ಲಾ ಕಾರ್ಪೊರೇಷನ್‌ಗೆ ಖರೀದಿ ಮಾಡುವುದಕ್ಕೆ ಕೊಟ್ಟಿರುವುದು. ದೊಡದಾಗಿ ೮೫ ಕೋಟಿ ರಿಲೀಫ್ ಕೊಟ್ಟಿದ್ದೇವೆ ಎಂದು ಹೇಳಿದರು ಏನಾದರೂ ಸ್ವಲ್ಪ ಇದ್ದರೆ ಅದನ್ನು ಅದ್ಭುತವಾಗಿ ರಿಪೋರ್ಟ್ ತಯಾರು ಮಾಡುವುದು ಅಧಿಕಾರಿಗಳ ಸ್ವಭಾವ ಮತ್ತು ವರಸೆ. ೮೫ ಕೋಟಿ ಇಲ್ಲ ಮಣ್ಣು ಇಲ್ಲ, ಏನಿಲ್ಲ. ಆದರೆ ಬಂಗಾರಪ್ಪ ಕಮಿಟಿ ಮಾಡಿದ್ದೇವೆ. ಎಂದು ವೈಟ್ ಪೇಪರಿನಲ್ಲಿ ಹೇಳಿದ್ದಾರೆ. ರೈತರ ಸಮಸೆ,ಗಳನ್ನು ಮೂಲಭೂತವಾಗಿ ಪರಿಶೀಲನೆ ಮಾಡಿ ವರದಿ ಕೊಡಲು ಬಂಗಾರಪ್ಪ ಸಮಿತಿಯನ್ನು ರಚಿಸಿದ್ದಾರೆ. ಸರ್ಕಾರದ ಅಧಿಕಾರಿ ಗಳು ಮತ್ತು ಕೃಷಿಯ ತಜ್ಞರು ಎಲ್ಲಾ ಸೇರಿ ಬೆಲೆಗಳನ್ನು ನಿಗದಿಮಾಡಿದ್ದಾರೆ. ರೈತರ ಸಮಸ್ಯೆಗಳ ಬಗ್ಗೆ ಆಳವಾಗಿ ಅಭ್ಯಾಸಮಾಡಿ ಅದಕ್ಕೆ ಒಂದು ಪರಿಹಾರವನ್ನು ಸೂಚಿಸುವುದಕ್ಕೆ ಬಂಗಾರಪ್ಪ ಸಮಿತಿ ಯನ್ನು ನೇಮಿಸಿದ್ದೇವೆ. ಎಂದು ಹೇಳಿದ್ದಾರೆ ಬಂಗಾರಪ್ಪ ಸಮಿತಿಯನ್ನು ನೇಮಿಸಿದ್ದು ಒಂದು ದೊಡ್ಡ ಸಾಧನೆ; ಎಂದು ಹೇಳಿದ್ದಾರೆ. ಈಗ ಬಂಗಾರಪ್ಪ ಸಮಿತಿಯಂತೂ ಎಲ್ಲಿ ಹೋಯಿತೋ ಹುಡುಕಿ ಕೊಂಡು ಬರಬೇಕು, ಮಾನ್ಯ ಮಂಚೇಗೌಡರು ಹುಡುಕಿಕೊಂಡು ಬರಲಿ ನಾನು ರಾಜಕಾರಣವನ್ನು ಪ್ರಸ್ತಾಪ ಮಾಡುವುದಿಲ್ಲ. ಯಾವಾಗಬೇಕಾದರೂ ಮಂತ್ರಿಗಳನ್ನು ಮಾಡಬಹುದು, ತೆಗೆಯ ಬಹುದು. ಬಂಗಾರಪ್ಪ ಸಮಿತಿಯನ್ನು ಸರ್ಕಾರದ ಪರವಾಗಿ ರೈತರ ಬಗ್ಗೆ ಚಿಂತನೆಯನ್ನು ಮಾಡುವುದಕ್ಕೋಸ್ಕರ

ರಚನೆ ಮಾಡಿದ್ದು. ಈ ಮನೆಯ ಮಾನ್ಯ ಸದಸ್ಯರಾದ ಶ್ರೀಮಾನ್ ಬೊಮ್ಮಾಯಿಯವರ ನೇತೃತ್ವದಲ್ಲಿ ಇನ್ನೊಂದು ಸಮಿತಿಯನ್ನು ಮಾಡಿದರು ಈ ಸಮಿತಿಯನ್ನು ಸದನದ ಅನುಮತಿ ಪಡೆದು ಮಾಡಿದ್ದು; ಸರ್ಕಾರ ಮಾಡಿದಲ್ಲ. ಆ ಪ್ರದೇಶದಲ್ಲಿರತಕ್ಕ ರೈತರ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡಿ ಅಲ್ಲಿಗೆ ಹೋಗಿ ಸ್ಥಳ ಪರೀಕ್ಷೆಮಾಡಿ ಅದರ ಬಗ್ಗೆ ಕೆಲವು ಸೂತ್ರಗಳನ್ನು ಸರ್ಕಾರಕ್ಕೆ ಕೊಡಿ ಅದನ್ನು ನಾವು ಮಾಡುತ್ತೇವೆ ಎಂದು ಹೇಳಿ ಸಮಿತಿಯನ್ನು ಮಾಡಿದ್ದು. ಬಂಗಾರಪ್ಪನವರ ಸಮಿತಿಯನ್ನು ಸರ್ಕಾರ ರಚನೆ ಮಾಡಿದ್ದು ಅವರಿಗೆ ಶಕ್ತಿ ಇದೆ, ಯಾರೂ ಪ್ರಶ್ನೆ ಮಾಡುವಹಾಗಿಲ್ಲ. ಬಂಗಾರಪ್ಪ ಸಮಿತಿಯನ್ನು ತೆಗೆದದ್ದಂತೂ ತೀರ ಶೋಭೆ ತರತಕ್ಕ ಕೆಲಸವಲ್ಲ. ಆದರೆ ಬೊಮ್ಮಾಯಿ ಸಮಿತಿಯನ್ನು ಏಕೆ ರದ್ದು ಮಾಡಿದರು. ಯಾರನ್ನು ಕೇಳಿ ರದ್ದು ಮಾಡಿದರು. ಈ ಸಮಿತಿಗಳು ಅಂದರೆ ಏನು, ನಿರೋಧ್ ಕೊಳವೆಗಳೇ, ಬೇಕಾದಾಗ ಉಪಯೋಗಿಸಿಕೊಂಡು ಬೇಡ ಅಂದಾಗ ಒಗೆದು ಬಿಡೋಣ ಎನುವುದಕ್ಕೆ ಹೇಗೋ ಉಪಯೋಗಿಸಿದ್ದಾರೆ. ಬೇಕಾದರೆ ಸಮಿತಿಯನ್ನು ಮಾಡುವುದು, ಬೇಡ ಎಂದರೆ ಬಿಸಾಕು ವುದು. ಹೇಳುವವರಿಲ್ಲ, ಕೇಳುವವರಿಲ್ಲ. ಸದನದ ಅನುಮತಿಯನ್ನು ಪಡೆದು ಮಾಡಿದಂಥ ಸಮಿತಿ ಯನ್ನು...............

ಶ್ರೀ ಜಿ. ಕೆ. ತಕ್ಕೇದ್.—ನಾನು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುತ್ತೇನೆ. ಮಾನ್ಯ ಸದಸ್ಯರು ಇಲ್ಲಿ ಬಹಳ ಲಘುವಾದ ಪದಗಳನ್ನು ಉಪಯೋಗ ಮಾಡುತ್ತಿದ್ದಾರೆ. ಸರ್ಕಾರದ ಸಾಧನೆಗಳ ಬಗ್ಗೆ ಬಹಳ ಲಘುವಾಗಿ ಮಾತನಾಡುತ್ತಿದ್ದಾರೆ ನಿರೋಧ್‌ನ್ನು ಉಪಯೋಗ ಮಾಡಿಕೊಂಡು ಹೋಗುವುದು ಎಂದು ಇಷ್ಟೊಂದು ಲಘುವಾಗಿ ಸರ್ಕಾರದ ಯೋಜನೆಗಳ ಬಗ್ಗೆ ಹೇಳುವುದು ಸರಿಯಲ್ಲ. ನಿರೋಧ್ ಉಪಯೋಗ ಮಾಡುತ್ತಾರೆ ಎಂದು ಹೇಳುವುದು ಅನ್ ಪಾರ್ಲಿಮೆಂಟರಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ನಿರೋಧ್ ಶಬ್ದವನ್ನು ಹೇಳಿದ್ದಾರೆಯೇ ಹೊರತು ನಿರೋಧ್‌ನ್ನು ಉಪಯೋಗ ಮಾಡುತ್ತಾರೆ ಎಂದು ಹೇಳಲಿಲ್ಲ, ಮಾನ್ಯ ತಕ್ಕೇದ್ ಅವರು ನಿರೋಧನ್ನು ಉಪಯೋಗ ಮಾಡುತ್ತಾರೆ ಎಂದು ಹೇಳುವುದು ಸತ್ಯಕ್ಕೆ ದೂರವಾದ ವಿಚಾರ.

ಶ್ರೀ ಜಿ. ಕೆ. ತಕ್ಕೇದ್.—ಅದನ್ನು ಉಪಯೋಗ ಮಾಡುವಂಥ ಶಕ್ತಿ ಅವರಿಗೆ ಇಲ್ಲ.

ಅಧ್ಯಕ್ಷರು.—ಅವರೂ ಅದನ್ನೆ ಉಪಯೋಗಿಸಿದ್ದಾರೆ, ತಾವೂ ಉಪಯೋಗಿಸಿದ್ದೀರಿ, ಭಾಷಣ ವನ್ನು ಮುಂದುವರೆಸಿ.

ಶ್ರೀ ಜೆ. ಹೆಚ್. ಪಟೇಲ್.—ಹೀಗೆ ಸಮಿತಿಗಳನ್ನು ರಚನೆ ಮಾಡಿದರು. ಯಾವ ಉದ್ದೇಶದಿಂದ ಈ ಸಮಿತಿಗಳನ್ನು ರಚನೆ ಮಾಡಿದರು, ನಿಜವಾಗಿಯೂ ರೈತರ ಸಮಸ್ಯೆಗಳನ್ನು ಅರ್ಥಮಾಡಿಕೊಂಡು, ಅವುಗಳನ್ನು ಬಗೆಹರಿಸಬೇಕು ಎನ್ನುವ ಹೃತ್ಪೂರ್ವಕ ಕಳಕಳಿ ಇದಿದ್ದರೆ ಅವರನ್ನು ಕರೆಸಿ ಮಾತನಾಡಿ ಸರ್ಕಾರಕ್ಕೆ ಇಷ್ಟು ಕೊಡುವುದಕ್ಕೆ ಸಾಧ್ಯ ಇಷ್ಟು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಬಹುದು. ಸಣ್ಣ ಪುಟ್ಟ ರಿಯಾಯಿತಿಗಳನ್ನು ಕೊಡುವುದರಿಂದ ನಮ್ಮ ರೈತರಿಗೆ ಏನೂ ಅನುಕೂಲವಾಗುವುದಿಲ್ಲ. ನಿಜವಾಗಿಯೂ ನಾವು ಬೆಳೆದ ಮಾಲಿಗೆ ಸರಿಯಾದ ಬೆಲೆ ಇರಬೇಕು, ನಾವು ಕೊಳ್ಳತಕ್ಕ ಮಾಲುಗಳ ಬೆಲೆಗಳನ್ನು ನಿಯಂತ್ರಿಸಿ, ಅದು ನಾವು ಕೊಳ್ಳುವ ಶಕ್ತಿಗನುಗುಣವಾಗಿ ಇರಬೇಕು.

ಅಧ್ಯಕ್ಷರು.—ತಮಗೆ ಗೊತ್ತಿದ್ದಹಾಗೆ, ನಮ್ಮಲ್ಲಿ ವ್ಯವಸಾಯೋತ್ಪನ್ನ ಮಾರುಕಟ್ಟೆಗಳಿವೆ. ವ್ಯವಸಾಯಗಾರು ಅವುಗಳ ಅಧ್ಯಕ್ಷರಿದ್ದಾರೆ. ಬಹು ಸಂಖ್ಯೆಯಲ್ಲಿ ಸದಸ್ಯರುಗಳೂ ಅದರಲ್ಲಿ ಇದ್ದಾರೆ. ರೈತ ಬೆಳೆದಂಥ ಮಾಲು ಎಲ್ಲಾ ವ್ಯವಸಾಯೋತ್ಪನ್ನ ಮಾರುಕಟ್ಟೆಗಳ ಮೂಲಕವೇ ವ್ಯಾಪಾರ ಆಗ ಬೇಕು ಎಂದು ಇದೆ. ಹೀಗಿರುವಾಗ ಅಧ್ಯಕ್ಷರು ಬಹಳ ಜನ ವ್ಯಾಪಾರಿಗಳ ಜೊತೆಗೆ ಶಾಮೀಲಾಗುವುದು ಇದಕ್ಕೆ ಮೂಲಕಾರಣವಾಗುವುದಿಲ್ಲವೇ. ಇದಕ್ಕೆ ರೈತರೂ ಭಾಗಿಗಳಲ್ಲವೆ ?

ಶ್ರೀ ಜೆ. ಹೆಚ್. ಪಟೇಲ್.—ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗಳಲ್ಲಿ ಅವರ ಅನುಕೂಲಕ್ಕೋಸ್ಕರವಾಗಿ ಅವರು ವರ್ತಕರ ಜೊತೆಯಲ್ಲಿ ಶಾಮೀಲಾಗಿ ಇವರನ್ನು ಅವರಿಗೆ ಬಲಿ ಕೊಡುವುದು ಎನ್ನುವ ಅರ್ಥದಲ್ಲಿ ಹೇಳುತ್ತಿದ್ದೀರಿ, ಅದನ್ನು ನಾನು ಒಪ್ಪುತ್ತೇನೆ. ರೈತ ಓದದೇ ಇದ್ದರೂ ಸಹ ಏನು ನೋವು ಎಂದು ಅವನಿಗೆ ಗೊತ್ತಿದೆ. ವರ್ತಕರು ಮೊದಲು ರೆಗ್ಯುಲೇಟೆಡ್ ಮಾರ್ಕೆಟ್‌ಗೆ ಹೋಗುತ್ತಾರೆ, ಅಲ್ಲಿ ಹಳ್ಳಿಯಿಂದ ಮಾಲು ಬರುವುದನ್ನು ಕಂಡು ಅವನು ರೈತನ ಮನೆಗೆ ಬಂದು ಮೋಸ ಮಾಡಿಕೊಂಡು ಭತ್ತವನ್ನು ತೆಗೆದುಕೊಳ್ಳುತ್ತಾನೆ, ಅಂದರೆ ಮಾರುಕಟ್ಟೆಗೆ ಹೋಗುವುದಿಲ್ಲ.

ಇವತ್ತು ರಾಷ್ಟ್ರದಲ್ಲಿ ಮಾಡತಕ್ಕ ಅಪರಾಧಗಳಲ್ಲಿ ಇವರೂ ಭಾಗಿಯಾಗುತ್ತಾರೆ. ವರ್ತಕ ಅವನಿಗೆ ಬೇಕಾದಾಗ, ಅವನಿಗೆ ಅನುಕೂಲವಾಗುವಾಗ ರೈತನ ಮನೆ ಬಾಗಿಲಿಗೆ ಬರುತ್ತಾನೆ. ನಾವು ಇದನ್ನು ಪ್ರತಿ ವರ್ಷ ಕಣ್ಣಾರೆ ನೋಡತಕ್ಕ ದೃಷ್ಟ. ಬೆಲೆ ನಿಯಂತ್ರಣ ಮಾಡುವುದು ರಾಜ್ಯ ಸರ್ಕಾರದ ಕೈಲಿ ಇಲ್ಲದೇ ಇರಬಹುದು. ಹಿಂದಿನ ವರ್ಷದ ರಾಜ್ಯಪಾಲರ ಭಾಷಣದಲ್ಲಿ.—

> "ಕಳೆದ ಕೆಲವು ತಿಂಗಳುಗಳಿಂದ ಒಮ್ಮಿಂದೊಮ್ಮೆಗೇ ಗಗನಕ್ಕೇರಿದ ಆಹಾರ ಧಾನ್ಯಗಳು, ಸಕ್ಕರೆ, ವನಸ್ಪತಿ ಮತ್ತು ಸೀಮೆ ಎಣ್ಣೆಯೇ ಮೊದಲಾದ ಅತ್ಯಾವಶ್ಯಕ ವಸ್ತುಗಳ ಬೆಲೆಯನ್ನು ಇಳಿಸುವುದಕ್ಕೆ ನಮ್ಮ ಸರ್ಕಾರವು ಅತ್ಯಂತ ಹೆಚ್ಚಿನ ಆದ್ಯತೆಯನ್ನು ನೀಡುವುದು"

ಎಂದು ಹೇಳಿದ್ದಾರೆ. ಆಗ ಉತ್ಸಾಹಿ ಮಂತ್ರಿಗಳಾದ ಮಾನ್ಯ ಇಬ್ರಾಹಿಂ ಸಾಹೇಬರು ಇದ್ದರು, ಅವರು ಆಹಾರ ಧಾನ್ಯಗಳನ್ನು ನ್ಯಾಯ ಬೆಲೆಯಲ್ಲಿ ಮಾರುವುದಕ್ಕೆ ೭೫ ಸಾವಿರ ಅಂಗಡಿಗಳನ್ನು ತೆರೆಯುತ್ತೇವೆ, ಪ್ರತಿ ಮನೆಗೆ ಒಂದೊಂದು ಕೆ. ಜಿ. ಸಕ್ಕರೆಯನ್ನು ಪ್ಲಾಸ್ಟಿಕ್ ಬ್ಯಾಗ್‌ನಲ್ಲಿ ಹಾಕಿ ಪೋಸ್ಟ್ ಮಾಡುತ್ತೇವೆ ಅಂದರು. ಅವರು ಈಗ ಕಾಣುತ್ತಾ ಇಲ್ಲ. ಅವರನ್ನು ಪ್ಲಾಸ್ಟಿಕ್ ಬ್ಯಾಗ್‌ನಲ್ಲಿ ಹಾಕಿ ಎಲ್ಲಿಗೆ ಕಳಿಸಿದ್ದಾರೋ ಗೊತ್ತಿಲ್ಲ. ೭೫ ಸಾವಿರ ಅಂಗಡಿಗೂ ಇಲ್ಲ. ಏನೂ ಇಲ್ಲ, ಹಿಂದಿನ ವರ್ಷ ಸಕ್ಕರೆ, ಸೀಮೆ ಎಣ್ಣೆ ಗೊಬ್ಬರ ಮುಂತಾದ ಅತ್ಯಾವಶ್ಯಕ ವಸ್ತುಗಳ ಬೆಲೆ ಜಾಸ್ತಿಯಾಗಿದೆ, ಅದಕ್ಕೆ ರಿಲೀಫ್ ಕೊಡುತ್ತೇವೆ, ನಮ್ಮ ಜವಾಬ್ದಾರಿ ಎಂದು ಹೇಳಿದರು. ಈ ವರ್ಷ ಹಿಂದಿನದಕ್ಕಿಂತ ಒಂದುವರೆ ಎರಡರಷ್ಟು ಜಾಸ್ತಿಯಾಗಿದೆ. ಇದಕ್ಕೆ ಯಾರು ಜವಾಬ್ದಾರರು, ಈ ಜವಾಬ್ದಾರಿಕೆಯನ್ನು ಹೇಗೆ ನಿಭಾಯಿಸುತ್ತೀರಿ. ನಮ್ಮ ಕೈ ಮೀರಿರತಕ್ಕ ಕಾರಣಗಳಿಗೋಸ್ಕರ ಈ ರೀತಿ ನಿಭಾಯಿಸುತ್ತೇವೆ ಎಂದು ಹೇಳಿದ್ದೀರಾ ? ಹಿಂದಿನ ವರ್ಷ ಹೇಳಿರುವುದಕ್ಕೂ ಈ ವರ್ಷ ಮಾಡಿರುವುದಕ್ಕೂ ಏನಾದರೂ ಸಂಬಂಧವಿರಬೇಕಲ್ಲ ಇದನ್ನು ನೋಡಿದರೆ ಏನೂ ಸಂಬಂಧವಿಲ್ಲ ವೈಟ್ ಪೇಪರ್‌ನಲ್ಲಿ ಕೊನೇ ಪುಟದಲ್ಲಿ ಹೀಗೆ ಹೇಳಿದ್ದಾರೆ.

> "At the risk of reputation it may again be emphasised that the new Government will not be next to any other State Government in giving the farmers a new deal."

ನ್ಯೂ ಡೀಲ್ ಎಂದರೆ ಹೊಸ ವ್ಯವಸ್ಥೆ. ಈಗಿನ ಪರಿಸ್ಥಿತಿಯನ್ನು ಸಮಗ್ರವಾಗಿ ಉತ್ತಮಗೊಳಿಸುವಂಥಾ ದೃಷ್ಟಿಕೋನವನ್ನು ಹಾಕಿಕೊಂಡು, ನಮ್ಮ ಸರ್ಕಾರದಲ್ಲೂ ಮತ್ತು ರೈತರ ಮಧ್ಯೆ ಒಂದು ಒಳ್ಳೆಯ ವಾತಾವರಣವನ್ನುಂಟು ಮಾಡಲು ಒಂದು ಹೊಸ ವ್ಯವಸ್ಥೆಯನ್ನು ಹಾಕಿಕೊಳ್ಳಲಾಗಿದೆಂದು ಹೇಳಿದ್ದಾರೆ. ಇದೇ ನ್ಯೂ ಡೀಲ್. ಇದರ ಪರಿಣಾಮವಾಗಿಯೇ ಇವತ್ತು ರೈತರ ಪರಿಸ್ಥಿತಿ ಹೀಗಾಗಿದೆ, ಇಂಥಾ ಒಂದು ನ್ಯೂ ಡೀಲ್‌ಗೋಸ್ಕರವಾಗಿ ನಾವು ಶ್ರೀ ಮೊಯಿಲಿಗೌಡರವರಿಗೆ ಶಹಬಾಸ್ ಗಿರಿ ಕೊಡಬೇಕಾಗಿದೆಯೇ?

ಇನ್ನು ಮಾನ್ಯ ಮುಖ್ಯಮಂತ್ರಿಗಳವರು ಎಷ್ಟೋ ಸಮಿತಿಗಳನ್ನು ರದ್ದು ಮಾಡಿದ್ದಾರೆ, ಎಷ್ಟೋ ಫೈಲ್‌ಗಳನ್ನು ವಿಲೇವಾರಿ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಇವತ್ತು ೨ ಲಕ್ಷ ಫೈಲ್‌ಗಳನ್ನು ಕ್ಲಿಯರ್ ಮಾಡಿದ್ದಾರೆ ಸಂತೋಷ. ಆದರೆ ಇದರಿಂದ ಸಾರ್ವಜನಿಕರಿಗೆ, ಜನ ಸಾಮಾನ್ಯರ ಜೀವನಕ್ಕೆ ಆಗತಕ್ಕ ಪರಿಣಾಮವೇನು? ಅದರಿಂದ ಎಷ್ಟರ ಮಟ್ಟಿನ ಪರಿಣಾಮ ಉಂಟಾಗಿದೆ? ಇವತ್ತು ೨ ಲಕ್ಷ ಫೈಲ್‌ಗಳನ್ನು ವಿಲೇವಾರಿ ಮಾಡಿದುದರಿಂದ ಕಡಲೆಕಾಯಿ ಎಣ್ಣೆ, ಸೀಮೆಎಣ್ಣೆ ಬೆಲೆ, ಸಕ್ಕರೆ ಬೆಲೆ ಏನಾದರೂ ಕಡಿಮೆಯಾಗಿದೆಯೇ? ಅದು ಹೋಗಲಿ, ೨ ಲಕ್ಷ ಫೈಲುಗಳನ್ನು ವಿಲೇವಾರಿ ಮಾಡಿದುದರಿಂದ ದಕ್ಷ ಆಡಳಿತ ಏನಾದರೂ ಉಂಟಾಗಿದೆಯೇ? ನೀವು ಬೇಕಾದರೆ ಪರೀಕ್ಷೆ ಮಾಡಲು ಯಾವುದಾದರೂ ಒಂದು ಕಛೇರಿಗೆ ಹೋಗಿ ನೋಡಿ ದಕ್ಷ ಆಡಳಿತ ಎಷ್ಟರ ಮಟ್ಟಿಗೆ ಇದೆ ಎಂಬುದು ಗೊತ್ತಾಗುತ್ತದೆ. ಇವತ್ತು ಉದಾಹರಣೆಗೆ ದಾವಣಗೆರೆಗೆ ಸರ್ಕಾರಿ ಬಸ್ಸಿನಲ್ಲಿ ಹೋಗಿ ಅಲ್ಲಿ ಎಷ್ಟರಮಟ್ಟಿಗೆ ದಕ್ಷ ಆಡಳಿತ ಇದೆ ಎಂಬುದು ಗೊತ್ತಾಗುತ್ತದೆ, ಇಲ್ಲ ಯಾವುದೇ ತಾಲ್ಲೂಕ್ ಆಫೀಸ್‌ಗೆ ಹೋಗಿ ಅರ್ಜಿ ಕೊಟ್ಟು ಕೂತುಕೊಳ್ಳಿ ಅಲ್ಲಿ ಯಾವ ರೀತಿಯ ದಕ್ಷತೆಯ ಆಡಳಿತ ಇದೆ ಎಂಬುದು ನಿಮಗೆ ಗೊತ್ತಾಗುತ್ತದೆ. ಹೋಗಲಿ ಸರ್ಕಾರಕ್ಕೆ ಸಂಬಂಧಪಟ್ಟ ಯಾವುದೇ ಸಂಸ್ಥೆಯನ್ನು ತೆಗೆದುಕೊಳ್ಳಿ ಅಲ್ಲಿಗೆ ಯಾವುದೇ ಒಬ್ಬ ಸಾಮಾನ್ಯ ಮನುಷ್ಯ ಹೋದರೆ ಅವನ ಸಮಸ್ಯೆಗಳು ಇವತ್ತು ಬಗೆಹರಿಯುತ್ತಿಲ್ಲ. ಇವತ್ತು ನಾಡಿನ

ಏನೋ ಶಾಸಕರು ಅಂತ ಹೇಳಿಕೊಂಡರೆ ಅಷ್ಟೋ ಇಷ್ಟೋ ಕೆಲಸವಾಗಬಹುದು ಅದೇ ಸಾಮಾನ್ಯ ಮನುಷ್ಯ ಅಂತ ಹೇಳಿಕೊಂಡು ಹೋದರೆ ಯಾವುದೇ ಕೆಲಸ ಕಾರ್ಯಗಳು ದಕ್ಷತೆಯಿಂದ ಆಗುತ್ತಿಲ್ಲ. ಇವತ್ತು ವೃಧ್ಯಾಪ್ಯ ವೇತನಕ್ಕೋಸ್ಕರ ಅರ್ಜಿ ಹಾಕಿದರೆ ಅವನಿಗೆ ಬರುವ ೪೦ ರೂಪಾಯಿಗಳಲ್ಲಿ ೩೦ ರೂಪಾಯಿಗಳವರೆಗೆ ಲಂಚ ತಿನ್ನತಕ್ಕ ಪಾಪಿಗಳು ಸಹಾಪತ್ತಿನ ದಿವಸ ನಮ್ಮ ದೇಶದಲ್ಲಿದ್ದಾರೆ ಇಂಥವರು ಸರ್ಕಾರದ ಅಂಗಗಳಲ್ಲಿ ಸೇರಿಕೊಂಡುಬಿಟ್ಟಿದ್ದಾರೆ. ಇಂಥಾ ರಾಕ್ಷಸರನ್ನು, ಪಾಪಿಗಳನ್ನು ಹೊರದೂಡ ಬೇಕಾಗಿದೆ. ಇವತ್ತು ಬೇಕಾದರೆ ಹಳ್ಳಿಗಳಿಗೆ ಹೋಗಿ ತಾವು ನೋಡಿದರೆ ಗೊತ್ತಾಗುತ್ತದೆ. ಫೈಲ್‌ಗಳನ್ನು ವಿಲೇವಾರಿ ಮಾಡಿದಾಕ್ಷಣ ಆಡಳಿತದಲ್ಲಿ ದಕ್ಷತೆ ಬರುವುದಿಲ್ಲ. ಇವತ್ತು ತಹಶೀಲ್ದಾರ್‌ರವ ರಾಗಲೀ ಇಲ್ಲವೇ ಒಬ್ಬ ಡೆಪ್ಯೂಟಿ ಕಮೀಷನರ್‌ರವರಾಗಲೀ ಮುಖ್ಯಮಂತ್ರಿಗಳವರು ಬಂದರು ಎಂದರೆ ಎಲ್ಲರೂ ಬಂದು ಸೇರಿಕೊಂಡು ನಿಮ್ಮ ಎದುರಿಗೆ ಭಯ ಭೀತಿಯಿಂದ ನಾಟಕ ಮಾಡಬಹುದು ಆದರೆ ಸಾರ್ವಜನಿಕರಿಗೆ ಅನುಕೂಲಕರವಾಗುವ ರೀತಿಯಲ್ಲಿ ದಕ್ಷ ಆಡಳಿತ ಇಲ್ಲವೇ ಇಲ್ಲ. ಒಳ್ಳೆಯ ದಕ್ಷ ಮಂತ್ರಿಗಳಿದ್ದಾರೆ ಆದರೆ ಒಳ್ಳೆಯ ದಕ್ಷ ಸರ್ಕಾರವಿಲ್ಲ. ಬಹಳ ಉತ್ಸಾಹ ಶಾಲಿ ಮುಖ್ಯಮಂತ್ರಿಗಳಿದ್ದಾರೆ, ಆದರೆ ಸರ್ಕಾರವಿಲ್ಲ. ಇನ್ನೊಂದು ಒಳ್ಳೆಯ ಕೆಲಸವನ್ನು ನಮ್ಮ ಮುಖ್ಯಮಂತ್ರಿಗಳವರು ಮಾಡಿದ್ದಾರೆ, ಅದು ಏನೆಂದರೆ ಈ ವರ್ಗಾವಣೆ ಮಾಡುವುದನ್ನು ನಿಲ್ಲಿಸಿದ್ದು. ಇದು ಒಂದನ್ನು ಮಾತ್ರ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ, ಇಲ್ಲದಿದ್ದರೆ ಏನಾಗುತ್ತಿತ್ತು ಎಂದರೆ ಅವರೆಲ್ಲಾ ಬಂದು ನಮಗೆ ತಿಗಣೆಯ ಕಾಟದ ಹಾಗೆ ತೊಂದರೆ ಕೊಡುತ್ತಿದ್ದರು. ನಮ್ಮ ಶಾಸಕರ ಭವನಕ್ಕೆ ಬಂದು ಸ್ವಾಮಿ, ನನ್ನ ತಾಯಿಗೆ ಖಾಯಿಲೆ, ಇಲ್ಲ ನನ್ನ ಹೆಂಡತಿ ಗರ್ಭಿಣಿ ಅಂತ ಒಂದಲ್ಲ ಒಂದು ಕಾರಣ ಹೇಳಿ ನಮಗೆ ಟ್ರಾನ್ಸ್‌ಫರ್ ಮಾಡಿಸಿಕೊಡಿ ಎಂದು ತೊಂದರೆ ಕೊಡುತ್ತಿದ್ದರು. ಆದರೆ ಮಾನ್ಯ ಗುಂಡೂರಾಯರ ಸರ್ಕಾರ ಬಂದ ಮೇಲೆ ಈ ಟ್ರಾನ್ಸ್‌ಫರ್‌ಗಳನ್ನು ಕ್ಯಾನ್ಸಲ್ ಮಾಡುವ ಕೆಲಸ ಸ್ವಲ್ಪ ಮಟ್ಟಿಗೆ ಕಾಟ ಕಡಿಮೆಯಾಗಿದೆ. ಈಗ ಟ್ರಾನ್ಸ್‌ಫರ್ ಮಾಡಿಸಿಕೊಡಿ ಎಂದು ಯಾರೂ ನಮ್ಮ ಹತ್ತಿರ ಬರುವುದಿಲ್ಲ. ಆದರೆ ಇದು ಭಾರಿ ಸಾಧನೆಯಿಂದಲೇ ನಿಮ್ಮ ಆಡಳಿತ ದಕ್ಷತೆ ಹೆಚ್ಚುತ್ತದೆಂದು ಹೇಳುವುದಕ್ಕಾಗುವುದಿಲ್ಲ. ನಿಮ್ಮ ಆಡಳಿತ ಯಂತ್ರವೇನಿದೆ, ರಥದ ಚಾಲನೆ ನಿಮ್ಮ ಕೈಯಲ್ಲಿದೆ, ಆ ರಥದ ಶಕ್ತಿ ನಿಮ್ಮ ಕೈಯಲ್ಲಿ ಈಗ ಇದೆ. ಅದನ್ನು ಸರಿಯಾಗಿ ನಡೆಸಿಕೊಂಡು ಹೋಗತಕ್ಕಂಥ ಜವಾಬ್ದಾರಿ ನಿಮ್ಮದಾಗಿದೆ. ಆದರೆ ಕುದುರೆ ಒಂದಿಷ್ಟು ಎದ್ದು ಒದರಿ ಸ್ವಲ್ಪ ದೂರ ಹೋದರೆ ದಾರಿ ಸಾಗಿದ ಹಾಗಲ್ಲ, ಆಡಳಿತ ಯಂತ್ರ ನಿಮ್ಮ ಕೈಯಲ್ಲಿರುವುದರಿಂದ ಅದನ್ನು ಸರಿಯಾದ ದಾರಿಯಲ್ಲಿ ನಡೆಸಿಕೊಂಡು ಹೋಗುವುದು ನಿಮ್ಮ ಕರ್ತವ್ಯವಾಗಿದೆ.

ಇನ್ನು ತಾವು ಏನು ಕೆಲವು ಸಣ್ಣಪುಟ್ಟ ಸವಲತ್ತುಗಳನ್ನು ಕೊಡುತ್ತಿದ್ದೀರಿ ಅದರ ಲಾಭವನ್ನು ದುರ್ಬಲ ವರ್ಗದವರು, ಮಧ್ಯಮ ವರ್ಗದವರು, ಪಡೆಯುತ್ತಿದ್ದಾರೆ. ಆದರೆ ಮೇಲ್ಮಟ್ಟದಲ್ಲಿರತಕ್ಕ ಅಧಿಕಾರಿಗಳೇನಿದ್ದಾರೆ, ಉತ್ತಮ ವರ್ಗದವರು, ಅವರು ಬಹಳ ಬುದ್ಧಿವಂತರಿದ್ದಾರೆ, ಅವರು ಏನನ್ನೂ ಕೇಳುವುದಕ್ಕೆ ಹೋಗುವುದಿಲ್ಲ ಏತಕ್ಕೆಂದರೆ ಅವರಿಗೆ ಎಲ್ಲಾ ಗುತ್ತು ಇರುತ್ತದೆ, ಎಲ್ಲಿ ಯಾವ ನಲ್ಲಿಯನ್ನು ತಿರುವಬೇಕು, ಯಾವ ಸ್ವಿಚ್ಚನ್ನು ಹಾಕಬೇಕು ಎನ್ನುವುದು ಗೊತ್ತಿರುತ್ತದೆ. ಅವರ ಏನೊಂದು ಫೌಂಡೇಷನ್ ಇದೆ ಅದು ಅಲುಗಾಡಿಲ್ಲ ಆದರೆ ಮಧ್ಯದಲ್ಲಿರತಕ್ಕವರಿಗೆ ಸ್ವಲ್ಪ ಕಷ್ಟವಾಗಿದೆ. ಇವತ್ತು ಶಿಸ್ತನ್ನು ಮೇಲಿನಿಂದಲೂ ಜಾರಿಗೆ ತರಬೇಕಾಗಿದೆ. ಅವರು ಸರ್ಕಾರವನ್ನು ಹೇಗೆ ಬೇಕಾದರೂ ಉಪಯೋಗಿಸಿಕೊಳ್ಳತಕ್ಕ ಕೆಲಸ ಮಾಡಬಾರದು ಎನ್ನುವುದೇ ನನ್ನ ಅಭಿಪ್ರಾಯ.

ಅಧ್ಯಕ್ಷರೇ, ಇವತ್ತು ಮಾನ್ಯ ಮುಖ್ಯಮಂತ್ರಿಗಳವರಿಗೆ ಒಳ್ಳೆಯ ಉದಾರ ಮನೋಭಾವನೆ ಇದೆ ಆದರೆ ಅವರು ಉದಾರವಾಗಿ ಕೊಟ್ಟಿದ್ದು ಯಾರಿಗೆ ತಲುಪಿತು, ಅದರ ಪರಿಣಾಮವಾಗಿ ಎಷ್ಟು ಜನರಿಗೆ ಅನುಕೂಲವಾಗುತ್ತದೆ ಎಂಬುದನ್ನು ಸಹ ನೋಡಬೇಕಾಗುತ್ತದೆ. ಅವರ ಒಂದು ಉದಾರತನದಿಂದ, ನನಗೆ ೫ ಸಾವಿರ ಕೊಡಿ ನಾನು ವಿಧಾನ ಸೌಧವನ್ನೇ ನಿಮಗೆ ಬರೆದು ಕೊಡುತ್ತೇನೆ ಎಂದರೆ, ಅದರ ಪರಿಣಾಮವೇನಾಯಿತು? ಅದರ ಸಿಂಧುತ್ವವೇನಾಗುತ್ತದೆ? ಆದುದರಿಂದ ಅವರು ಆ ರೀತಿ ಉದಾರವಾಗಿ ಕೊಡುವುದರಿಂದ, ಅದರಿಂದ ಎಷ್ಟು ಜನರಿಗೆ ಬೆನಿಫಿಟ್ ಆಗುತ್ತದೆ ಎಂಬುದನ್ನು ನೋಡಬೇಕಾಗುತ್ತದೆ, ಇವತ್ತು ಫೈಲ್‌ಗಳ ವಿಲೇವಾರಿ ಮಾಡಿದ್ದಾರೆ, ವರ್ಗಾವಣೆ ನಿಲ್ಲಿಸಿದ್ದಾರೆ, ಸ್ಥಳೀಯ ನೇಮಕಾತಿ, ಸೇವಾ ಅವಧಿಯ ವಿಸ್ತರಣೆಯನ್ನು ನಿಲ್ಲಿಸಿದ್ದಾರೆ, ಇದರ ಜೊತೆಗೆ ಒಂದು ಮಾತು ಕೇಳಿ ಬರುತ್ತಿದೆ ಅದು ಏನೆಂದರೆ ಶ್ರೀ ದೇವರಾಜ ಅರಸ್‌ರವರ ಕಾಲದಲ್ಲಿ ಹಿಂದುಳಿದ ಜಾತಿಯ ಅಧಿಕಾರಿಗಳಿಗೆ ಏನು ಒಂದು ರಕ್ಷಣೆ ಇತ್ತು ಅದು ಇವತ್ತು ಇಲ್ಲ ಎನ್ನುವ ಮಾತು ಕೇಳಿ ಬರುತ್ತಿದೆ. ಅದು ಎಷ್ಟರ ಮಟ್ಟಿಗೆ ನಿಜ ವಿದೆಯೋ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ಇನ್ನು ೨೦ ಅಂಶದ ಕಾರ್ಯಕ್ರಮ

ವನ್ನು ತೀವ್ರಗೊಳಿಸಿದ್ದೇವೆಂದು ಹೇಳಿದ್ದಾರೆ. ಇದು ಎಲ್ಲಾ ಜನರ ಒಳಿತಿಗೋಸ್ಕರವಾಗಿ ಯೋಚನೆ ಮಾಡಿ ಮಾಡಿರತಕ್ಕ ಯೋಜನೆಯಾಗಿದೆ. ಆದರೆ ಇವತ್ತು ೨೦ ಅಂಶದ ಕಾರ್ಯಕ್ರಮವೇನಿದೆ ಇದನ್ನು ಹೇಳುತ್ತಾ ಹೇಳುತ್ತಾ ಇವತ್ತು ಅದರ ಅರ್ಥ ದಿನೇ ದಿನೇ ಕಳೆದುಕೊಂಡು ಹೋಗುತ್ತಿದೆ. ಈಗ ತಾವು ಕೆಲವು ಕಮ್ಯೂನಿಸ್ಟ್ ರಾಷ್ಟ್ರಗಳನ್ನು ನೋಡಿದ್ದೀರಿ, ನಾನೂ ಸಹ ಸಾಕಷ್ಟು ನೋಡಿದ್ದೇನೆ. ಅವರು ಏನಾದರೂ ಒಂದು ನ್ಯೂ ಡೀಲನ್ನು ಹಾಕಿಕೊಂಡರು ಎಂದರೆ ಅದಕ್ಕಾಗಿ ಪ್ರತಿಯೊಬ್ಬರು ಅದನ್ನು ಯಶಸ್ವಿಗೊಳಿಸುವುದಕ್ಕಾಗಿ ಶ್ರಮಿಸುತ್ತಾರೆ. ಆದರೆ ಇವತ್ತು ನಮ್ಮ ರಾಷ್ಟ್ರದಲ್ಲಿ ಏನಾಗಿದೆ ಎಂದರೆ ಯಾವುದೇ ಒಂದು ಕಾರ್ಯಕ್ರಮಗಳನ್ನು ಹಾಕಿಕೊಂಡರೂ ಸಹ ಅವು ಕಾರ್ಯಗತವಾಗುತ್ತಿಲ್ಲ. ಇದೇ ನಮಗೂ ಅವರಿಗೂ ಇರತಕ್ಕಂಥ ಬೇಸಿಕ್ ಡಿಸ್‌ಪ್ಯಾರಿಟಿ. ಇವತ್ತು ೨೦ ಅಂಶದ ಕಾರ್ಯಕ್ರಮವೆಂದು ಹೇಳುತ್ತೀರಿ, ನ್ಯೂ ಡೀಲ್ ಎಂದು ಹೇಳುತ್ತೀರಿ ಆದರೆ ಅದಕ್ಕೆ ಒಂದು ಕಾಲವನ್ನು ನಿಗದಿ ಮಾಡುತ್ತಿಲ್ಲ. ಅದೇ ಇವತ್ತು ಚೈನಾ ದೇಶವನ್ನು ನಾವು ನೋಡುವುದಾದರೆ, ಅಲ್ಲಿ ೩೬, ೩೭ ಕೋಟಿ ಜಮೀನು ಇರುವುದು ಅಂದರೆ ನಮಗಿಂತ ೭ ಕೋಟಿ ಎಕರೆಯಷ್ಟು ಭೂಮಿ ಜಾಸ್ತಿ ಇರಬಹುದು, ಇವತ್ತು ಅಲ್ಲಿ ಅವರು ೩೧ ಕೋಟಿ ಟನ್ ಆಹಾರವನ್ನು ಬೆಳೆಯುತ್ತಿದ್ದಾರೆ, ಆದರೆ ನಾವು ಕೇವಲ ೧೩½ ಕೋಟಿ ಟನ್ ಆಹಾರವನ್ನು ಬೆಳೆಯುತ್ತಿದ್ದೇವೆ. ಇದರಿಂದ ಅವರು ಮನುಷ್ಯ ಶಕ್ತಿಯನ್ನು ಹೇಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ, ಅವರ ಆಡಳಿತ ದಕ್ಷತೆ ಎಷ್ಟರ ಮಟ್ಟಿಗೆ ಇದೆ ಎನ್ನುವುದು ಗೊತ್ತಾಗುತ್ತದೆ. ಆದುದರಿಂದ ಇದು ಜನರ ಶಿಸ್ತಿನಿಂದ ಇರುವುದನ್ನು ಕಲಿಯದಿದ್ದರೆ ಇದನ್ನೆಲ್ಲಾ ಮಾಡುವುದಕ್ಕೆ ಆಗುವುದಿಲ್ಲ. ಇದು ಬರೀ ಕಮ್ಯುನಿಸ್ಟ್ ರಾಷ್ಟ್ರ ಒಂದರಲ್ಲಿಯೇ ಅಲ್ಲ, ಜಪಾನ್ ದೇಶದಲ್ಲೂ ಸಹ ತಾವು ಶಿಸ್ತು ಇರುವುದನ್ನು ನೋಡಬಹುದು. ಅಲ್ಲಿ ಒಬ್ಬ ಟ್ಯಾಕ್ಸಿ ಡ್ರೈವರ್ ಒಂದು ೫ ಪೈಸೆ ಜಾಸ್ತಿ ತೆಗೆದುಕೊಳ್ಳುವುದಿಲ್ಲ, ಅಷ್ಟು ಬೇಸಿಕ್ ಹಾನೆಸ್ಟಿ ಅವರಲ್ಲಿದೆ. ಅಂಥಾ ಶಿಸ್ತು ಅಧಿಕಾರಿಗಳಲ್ಲಿಯಾಗಲೀ, ಮಂತ್ರಿಗಳಲ್ಲಿಯಾಗಲೀ, ಶಾಸಕರುಗಳಲ್ಲಿಯಾಗಲೀ ಇಲ್ಲ.

೩–೩೦ ಪಿ.ಎಂ.

ಶಿಸ್ತು ಎಲ್ಲಿಂದ ಬರಬೇಕು. ನಮ್ಮಲ್ಲಿ ಗಾಡಿ ಹೊಡೆದುಕೊಂಡು ಹೋಗುವವರಿಗೆ ಲೆಫ್ಟ್–ರೈಟ್ ಗೊತ್ತಿರುವುದಿಲ್ಲ. ಹಿಂದಿನಿಂದ ಕಾರಿನ ಹಾರ್ನ್ ಕೇಳಿದರೆ ಸಾಕು ಎರಡು ಗಾಡಿಗಳು ಎಡಕ್ಕೆ ಹೋದರೆ ಎರಡು ಗಾಡಿಗಳು ಬಲಕ್ಕೆ ಹೋಗುತ್ತವೆ. ಗಾಡಿಯನ್ನು ಯಾವ ಕಡೆ ಹೊಡೆಯಬೇಕೆಂಬ ಪ್ರಜ್ಞೆಯನ್ನು ಜನಗಳಲ್ಲಿ ತರದೆ ಇರತಕ್ಕ ಸರ್ಕಾರಗಳು ಶಿಸ್ತಿನ ಬಗ್ಗೆ ಮಾತನಾಡುವುದಕ್ಕೆ ನೈತಿಕ ಹಕ್ಕು ಇದೆಯೇ? ನಮ್ಮ ದೇಶದಲ್ಲಂತೂ ಶಿಸ್ತು ಇಲ್ಲ. ಒಬ್ಬ ವ್ಯಕ್ತಿ ಕಾಯಿಲೆಯಿಂದ ಸಾಯುತ್ತಾ ಬಿದ್ದಿರುತ್ತಾನೆಂದರೂ ದುಡ್ಡು ಕೊಡದ ಹೊರತು ನಾನು ಚಿಕಿತ್ಸೆ ಮಾಡುವುದಿಲ್ಲ ಎಂದು ಹೇಳತಕ್ಕಂಥಾ ವೈದ್ಯರು ನಮ್ಮಲ್ಲಿ ಇದ್ದಾರೆ. ಕೊಟ್ಟ ಸಿಮೆಂಟನ್ನು ಅರ್ಧಕರ್ಧ ಮಾರಿಕೊಂಡು ಕಟ್ಟಿಸಿದ ಕಟ್ಟಡಗಳು, ಸೇತುವೆಗಳು ಬಿದ್ದು ಹೋಗತಕ್ಕ ಪರಿಸ್ಥಿತಿ ಉಂಟಾಗಿದೆ. ಅಂಥ ಇಂಜಿನಿಯರ್‌ಗಳು ನಮ್ಮಲ್ಲಿ ಇದ್ದಾರೆ. ತಾವು ಎಲ್ಲೆಲ್ಲೋ ತಿರುಗಾಡಿಕೊಂಡು ಬೇರೆಯವರಿಂದ ಪಾಠ ಹೇಳಿಸುವ ಉಪಾಧ್ಯಾಯರುಗಳು ಇದ್ದಾರೆ. ಇಂಥವರನ್ನು ತಯಾರಿಸುವ ಜನ ನಮ್ಮಂಥ ಶಾಸಕರನ್ನು ಕಳುಹಿಸಿದ್ದಾರೆ. ಪರಿಸ್ಥಿತಿ ಹೀಗಿರುವಾಗ, ನಾವು ಯಾವುದೋ ಒಂದನ್ನು ಸರಿ ಮಾಡುತ್ತೇವೆಂದರೆ ಆಗುವುದಿಲ್ಲ. ಆದುದರಿಂದ ನಮ್ಮ ಲಿಮಿಟೇಷನ್ಸ್ ಅನ್ನು ಮೊದಲು ಅರ್ಥ ಮಾಡಿಕೊಳ್ಳಿ. ನಾವು ಏನೇನು ಪ್ರಗತಿ ಸಾಧಿಸಿದ್ದೇವೆಂಬುದನ್ನು ಹೇಳಬೇಕಾದುದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ. ಇದು ಹೌಸ್ ಆಫ್ ಕಾಮನ್ಸ್‌ನ ಸಂಪ್ರದಾಯದಿಂದ ಬಂದಿರುವುದು. ಆದರೆ ಅದು ಮಾತ್ರ ನಮ್ಮ ರಾಜ್ಯಪಾಲರ ಭಾಷಣದಲ್ಲಿ ಕಾಣುತ್ತಿಲ್ಲ. ಆಹಾರ ಧಾನ್ಯ, ಸಕ್ಕರೆ ಮತ್ತು ವನಸ್ಪತಿಗೆ ಸಂಬಂಧಪಟ್ಟ ಹಾಗೆ ೭೫ ಸಾವಿರ ಅಂಗಡಿಗಳು ಇವೆ ಎಂದು ಹೇಳಿದ್ದಾರೆ. ಆದರೆ ಅವು ಎಲ್ಲಿವೆ ಎಂಬುದನ್ನು ನಾನಂತೂ ನೋಡಿಲ್ಲ. ಬಹುಶಃ ಅವು ಮಂತ್ರಿಗಳು ಇರುವ ಕಡೆ ಇರಬಹುದೆಂದು ಕಾಣುತ್ತದೆ.

ಇನ್ನು ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಬಗ್ಗೆ ಮತ್ತು ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಕಟ್ಟಿಸುವ ಬಗ್ಗೆ ೧೯೮೧ಕ್ಕೆ ಆ ಯೋಜನೆಗಳನ್ನೆಲ್ಲ ಪೂರ್ಣ ಗೊಳಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.— ೧೯೮೧ರೊಳಗೆ ಪೂರ್ಣಗೊಳಿಸಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ ಎಂದು ಹೇಳಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್.—ನೀವು ಇಂಗ್ಲೀಷಿನಲ್ಲಿರುವುದನ್ನು ನೋಡಿ ಹೇಳುತ್ತಿದ್ದೀರಿ. ನಾನು ಕನ್ನಡದಲ್ಲಿರುವುದನ್ನು ನೋಡಿ ಹೇಳುತ್ತಿದ್ದೇನೆ. ಈ ವರ್ಷದ ರಾಜ್ಯಪಾಲರ ಭಾಷಣವನ್ನು ಓದುತ್ತೇನೆ ಕೇಳಿ.

ಶ್ರೀ ಎಂ. ವಿ. ರಾಜಶೇಖರನ್.—ಇಂಗ್ಲೀಷಿನಲ್ಲಿ ಬರೆದಿರುವುದೂ ಸುಳ್ಳು, ಕನ್ನಡದಲ್ಲಿ ಬರೆದಿರುವುದೂ ಸುಳ್ಳು.

(ಶ್ರೀಮಾನ್ ಹೆಚ್. ಟಿ. ಕೃಷ್ಣಪ್ಪನವರು ಅಧ್ಯಕ್ಷಪೀಠವನ್ನು ಅಲಂಕರಿಸಿದರು)

ಶ್ರೀ ಜೆ.ಹೆಚ್. ಪಟೇಲ್.—ಭಾರತ ಸರ್ಕಾರವು ವಿಜಯನಗರ ಉಕ್ಕಿನ ಯೋಜನೆಗೆ ಅಂತಿಮ ಒಪ್ಪಿಗೆ ನೀಡುವುದನ್ನು ನಿರೀಕ್ಷಿಸುತ್ತಿದ್ದೇವೆ ಮತ್ತು ಈವರೆಗೆ ತೊಡಗಿಸಿದ ಬಂಡವಾಳವನ್ನು ರಾಜ್ಯದಲ್ಲಿಯೇ ಉಪಯೋಗಿಸಿಕೊಳ್ಳಲು ಸಾಧ್ಯವಾಗುವಂತೆ, ಭಾರತ ಸರ್ಕಾರವು ಕುದುರೆ ಮುಖದ ಕಬ್ಬಿಣ ಅದುರಿನ ಸಾಂದ್ರಗಳನ್ನು ಮತ್ತಷ್ಟು ಸಂಸ್ಕರಿಸಲು ಮಂಗಳೂರಿನಲ್ಲಿ ಪೆಲೆಟೈಸೇಷನ್ ಪ್ಲಾಂಟನ್ನು ಸ್ಥಾಪಿಸಬಹುದೆಂದು ನಿರೀಕ್ಷಿಸುತ್ತಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದು ಸರ್ಕಾರದ ಉದ್ದೇಶ ಅಷ್ಟೆ.

ಶ್ರೀ ಜೆ.ಹೆಚ್. ಪಟೇಲ್.—ಅದು ಒಂದೇ ಅಲ್ಲ, ಅದೇ ರೀತಿ ಅನೇಕ ಕಡೆಗಳಲ್ಲಿ ಹೇಳಿದ್ದಾರೆ. ಸ್ವರ್ಗವನ್ನೇ ಭೂಮಿಗೆ ತಂದು ನಿಮ್ಮೆಲ್ಲರಿಗೂ ಮೃಷ್ಟಾನ್ನ ಭೋಜನ ಬಡಿಸುತ್ತೇವೆ, ಎಲ್ಲ ಬೇಡಿಕೆಗಳನ್ನು ಈಡೇರಿಸತಕ್ಕ ಯೋಜನೆಯನ್ನು ಮಾಡಿದ್ದೇವೆ ಮತ್ತು ಮಾಡುತ್ತಲಿದ್ದೇವೆಂದು ಹೇಳುತ್ತಾರೆ. ಅದಕ್ಕೆ ಏಕೆ ನೀವು ಸುಮ್ಮನೆ ಮಧ್ಯೆ ಪ್ರವೇಶಿಸುತ್ತೀರಿ ?

ಒಬ್ಬರು ಮಾನ್ಯ ಸದಸ್ಯರು.—ಯೋಚನೆ ಮಾಡುವುದು ತಪ್ಪೇ ?

ಶ್ರೀ ಜೆ.ಹೆಚ್. ಪಟೇಲ್,—ಯೋಚನೆ ಮಾಡುವುದು ತಪ್ಪಲ್ಲ. ಆದರೆ ನೀವು ಎಲ್ಲಿ ಯೋಚಿಸುತ್ತೀರಿ ? ನಿಜವಾಗಿಯೂ ಯೋಚನೆ ಮಾಡಿದ್ದರೆ ಏನು ಆಗಬೇಕಿತ್ತೋ ಅದು ಆಗುತ್ತಿತ್ತು. ಮೊದಲನೆಯದಾಗಿ, ನಿಮಗೆ ಯೋಚನೆ ಮಾಡುವುದಕ್ಕೆ ಆಗುತ್ತಿಲ್ಲ. ಇನ್ನು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹೇಳುವಾಗ ಬೆಂಗಳೂರು ನಗರಕ್ಕೆ ಜಾಸ್ತಿ ಹಣ ಖರ್ಚು ಮಾಡುತ್ತಾರೆಂಬ ಆಕ್ಷೇಪಣೆ ಮಾಡುತ್ತಾರೆಂದು ಯಾರೂ ಭಾವಿಸಬಾರದು. ಸುಮಾರು ೩೦ ಲಕ್ಷ ಜನಸಂಖ್ಯೆ ಇರತಕ್ಕ ಬೆಂಗಳೂರು ನಗರಕ್ಕೆ ಈಗ ೫೫ ಕೋಟಿ ರೂಪಾಯಿ ಹಣ ಖರ್ಚಾಗುತ್ತಿದೆ ಮತ್ತು ೧೯೮೨ರ ವೇಳೆಗೆ ೧೫೦ ಕೋಟಿ ರೂಪಾಯಿ ಯೋಜನೆಯನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಈಗಾಗಲೇ ಖರ್ಚು ಮಾಡಿರುವುದು ೧೨೦ ಕೋಟಿ ರೂಪಾಯಿಗಳು. ಮಾಡುವುದು ಬೇಡವೆಂದು ಹೇಳುವುದಿಲ್ಲ. ಆದರೆ ನಮ್ಮಲ್ಲಿರುವ ೨೫ ಸಾವಿರ ಗ್ರಾಮಗಳ ಪೈಕಿ ಸುಮಾರು ೭ ಸಾವಿರ ಗ್ರಾಮಗಳಿಗೆ ಈ ವರ್ಷದ ಅವರದೇ ಲೆಕ್ಕದ ಪ್ರಕಾರ ಕುಡಿಯುವ ನೀರು ಅಲ್ಲ ಗಾಡಿಗಳು ಸಹ ಹೋಗಲು ಯೋಗ್ಯವಾದ ರಸ್ತೆಗಳು ಇಲ್ಲ. ಅದೇ ರೀತಿ, ಸುಮಾರು ೨೫೦ ಸಣ್ಣಪುಟ್ಟ ನಗರಗಳು ಇವೆ. ಅವುಗಳ ಪರಿಸ್ಥಿತಿ ಏನು ? ಆದ್ದರಿಂದ ಅವುಗಳ ಕಡೆಗೂ ಸಹ ಗಮನ ಕೊಡಬೇಕೆಂದು ಹೇಳುತ್ತೇನೆಯೇ ವಿನಹ ಬೆಂಗಳೂರು ನಗರದ ಕಡೆ ಗಮನ ಕೊಡಬಾರದೆಂದು ಹೇಳುವುದಿಲ್ಲ. ಇಂಥ ಪಟ್ಟಣದಲ್ಲಿ ನೀವು ಇರುತ್ತೀರಿ ಮತ್ತು ಬೇರೆಯವರನ್ನು ಕರೆದುಕೊಂಡು ಬಂದು ನಿಮ್ಮ ನಗರವನ್ನು ತೋರಿಸುತ್ತೀರಿ. ಏಕೆಂದರೆ, ಸಾಲ ತೆಗೆದುಕೊಳ್ಳುವ ಸಲುವಾಗಿ ಆ ದೇಶ ಈ ದೇಶದವರನ್ನು ಕರೆದುಕೊಂಡು ಬಂದು ದೆಹಲಿ, ಬಾಂಬೆ, ಬೆಂಗಳೂರಿನಂಥ ನಗರಗಳನ್ನು ತೋರಿಸಬೇಕಲ್ಲ. ತೋರಿಸದಿದ್ದರೆ, ಸಾಲ ಕೊಡುವುದಿಲ್ಲ ಮತ್ತು ಕೊಟ್ಟ ಸಾಲವನ್ನು ವಾಪಸ್ಸು ಕೇಳುತ್ತಾರೆ. ಈ ಕಾರಣದಿಂದ ನಗರಗಳನ್ನು ಸುಂದರಗೊಳಿಸತಕ್ಕ ಕಾರ್ಯ ನಡೆಯುತ್ತಿದೆ. ನಗರದಲ್ಲಿರತಕ್ಕ ಬಡವರಿಗೆ, ಹಾಗೂ ಕೊಳಚೆ ಪ್ರದೇಶಗಳಲ್ಲಿರುವವರಿಗೆ ಆದರೂ ವಿದ್ಯಾಭ್ಯಾಸ ಮತ್ತಿತರ ಅನುಕೂಲತೆಗಳು ದೊರಕಿದರೆ ಏನು ಅಭ್ಯಂತರ ಇಲ್ಲ. ಅದೇ ರೀತಿ ಕಾರ್ಮಿಕರಿಗೆ ಸಿಕ್ಕಿದರೆ ಏನು ಅಭ್ಯಂತರ ಇಲ್ಲ. ಅದನ್ನೆಲ್ಲ ಬಿಟ್ಟು ಇವರೇ ಒಂದು ಸ್ವರ್ಗಲೋಕವನ್ನು ನಿರ್ಮಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಬಹಳ ಮೇಲೆ ಹೋದಂತಹ ಅಧಿಕಾರಿಗಳು, ಮಂತ್ರಿಗಳು ಹಾಗೂ ವರ್ತಕರು ಇವರೆಲ್ಲ ಸೇರಿಕೊಂಡು ಸ್ವರ್ಗಲೋಕ ನಮ್ಮ ದೇಶದಲ್ಲಿದೆ, ಇನ್ನೊಂದು ಮರ್ತ್ಯ ಲೋಕ ಬೇರೆ ಇದೆ ಎಂದು ಹೇಳುತ್ತಾರೆ. ಇವರುಗಳಿಗೆಲ್ಲ ಯಾವುದಾದರೂ ಒಂದು ಮಾರ್ಗದಿಂದ ದುಡ್ಡು ಮಾಡಿ ಕೊಳ್ಳಬೇಕೆಂಬ ಉದ್ದೇಶ ಇರುತ್ತದೆ. ಪಾತಾಳಲೋಕದಲ್ಲಿ ಕೇಳತಕ್ಕ ಜನರೇ ಇಲ್ಲ. ಹೀಗೆ ಈ ಮೂರು ಹಂತದ ಸಮಾಜವನ್ನು ನಿರ್ಮಾಣ ಮಾಡಲಾಗಿದೆ.

ಒಬ್ಬರು ಮಾನ್ಯ ಸದಸ್ಯರು.—ತಾವು ಯಾವ ಲೋಕದಲ್ಲಿದ್ದೀರಿ ?

ಶ್ರೀ ಜೆ.ಹೆಚ್. ಪಟೇಲ್.—ನಾನು ಯಾವ ಲೋಕದಲ್ಲಿದ್ದೇನೆಂದರೆ (ಮಾನ್ಯ ಅಧ್ಯಕ್ಷರ ಅನುಮತಿ ಪಡೆದು ಹೇಳುತ್ತೇನೆ) ಟಿ.ಎಸ್. ಈಲಿಯಟ್ ಎಂಬ ಕವಿ ಬಹಳ ನೈತಿಕ ಅಧಃಪತನ ಹೊಂದಿದ ಸಮಾಜವನ್ನು ಕಂಡು ಮರುಗಿ 'ವೇಸ್ಟ್ ಲ್ಯಾಂಡ್' ಎಂಬ ಒಂದು ಕಾವ್ಯವನ್ನು ಬರೆದಿದ್ದಾರೆ. ಅದರಲ್ಲಿ ಏನು ಹೇಳುತ್ತಾನೆಂದರೆ, ರಾಕ್ಷಸರು ಇಷ್ಟು ಕ್ರೂರಿಗಳು, ಮಾನವರು ಇಷ್ಟು ಲೋಭಿಗಳು, ದೇವತೆಗಳು ಇಷ್ಟು ಲೋಲುಪ್ತರು, ಏನು ಮಾಡುವುದು ಎಂಬ ವಿಚಾರ ಬರುತ್ತದೆ. ಇದಕ್ಕೆ ಪರಿಹಾರ ಕಂಡುಹಿಡಿಯದಿದ್ದರೆ ಎಲ್ಲರಿಗೂ ಕಷ್ಟವಾಗುತ್ತದೆಂದು ಎಲ್ಲರೂ ಕೂಡಿ ದೇವರ ಹತ್ತಿರ ಹೋದಾಗ, ದೇವರು 'ದ' ಎಂದು ಉತ್ತರಿಸುತ್ತಾನೆ. ಅದು ಅವರಿಗೆ ಅರ್ಥವಾಗಲಿಲ್ಲವೆಂದಾಗ 'ದತ್ತ, ದಯಾತ್ವಂ, ದಮ್ಯತಃ ಎಂದು ಹೇಳುತ್ತಾನೆ. ಇವುಗಳ ಅರ್ಥವೇನೆಂದರೆ, ಮನುಷ್ಯನಿಗೆ ಹೇಳುತ್ತಾನೆ. ನೀವು ಲೋಭಿಗಳಾಗಿದ್ದೀರಿ, ನಿಮಗೆ ಕೊಡುವುದು ಗೊತ್ತಿಲ್ಲ, ದತ್ತ ಎಂದರೆ ಕೊಡುವುದು, ಅದನ್ನು ಕಲಿಯಿರಿ ಎನ್ನುತ್ತಾನೆ. ರಾಕ್ಷಸರಿಗೆ ಹೇಳುತ್ತಾನೆ, ನೀವು ಕ್ರೂರಿಗಳಾಗಿದ್ದೀರಿ, ನೀವು ಸ್ವಲ್ಪ ದಯೆಯನ್ನು ಕಲಿಯಿರಿ ಎಂದು. ದೇವತೆಗಳಿಗೆ ಹೇಳುತ್ತಾನೆ, ನೀವು ರಂಭೆ–ಊರ್ವಶಿಯರ ಸಂಗದಿಂದ ಹಾಗೂ ಸುರಾಪಾನದಿಂದ ಹಾಳಾಗಿದ್ದೀರಿ, ನೀವು ಸ್ವಲ್ಪ ದಮ್ಯತಃ ಅಂದರೆ ಸಂಯಮವನ್ನು ಕಲಿಯಿರಿ ಎಂದು ಹೇಳುತ್ತಾನೆ. ಹೀಗೆ ಆಗ ೩ ತರಹದ ಜನರಿದ್ದರು. ಈಗ ಆ ಮೂರೂ ಗುಣಗಳಿರತಕ್ಕ ಜನರಿದ್ದಾರೆ. ನಾನು ಎಲ್ಲಿದ್ದೇನೆಂದರೆ. ನಿಮ್ಮ ಜೊತೆಯಲ್ಲಿದ್ದೇನೆ. ನಿಮ್ಮಲ್ಲಿ ಆ ಮೂರು ತರಹದ ಗುಣಗಳು ಜಾಸ್ತಿ ಇವೆ, ನನ್ನಲ್ಲಿ ಸ್ವಲ್ಪ ಕಡಿಮೆ ಇವೆ, ಇಲ್ಲವೆಂದು ನಾನು ಹೇಳುವುದಿಲ್ಲ. ಇವತ್ತಿನ ದಿವಸ ನಾವು ಈ ಸ್ಥಿತಿಗೆ ಬಂದಿದ್ದೇವೆ. ಆಮೇಲೆ ಮಾನ್ಯ ಅಧ್ಯಕ್ಷರೇ...

ಶ್ರೀ ಎ. ಲಕ್ಷ್ಮೀಸಾಗರ್.—ಇಬ್ಬರು ಮಂಗಳೂರಿನ ಹಂಪನಕಟ್ಟೆಯಲ್ಲಿ ಸೇರಿದರಂತೆ. 'ನೋಡ್ರೀ ಐತಾಳರೇ, ಈಗಿನ ಕಾಲದಲ್ಲಿ ಧರ್ಮ, ನೀತಿ ಎಲ್ಲಾ ಹೊರಟುಹೋಗಿದೆ, ಏನಾದರೂ ಉಳಿದಿದ್ದರೆ ಅದು ನನ್ನಲ್ಲಿ ಮಾತ್ರ, ಉಳಿಯದಿದ್ದರೆ ಅದು ನಿಮ್ಮಲ್ಲಿ ಮಾತ್ರ' ಎಂದು ಹೇಳಿದರಂತೆ.

ಶ್ರೀ ಜೆ.ಹೆಚ್. ಪಟೇಲ್.—ಬೆಂಗಳೂರಿನಂಥ ನಗರಕ್ಕೆ ೨೫೦ ಕೋಟಿ ರೂಪಾಯಿನ ಯೋಜನೆ ಹಾಕಿದ್ದೀರಿ. ಅದೇ ರೀತಿ ೭ ಸಾವಿರ ಗ್ರಾಮಗಳಿಗೆ ನವೆಂಬರ್ ೧೯೮೧ರೊಳಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇವೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಇದು ಈ ವರ್ಷದ ಭಾಷಣದಲ್ಲಿ ಹೇಳಿರುವುದು. ಹಿಂದಿನ ವರ್ಷದ ಭಾಷಣದಲ್ಲಿ ಸಂಪೂರ್ಣವಾಗಿ ಸಮಸ್ಯೆಯನ್ನು ಮನಗಂಡಿರುವುದರಿಂದ ಅತ್ಯಾವಶ್ಯಕವಾದ ಕುಡಿಯುವ ನೀರಿನ ಸರಬರಾಜು ಮಾಡದೇ ಹೋದರೆ ಸರ್ಕಾರ ಅನ್ನಿಸಿಕೊಳ್ಳುವುದಿಲ್ಲ ಆದ್ದರಿಂದ ಮುಂದಿನ ವರ್ಷದೊಳಗೆ ಆ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದ್ದರು. ಈಗ ನವೆಂಬರ್ ೧ರೊಳಗೆ ಮಾಡುವ ಉದ್ದೇಶವಿದೆ ಎಂದು ಹೇಳಿದ್ದಾರೆ. ಆಮೇಲೆ ಗ್ರಾಮೀಣ ಇಂಧನ ಶಕ್ತಿ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದು ಒಳ್ಳೆಯ ಸಲಹೆ. ಒಳ್ಳೆಯದನ್ನು ಒಳ್ಳೆಯದು ಎಂದು ಹೇಳೋಣ. ದೇಶಕ್ಕೇ ಮಾದರಿಯಾಗುವಂಥ ಕೆಲಸವನ್ನು ನಮ್ಮ ರಾಜ್ಯದಲ್ಲಿ ಮಾಡಿದರೆ ಒಳ್ಳೆಯದು. ಬಯೋಗ್ಯಾಸ್ ಪ್ಲಾಂಟ್‌ಗಳನ್ನು ಸ್ಥಾಪಿಸುವ ಬಗ್ಗೆ ಹೇಳಿದ್ದಾರೆ. ಗೋಬರ್ ಗ್ಯಾಸ್ ಪ್ಲಾಂಟ್ ಏನಿದೆ ಇದರಿಂದ ಎಲ್ಲರಿಗೂ ಅನುಕೂಲವಾಗುವುದಿಲ್ಲ. ಹೆಚ್ಚು ಹಸುಗಳನ್ನು ಕಟ್ಟಿಕೊಂಡಿರುವವರಿಗೆ ಮಾತ್ರ ಅನುಕೂಲವಾಗುತ್ತದೆ. ಆದರೆ ಬಯೋಗ್ಯಾಸ್ ಪ್ಲಾಂಟ್ ಆ ರೀತಿಯಲ್ಲ. ತಮ್ಮ ಮಲ ಮೂತ್ರಗಳನ್ನು ಉಪಯೋಗ ಮಾಡಿಕೊಂಡು, ಕಾಡನ್ನು ಕಡಿಯದೇ ಅರಣ್ಯ ಸಂಪತ್ತನ್ನು ನಾಶ ಮಾಡದೇ, ಹೆಚ್ಚು ವಿದ್ಯುಚ್ಛಕ್ತಿ ಅಭಾವವನ್ನು ಅನುಭವಿಸದೇ ಬಯೋಗ್ಯಾಸ್‌ನಿಂದ ಕಟ್ಟಿಗೆ ಮತ್ತು ವಿದ್ಯುಚ್ಛಕ್ತಿ ಎರಡೂ ಸಮಸ್ಯೆಯನ್ನು ಬೇರೆ ದೇಶಗಳಲ್ಲಿ ಬಗೆಹರಿಸಿಕೊಂಡಿದ್ದಾರೆ. ಆದುದರಿಂದ ಬಯೋಗ್ಯಾಸ್ ಪ್ಲಾಂಟನ್ನು ಸ್ಥಾಪಿಸುವ ಬಗ್ಗೆ ಸೀರಿಯಸ್ಸಾಗಿ ಆಲೋಚನೆ ಮಾಡಬೇಕಾಗಿದೆ. ಮುಂದಿನ ವರ್ಷದಲ್ಲಾದರೂ ಉದ್ದೇಶಿಸಲಾಗಿದೆ, ನಿರೀಕ್ಷಿಸಲಾಗಿದೆ, ಯೋಚಿಸಲಾಗಿದೆ ಎಂದು ಹೇಳದೇ ಈ ಕೆಲಸ ಕಾರ್ಯವನ್ನು ಮಾಡಿ ಎಂದು ಹೇಳುತ್ತಿದ್ದೇನೆ. ಈ ತರಹ ಮಾಡಿದರೆ ನಮ್ಮ ಅರಣ್ಯ ಏನು ನಾಶವಾಗುತ್ತಿದೆ ಅದನ್ನು ತಪ್ಪಿಸಬಹುದು. ಅರಣ್ಯ ಸಂಪತ್ತು ನಾಶವಾಗುತ್ತಿರುವುದನ್ನು ನೋಡಿದರೆ ತುಂಬಾ ದುಃಖವಾಗುತ್ತದೆ. ಅರಣ್ಯ ಸಂಪತ್ತನ್ನು ರಕ್ಷಣೆ ಮಾಡುವ ಶಕ್ತಿ ನಮ್ಮ ಸರ್ಕಾರಕ್ಕಿಲ್ಲ, ಅಧಿಕಾರಿಗಳು ನಿಸ್ಸಹಾಯಕರಾಗಿ ಕುಳಿತಿದ್ದಾರೆ. ಕೆಲವು ಕಡೆ ಕೆಲವರು ಬಹಳ ಮುತುವರ್ಜಿ ವಹಿಸಿ ಬೊಂಬಾಯಿಗೆ ಗಂಧವನ್ನು ಕಳಿಸುವುದರಲ್ಲಿ ಶರೀಕಾಗಿ ಅದರ ಫಲವನ್ನು ಪಡೆಯುತಕ್ಕ ಕೆಲಸ ಮಾಡುತ್ತಿದ್ದಾರೆ, ಆದರೆ

ನಿಷ್ಠಾವಂತ ಅಧಿಕಾರಿಗಳು ನಿಸ್ಸಹಾಯಕರಾಗಿ ಕುಳಿತಿದ್ದಾರೆ. ಅಂತೂ ಒಟ್ಟಿನಲ್ಲಿ ನಮ್ಮ ಅರಣ್ಯ ಸಂಪತ್ತು ನಾಶವಾಗುತ್ತಿದೆ. ನಾಶವಾಗುತ್ತಿರುವುದು ಕಣ್ಣಿಗೆ ಕಾಣುತ್ತಿದ್ದರೂ ಅದನ್ನು ತಡೆಯುವುದಕ್ಕಾಗುವುದಿಲ್ಲ. ಪೋಲೀಸ್ ಬಂದೋಬಸ್ತು ಮಾಡಲು ನೂರು ವ್ಯಾನ್‌ಗಳನ್ನು ತರಿಸುತ್ತೇವೆ ಎಂದು ಹೇಳಿದ್ದಾರೆ, ಈ ಪ್ಯಾನು, ಫ್ಯಾನು ಇದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಹಳ್ಳಿಯವರು ಹೋಗುತ್ತಾರೆಂದು ಅವರ ಜೊತೆಗೆ ಗಂಧದ ಮರ ಕಡಿಯುವವರೂ ಹೋಗುತ್ತಾರೆ. ದುರಾದೃಷ್ಟವಶಾತ್ ರೈತರ ಚಳುವಳಿ ಹೆಸರಿನಲ್ಲಿ ಬೇರೆಯವರು ಗಂಧದ ಮರಗಳನ್ನು ತೆಗೆದುಕೊಂಡು ಹೋದರು. ರೈತರು ಅಲ್ಲಿ ಹೋಗಲಿಲ್ಲ, ಅಲ್ಲಿ ಹೋದವನು ಸ್ಮಗ್ಲರ್ಸ್. ಚನ್ನಗಿರಿ ತಾಲ್ಲೂಕಿನಲ್ಲಿ ಗಾಡಿಗಟ್ಟಲೆ ಗಂಧದ ಮರಗಳನ್ನು ತೆಗೆದುಕೊಂಡು ಹೋಗಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಗಂಧದ ಮರಗಳನ್ನು ಕಡಿದುಕೊಂಡು ನೂರಾರು ಗಾಡಿಗಳು ಹೋಗುತ್ತಿತ್ತು. ಆಗ ನನ್ನ ಜೊತೆಯಲ್ಲಿ ಅರಣ್ಯ ಮಂತ್ರಿಗಳೂ ಇದ್ದರು. ಆದರೂ ಯಾರೂ ಕೇಳುತ್ತಿರಲಿಲ್ಲ. ಇಷ್ಟು ದಕ್ಷ ಸರ್ಕಾರ ನಾನೆಲ್ಲೂ ನೋಡಿರಲಿಲ್ಲ. ನಮ್ಮ ಕಟ್ಟಿಗೆಗೋಸ್ಕರ, ಉದ್ಯಮಕ್ಕೋಸರ ಇದೇ ರೀತಿ ಅರಣ್ಯವನ್ನು ನಾಶ ಮಾಡುತ್ತಾ ಹೋದರೆ ಇನ್ನು ೧೦–೧೫–೨೦ ವರ್ಷಗಳಲ್ಲಿ ಬಹಳ ಗಂಭೀರವಾದ ಪ್ರಾಕೃತಿಕ ಕೋಪವನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಅರಣ್ಯ ಸಂಪತ್ತನ್ನು ಉಳಿಸಲು ತಕ್ಷಣ ಕಾರ್ಯಕ್ರಮ ಹಾಕಿಕೊಳ್ಳಬೇಕು. ಸುಮ್ಮನೆ ಉದ್ದೇಶಿಸಿದ್ದೇವೆ, ನಿರೀಕ್ಷಿಸಿದ್ದೇವೆ ಎಂದು ಹೇಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇನ್ನು ಸಣ್ಣ ನೀರಾವರಿ ಬಗ್ಗೆ ಬಹಳ ಅದ್ಭುತವಾಗಿ ಹೇಳಿದ್ದಾರೆ. 'ನನ್ನ ಸರ್ಕಾರವು ೬೫ ಕೋಟಿ ರೂಪಾಯಿ ವೆಚ್ಚದ ಒಂದು ಸಣ್ಣ ನೀರಾವರಿ ಯೋಜನೆಗೆ ವಿಶ್ವ ಬ್ಯಾಂಕಿನ ನೆರವನ್ನು ಕೇಳಿದೆ. ಈ ಯೋಜನೆಯು ಮೇರೆಗೆ ೫ ವರ್ಷಗಳ ಅವಧಿಯಲ್ಲಿ ರಾಜ್ಯಾದ್ಯಂತ ೨೨೪ ಸಣ್ಣ ನೀರಾವರಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮತ್ತು ೭೪,೯೭೩ ಹೆಕ್ಟೇರು ಹೊಸ ಪ್ರದೇಶಕ್ಕೆ ನೀರೊದಗಿಸಲು ಉದ್ದೇಶಿಸಲಾಗಿದೆ' ಎಂದು ಹೇಳಿದ್ದಾರೆ. ವಿಶ್ವಬ್ಯಾಂಕಿನ ಸಾಲ ಕೇಳಲಾಗಿದೆ, ಅದನ್ನು ಕೊಟ್ಟರೆ ಇದನ್ನು ಮಾಡಲಾಗುತ್ತದೆ — ಈ ತರಹ ಆದರೆ ಹೆಚ್ಚು ನೀರಾವರಿ ಕೆಲಸ ಮಾಡಲು ಉದ್ದೇಶಿಸಲಾಗಿದೆ ಎಂದು ಹೇಳಿದ್ದಾರೆ. ಇದೆಷ್ಟು ಚೆನ್ನಾಗಿದೆ ನೋಡಿ!

ಇನ್ನು ಹರಿಜನ ಗಿರಿಜನ ಮತ್ತು ದುರ್ಬಲ ವರ್ಗದವರ ಬಗ್ಗೆ ಒಂದು ಮಾತು ಹೇಳಿದ್ದಾರೆ. ೧೫ನೇ ಪುಟದಲ್ಲಿ ಈ ಬಗ್ಗೆ ಹೇಳಿದ್ದಾರೆ. ಹಿಂದಿನ ವರ್ಷದ ಭಾಷಣದಲ್ಲಿ ಏನಿತ್ತು ಎಂದರೆ ಹರಿಜನ ಗಿರಿಜನ, ದುರ್ಬಲ ವರ್ಗದವರ ರಕ್ಷಣೆ ವಿಷಯದಲ್ಲಿ ನಮ್ಮ ಕರ್ನಾಟಕ ಸರ್ಕಾರದ ಹೆಜ್ಜೆ ಎಲ್ಲ ರಾಜ್ಯಗಳಿಗಿಂತಲೂ ಒಂದು ಹೆಜ್ಜೆ ಮುಂದಿದೆ ಎಂದಿತ್ತು. ಆದರೆ ಈ ಸರ್ಕಾರದವರು ಹಿಂದೆ ಹೋಗಿದ್ದಾರೋ ಮುಂದೆ ಹೋಗಿದ್ದಾರೋ ಗೊತ್ತಿಲ್ಲ. ಅವರ ರಕ್ಷಣೆ ಸಲುವಾಗಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ, ಆದೇಶಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಮತ್ತೊಂದು ಉನ್ನತ ಸಮಿತಿಯನ್ನು ರಚಿಸಲಾಗಿದೆ ಎಂದು ಹೇಳಿ ಎರಡು ಮೂರು ಸಮಿತಿಗಳನ್ನು ರಚಿಸುವುದನ್ನು ಬಿಟ್ಟರೆ ಬೇರೆ ಏನು ಮಾಡಿದ್ದಾರೋ ಅರ್ಥವಾಗಿಲ್ಲ. ಈ ಸಮಿತಿಗಳಿಂದ ದುರ್ಬಲ ವರ್ಗದವರ, ಹರಿಜನ ಗಿರಿಜನರ ರಕ್ಷಣೆಯಾಗುವುದಿಲ್ಲ. ಅಥವಾ ಇವರನ್ನು ಪ್ರತಿನಿಧಿಸತಕ್ಕ ಜನರು ಎಲ್ಲೋ ಕೆಲವರು ಅನುಕೂಲಕರ ಸ್ಥಿತಿಗೆ ಬಂದರೆ ಎಲ್ಲರಿಗೂ ಅನುಕೂಲವಾಗುವುದಿಲ್ಲ. ಹರಿಜನಗಿರಿಜನ ಮತ್ತು ದುರ್ಬಲವರ್ಗದವರ ಸ್ಥಿತಿಯನ್ನು ಉತ್ತಮ ಪಡಿಸಲು ಹಿಂದಿನ ಸರ್ಕಾರ ಸ್ವಲ್ಪಮಟ್ಟಿಗೆ ಪ್ರಯತ್ನ ಮಾಡಿತ್ತು, ಪ್ರಾಮಾಣಿಕವಾಗಿ. ಈಗ ಈ ಪ್ರಯತ್ನ ಸ್ವಲ್ಪ ಕುಂಠಿತವಾಗಿದೆ ಮಾತ್ರವಲ್ಲ ದೃಷ್ಟಿಕೋನವೂ ಬದಲಾಗಿದೆ ಎಂಬುದು ನನ್ನ ಅಭಿಪ್ರಾಯ. ೧೯೮೧ನೇ ಇಸವಿಯನ್ನು ಅಂಗವಿಕಲರ ವರ್ಷವೆಂದು ಅಂತರಾಷ್ಟ್ರೀಯವಾಗಿ ಘೋಷಣೆ ಮಾಡಿದ್ದಾರೆ. ನಮ್ಮ ಭಾರತದಲ್ಲಂತೂ ಅಂಗವಿಕಲರ ರಾಷ್ಟ್ರ ಎಂದು ಹೇಳುವುದೇ ಬೇಕಾಗಿಲ್ಲ. ವಿದೇಶದಲ್ಲಿ ಇರುವವರಲ್ಲಿ ಕೆಲವರು ಅಂಗವಿಕಲರಿರುತ್ತಾರೆ. ಆದರೆ ನಮ್ಮ ದೇಶದಲ್ಲಿ ಸರಿಯಾಗಿ ಅಂಗಗಳಿರುವ ಜನ ಕಡಿಮೆಯಾಗಿರುವುದರಿಂದ ...

ಶ್ರೀ ಎ. ಲಕ್ಷ್ಮೀಸಾಗರ್.—ಯಾವ ಅಂಗ ?

ಶ್ರೀ ಜೆ. ಹೆಚ್. ಪಟೇಲ್.—ನೀವು ಯಾವುದೋ ಒಂದು ಅಂಗವನ್ನು ಗಮನದಲ್ಲಿಟ್ಟುಕೊಂಡು ಹೇಳಬೇಡಿ. ಸರ್ವಾಂಗಗಳ ಬಗ್ಗೆ ನಾನು ಹೇಳುತ್ತಿದ್ದೇನೆ. ಈ ದೃಷ್ಟಿಯಲ್ಲಿ ಭಾರತ ದೇಶ ಹಿಂದುಳಿದಿದ್ದು...

ಶ್ರೀ ಎ. ಲಕ್ಷ್ಮೀಸಾಗರ್.—ಕಾವ್ಯದಲ್ಲಿ ಸರ್ವಾಂಗ ಸುಂದರ ಎಂದು ರಮಣೀಯವಾಗಿ ರಂಜನೀಯವಾಗಿ ವರ್ಣನೆ ಕಂಡುಬರುತ್ತದೆ. ನೀವು ಎಲ್ಲಾ ಕುಂಠಿತವಾಗುತ್ತಿದೆ ಎಂದು ಹೇಳುತ್ತೀರಲ್ಲ.

ಶ್ರೀ ಜೆ.ಹೆಚ್. ಪಟೇಲ್.—ಅಂತರರಾಷ್ಟ್ರೀಯವಾಗಿ ಅಂಗವಿಕಲರ ವರ್ಷ ಎಂದು ಘೋಷಣೆ ಮಾಡಿದ್ದಾರೆ. ಅದರ ಅಂಗವಾಗಿ ರಾಜ್ಯದಲ್ಲಿ ಇದ್ದಂಥ ಅಂಗಗಳನ್ನು ತೆಗೆಯುತ್ತೇವೆ ಎಂದು ಹೇಳಿದ್ದಾರೆ.

ಛೇರ್ಮನ್.—ನೀವು ಈ ರೀತಿ ಮಾತನಾಡುವುದರಿಂದ ವಿಷಯದ ಗಂಭೀರತೆ ಹಾಳಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್.—ತಮ್ಮ ಮಾತನ್ನು ನಾನು ಒಪ್ಪುತ್ತೇನೆ. ಅಂಗವಿಕಲರ ವರ್ಷವನ್ನು ಆಚರಣೆ ಮಾಡುವ ಕಾಲದಲ್ಲಿ ನಮ್ಮ ರಾಜ್ಯದಲ್ಲಿರತಕ್ಕ ಬಹಳ ಜನ ಅಂಗವಿಕಲರು ಇನ್ನೂ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ದೈಹಿಕವಾಗಿ ಅಂಗವಿಕಲರಾದವರಿಗೆ ಆದ್ಯತೆ ಕೊಡಬೇಕು, ಸೌಲಭ್ಯಗಳನ್ನು ಕೊಡಬೇಕು ಎಂದು ಕಾನೂನು ಮಾಡಿದ್ದರೂ ಕೂಡ ನನ್ನ ಅಂದಾಜಿನ ಪ್ರಕಾರ ರಾಜ್ಯದಲ್ಲಿ ೫–೬ ಸಾವಿರಕ್ಕೆ ಕಡಿಮೆ ಇಲ್ಲದೆ ಕೆಲಸವಿಲ್ಲದೇ ಇರತಕ್ಕವರಿದ್ದಾರೆ. ನನಗೆ ಗೊತ್ತಿರುವ ಹಾಗೆ ಒಬ್ಬರು ಪೆರಾಲಿಸಿಸ್‌ನಿಂದ ಅಂಗವಿಕಲರಾಗಿರುವವರು ಬಿ.ಎ. ಮಾಡಿಕೊಂಡಿದ್ದರೂ ೧೫ ವರ್ಷದಿಂದ ಕೆಲಸ ಇಲ್ಲದೇ ಇದ್ದಾರೆ. ಇನ್‌ಷ್ಯೂರೆನ್ಸ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದರು ಈಗ ವಯಸ್ಸಾಗಿದೆ, ದಿಕ್ಕು ದೆಸೆ ಇಲ್ಲದೆ ಅನಾಥರಾಗಿ ಇದ್ದಾರೆ. ಅಂಗವಿಕಲರ ವರ್ಷ ಎಂದು ಆಚರಣೆ ಮಾಡಿ ಜೈಲಿನಲ್ಲಿದ್ದಂಥವರ ಕಣ್ಣು ತೆಗೆಯುವುದು, ರಸ್ತೆಯಲ್ಲಿ ಸುಮ್ಮನೆ ಓಡಾಡುತ್ತಿರುವವರ ಮೇಲೆ ಲಾಠಿ ಚಾರ್ಜ್ ಮಾಡಿ ತಲೆ ಬುರುಡೆ ಹೊಡೆಯುವುದು ಈ ಕಾರ್ಯಕ್ರಮ ಹಾಕಿಕೊಂಡರೆ ಅಂಗವಿಕಲರ ವರ್ಷ ಆಗುವುದಿಲ್ಲ. ನಿಜವಾಗಿ ಸಮಾಜದಲ್ಲಿ ಸಂಕಟಕ್ಕೊಳಗಾಗಿರುವವರ ನೆರವಿಗೆ ಬರುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕು. ಮಹಿಳೆಯರ ವರ್ಷ, ಮಕ್ಕಳ ವರ್ಷ, ಅಂಗವಿಕಲರ ವರ್ಷ ಎಂದು ಇತ್ತೀಚೆಗೆ ಒಂದು ಬೋಗಸ್ ಪ್ರಾಕ್ಟೀಸ್ ಷುರುವಾಗಿದೆ. ಇದರಲ್ಲಿ ಏನೂ ಅರ್ಥ ಇಲ್ಲ. ಇದರಿಂದ ವಾಸ್ತವಿಕವಾಗಿ ಏನೂ ಕೆಲಸ ಮಾಡುವುದಿಲ್ಲ. ಅಂಗವಿಕಲರ ವರ್ಷ ಎಂದು ಆಚರಣೆ ಮಾಡಿ ಈ ವರ್ಷ ಅಂಗವಿಕಲರನ್ನು ಹೆಚ್ಚು ಮಾಡಬಹುದಷ್ಟೆ.

ಇನ್ನು ಜ್ಞಾನ ಮಂದಿರಗಳು. ಇವು ಎಷ್ಟಾಗಿವೆ ? ತಾಲ್ಲೂಕು ಅಭಿವೃದ್ಧಿ ಮಂಡಲಿಯಲ್ಲಿ ಸಭೆ ಸೇರಿದಾಗ, ೨೦ ಅಂಶಗಳ ಕಾರ್ಯಕ್ರಮದ ಮೇರೆಗೆ ಭಾಗ್ಯಜ್ಯೋತಿ ಮತ್ತು ಜ್ಞಾನ ಮಂದಿರಗಳ ಸಲುವಾಗಿ ಎಷ್ಟು ಹಣ ಬಂದಿದೆ ಎಂದು ಕೇಳಿದರೆ, ಅವು ಯಾವುದಕ್ಕೂ ಹಣ ಬಂದಿಲ್ಲವೆಂದು ಅವರು ಹೇಳುತ್ತಾರೆ. ಮೇಲಾಗಿ ೧೯೮೦–೮೧ನೇ ಸಾಲಿನಲ್ಲಿ ಒಂದೇ ಒಂದು ಜನತಾ ಗೃಹವನ್ನೂ ಕಟ್ಟಿಸಿಲ್ಲ. ಹುಡ್ಕೋ ಯೋಜನೆಯ ನೆರವಿನಿಂದ ಗೃಹಗಳನ್ನು ಕಟ್ಟಿಸಲಾಗಿದೆ. ಆದರೆ, ಜನತಾ ಗೃಹನಿರ್ಮಾಣ ಯೋಜನೆಯಡಿಯಲ್ಲಿ ಒಂದು ಮನೆಯನ್ನೂ ಕಟ್ಟಿಸಿಲ್ಲ.

ಇನ್ನು ಸಾರಿಗೆ ಸೌಲಭ್ಯ. ಇದನ್ನು ಈ ಬಾಯಲ್ಲಿ ಹೇಳುವುದಕ್ಕಾಗುವುದಿಲ್ಲ. ಸಾರಿಗೆ ಸಂಸ್ಥೆ ಅವ್ಯವಸ್ಥೆಯ ಬೀಡು. ಬಸ್ ದರಗಳ ಏರಿಕೆ ವಿರುದ್ಧ ಚಿಂತಾಮಣಿಯಲ್ಲಿ ನಡೆದ ಪ್ರದರ್ಶನಕ್ಕೆ ಗೋಲಿಬಾರ್ ಮಾಡಿದ್ದಾರೆ. ಕುಳಿತುಕೊಳ್ಳುವುದಕ್ಕೆ ನಾಲಾಯಕ್ಕಾದ ಬಸ್ಸುಗಳು ಸಾರಿಗೆ ಸಂಸ್ಥೆಯಲ್ಲಿವೆ. ನಾವು ಸ್ವಲ್ಪ ತಡವಾಗಿ ಹೋದರೆ ಅವು ಹೊರಟು ಹೋಗಿರುತ್ತವೆ ; ಸ್ವಲ್ಪ ಮುಂಚೆ ಹೋದರೆ ಮೂರು ಗಂಟೆ ತಡವಾಗಿ ಹೊರಡುತ್ತವೆ ! ಯಾವುದಾದರೂ ಗರ್ಭಿಣಿ ಹೆಂಗಸರು ಇಲ್ಲೇ ಬಸ್ಸನ್ನು ನಿಲ್ಲಿಸಪ್ಪ ಇಳಿದು ಬಿಡುತ್ತೇನೆ ಎಂದು ಡ್ರೈವರಿಗೆ ಹೇಳಿದರೆ, ''ಅಲ್ಲಿ ಮುಂದೆ ನಡಿ, ಎಲ್ಲಾಪುರದ ಹತ್ತಿರ ಇಳಿ'' ಎಂದು ಹೇಳಿಬಿಡುತ್ತಾರೆ. ಆದರೆ ಎದುರುಗಡೆಯಿಂದ ಬರುವ ಬಸ್ಸಿನ ಡ್ರೈವರ್ ಬಸ್ಸು ನಿಲ್ಲಿಸಿದರೆ ಆತನೊಡನೆ ಹದಿನೈದು ನಿಮಿಷ ಮಾತನಾಡುತ್ತಾ ಕಳೆಯುತ್ತಾನೆ. ಡ್ರೈವರ್, ಕಂಡಕ್ಟರ್ ಅಧಿಕಾರಿಗಳು–ಎಲ್ಲ ಸೇರಿ ಇಡೀ ಇಲಾಖೆ ಹೊಲಸಾಗಿದೆ. ಅತ್ಯಂತ ಹೊಲಸೆದ್ದು ಕೊಳೆತು ನಾರತಕ್ಕ ಸ್ಥಿತಿಗೆ ಸಾರಿಗೆ ಸಂಸ್ಥೆ ಬಂದಿದೆ. ಗಾಡಿ ಸರಿ ಇದ್ದು, ಡ್ರೈವರ್‌ಗಳನ್ನು ಬದಲಾಯಿಸಿದರೆ ನಾನು ಒಪ್ಪುತ್ತೇನೆ. ಆದರೆ, ಗಾಡಿಗಳಿಗೆ ಟೈರ್ ಇಲ್ಲ ; ಟೈರ್‌ಗೆ ಬೋಲ್ಟೆ ಇಲ್ಲ. ಮಧ್ಯದ ಆಕ್ಸಲ್ ಇಲ್ಲ. ಏನೇನೂ ಇಲ್ಲ. ಸಾರಿಗೆ ಸಂಸ್ಥೆಯ ಅವ್ಯವಸ್ಥೆಗೆ ಸಿಂಬಲ್–ಅದರ ಬಸ್. ಅದು ಉದ್ಧಾರವಾಗುವ ಸ್ಥಿತಿಯಲ್ಲಿಲ್ಲ. ಸಾರಿಗೆ ವ್ಯವಸ್ಥೆಯನ್ನು ಖಾಸಗಿಯವರಿಗೆ ಏತಕ್ಕೆ ಕೊಡಬಾರದೆನ್ನುವ ಪ್ರಶ್ನೆ ಒಂದು ಸಲ ಈ ಸದನದಲ್ಲಿ ಬಂದಿತ್ತು. ನಿಜ ; ಗುಜರಾತು ; ಮಹಾರಾಷ್ಟ್ರಗಳಲ್ಲಿ ಮಾಡುವುದಕ್ಕೆ ಬರುತ್ತದೆ. ನಾವು ಸಮಾಜವಾದದ ಕೆಲವು ತತ್ವಗಳನ್ನು ಜನರಿಗೆ ಬೇಸರಪಡಿಸುವಂತೆ ಹೇಳಿರುವಂತೆ ಈ ಸಾರಿಗೆ ಸಂಸ್ಥೆಯೂ ಜನತೆಗೆ ಅತ್ಯಂತ ಬೇಸರವಾಗುವಷ್ಟು......

ಛೇರ್ಮನ್.—ಮೊದಲು ತಾವು ವರ್ಣನೆ ಮಾಡುವುದಕ್ಕಾಗುವುದಿಲ್ಲವೆಂದು ಪ್ರಾರಂಭ ಮಾಡಿದಿರಿ, ಆದರೆ, ವರ್ಣನೆ ಮಾಡುತ್ತಿದ್ದೀರಲ್ಲ ?

ಶ್ರೀ ಜೆ. ಹೆಚ್. ಪಟೇಲ್.—ವರ್ಣನೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದರಿಂದಲೇ ತಾವು ಕುತೂಹಲದಿಂದ ಕೇಳುತ್ತಿರುವುದು ! ಸಾರಿಗೆ ಸಂಸ್ಥೆಯಲ್ಲಿ ಹಣದ ಲೂಟಿಯಾಗುತ್ತಿದೆ ; ಡ್ರೈವರ್, ಕಂಡಕ್ಟರ್, ಡಿಪೋ ಮ್ಯಾನೇಜರ್, ಗುಮಾಸ್ತ–ಎಲ್ಲರೂ ಸೇರಿ ಸಾರ್ವಜನಿಕರ ದುಡ್ಡನ್ನು ತಿಂದು ತೇಗುತ್ತಿದ್ದಾರೆ. ಇದರಿಂದಾಗಿ ಜನರಿಗೆ ಹಿಂಸೆ, ಪ್ರಬಲವಾದ ಹಿಂಸೆ. ಬಸ್ ದರವನ್ನು ಏರಿಸಲಾಗಿದೆ. ಏತಕ್ಕೆ ಏರಿಸಲಾಗಿದೆ ? ಕೆಟ್ಟ ಬಸ್ಸುಗಳನ್ನಿಟ್ಟುಕೊಂಡು ಏತಕ್ಕೆ ದರ ಏರಿಸಬೇಕು ? ಕುಳಿತುಕೊಳ್ಳುವುದಕ್ಕೆ ನಾಲಾಯಕ್ಕಾಗಿರುವ ಬಸ್ಸುಗಳಿಗೆ ನಾವೇತಕ್ಕೆ ಜಾಸ್ತಿ ದುಡ್ಡು ಕೊಡಬೇಕು ? ಮೈಸೂರು–ಬೆಂಗಳೂರಿಗೆ ರೂ. ೯–೩೦ ಇದ್ದ ಬಸ್ ಪ್ರಯಾಣ ದರ ಇಂದು ೧೨–೧೦ ರೂ. ಆಗಿದೆ. ಮಂಗಳೂರು–ಬೆಂಗಳೂರು ರೂ. ೧೬–೯೦ ಇದ್ದದ್ದು ರೂ. ೨೨–೫೦ ಆಗಿದೆ. ಅಂದರೆ, ಶೇಕಡ ೩೩ರಷ್ಟು ದರವನ್ನು ಏರಿಸಲಾಗಿದೆ. ಆದರೆ, ಡೀಸೆಲ್ ಬೆಲೆ ಏರಿರುವುದು ಲೀಟರ್‌ಗೆ ರೂ. ೨–೪೮ ರಿಂದ ೨–೯೧ ಆಗಿದೆ. ಅಂದರೆ, ಶೇಕಡ ೧೭ರಷ್ಟು ಏರಿಕೆಯಾಗಿದೆ. ಹಾಗಾದರೆ, ಈ ರೀತಿ ಬಸ್ ದರ ಏರಿಸಿರುವುದಕ್ಕೆ ಏನಾದರೂ ಅರ್ಥವಿದೆಯೆ ? ಇಂತಹ ಸಾರಿಗೆ ಸಂಸ್ಥೆಯನ್ನು ಇಟ್ಟುಕೊಳ್ಳುವುದರಲ್ಲಿ ಅರ್ಥವಿದೆಯೆ ? ಇದನ್ನು ಸರ್ಕಾರದ ದಕ್ಷತೆ ಎಂದು ಕರೆಯೋಣವೆ ?

ಛೇರ್ಮನ್.—ಸಲಹೆ ಏನಾದರೂ ಇದ್ದರೆ ಕೊಡಿ.

ಶ್ರೀ ಜೆ. ಹೆಚ್. ಪಟೇಲ್.—ಸಲಹೆ ಕೊಟ್ಟು ಅವರ ದಕ್ಷತೆ ಹೆಚ್ಚಿಸುವುದಕ್ಕೆ ನಾನೇಕೆ ಹೋಗಲಿ ? ಅವರು ಬಿಟ್ಟರೆ ನಾವು ಮಾಡುತ್ತೇವೆ !

ಇನ್ನು, ಸಹಕಾರ ಸಂಘಗಳ ವಿಚಾರ —ಶ್ವೇತ ಪತ್ರದಲ್ಲಿ ಹೇಳಿದ್ದಾರೆ ; ಪತ್ರಿಕೆಗಳಲ್ಲೂ ಘೋಷಣೆ ಮಾಡಿದ್ದಾರೆ. ಆದರೆ, ವಾಸ್ತವವಾಗಿ ಯಾವುದೂ ಬರವಣಿಗೆಯಲ್ಲಿ ಹೋಗಿಲ್ಲ. ಇದಕ್ಕೆ ತದ್ವಿರುದ್ಧವಾಗಿ ಬಾಕಿ ವಸೂಲ್ಮಾಡಲು ಕಳೆದ ಹದಿನೈದು ದಿವಸಗಳಿಂದ ಉಗ್ರವಾದ ಕಾರ್ಯಕ್ರಮ ಕೈಗೊಂಡಿದ್ದಾರೆ. ಮಾನ್ಯ ಗುಂಡೂರಾಯರು ನಮ್ಮ ಸಾಲವನ್ನೆಲ್ಲ ಮನ್ನಾ ಮಾಡಿದ್ದಾರೆ ; ವಸೂಲ್ಮಾಡುವುದಕ್ಕೆ ಯಾರೂ ಬರುವುದಿಲ್ಲ ; ಒಂದು ವೇಳೆ ಕಟ್ಟಿದರೂ ನಮ್ಮದೇ ಹೋಗುತ್ತದೆ ಎಂದು ಭಾವಿಸಿದ ರೈತರು ಹಣ ಪಾವತಿ ಮಾಡಿರಲಿಲ್ಲ. ವಾತಾವರಣ ಹೀಗಿರುವಾಗಿ ನಾವೇತಕ್ಕೆ ಕೊಡೋಣ ; ''ಕೊಟ್ಟವನೇ ಕೆಟ್ಟ'' ಎನ್ನುವ ಪರಿಸ್ಥಿತಿಗೆ ಬಂತು. ಆದುದರಿಂದ, ಯಾರಿಗೆ ನೆರವು ಸಿಕ್ಕಬೇಕೋ ಅವರಿಗೆ ಮಾತ್ರ ಸಿಕ್ಕಬೇಕೇ ಹೊರತು ಎಲ್ಲರಿಗೂ ಸಿಕ್ಕಬೇಕೆಂದು ಹೇಳುವವನಲ್ಲ ನಾನು. ಈಗ ಎಲ್ಲ ಸಹಕಾರ ಸಂಘಗಳೂ ಬಾಗಿಲು ಹಾಕಿಕೊಂಡು ಒಳಗೆ ಜೇಡರ ಬಲೆ ಕಟ್ಟುವ ಸ್ಥಿತಿಯಲ್ಲಿವೆ. ಸುಮಾರು ಹದಿನೆಂಟು ಜಿಲ್ಲಾ ಕೇಂದ್ರ ಬ್ಯಾಂಕುಗಳು ದಿವಾಳಿಯಾಗುವ ಹಂತದಲ್ಲಿವೆ. ನಿಮ್ಮ ಪ್ರಕಾರವೇ, ಸಹಕಾರ ಸಂಘಗಳಿಂದ ರೈತರಿಗೆ ಯಾವ ಸಹಾಯವೂ ಆಗಿಲ್ಲ ; ಕಾರ್ಖಾನೆಗಳಲ್ಲಿ ಉತ್ಪನ್ನ ಹೆಚ್ಚಾಗಿಲ್ಲ. ಇದಕ್ಕಿಂತ ದುರದೃಷ್ಟಕರ ವಿಷಯವೆಂದರೆ, ಸರ್ಕಾರ ಇದೇ ವಾತಾವರಣವನ್ನು ಮುಂದುವರಿಸಿಕೊಂಡು ಹೋದರೆ ದುಡಿಯುವವರಿಗೆ ದುಡಿಯಬೇಕೆಂಬ ಮನಸ್ಸು ಬರುವುದಿಲ್ಲ. ಇವತ್ತು ಮಟ್ಕಾ ರಾಜ್ಯದಲ್ಲಿರುವ ಹಳ್ಳಿಗಳನ್ನೆಲ್ಲ ಆವರಿಸಿದೆ. ಜನರ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಹಾಳು ಮಾಡತಕ್ಕ ಎಲ್ಲಾ ವೃತ್ತಿಗಳೂ ಇಂದು ಗ್ರಾಮಾಂತರ ಪ್ರದೇಶಗಳಲ್ಲಿ ಜಾಸ್ತಿಯಾಗಿವೆ ಈಗ ಸರ್ಕಾರ ಹಾಕಿಕೊಳ್ಳುತ್ತಿರುವ ಕಾರ್ಯಕ್ರಮಗಳು ಅವುಗಳಿಗೆಲ್ಲ ಪ್ರೋತ್ಸಾಹ ನೀಡುವಂತಹ ರೀತಿಯಲ್ಲಿವೆ. ಇವುಗಳನ್ನೆಲ್ಲ ತಡೆಯಬೇಕು. ಹೇಗೆ ತಡೆಯಬೇಕು ? ನಾವು ಪೋಲೀಸರನ್ನು ಇಟ್ಟುಕೊಂಡಿರುವುದು–ಸಮಾಜದಲ್ಲಿರತಕ್ಕ ಎಲ್ಲೋ ಕೆಲವು ದುಷ್ಕರ್ಮಿಗಳು ಸಮಾಜ ವಿರೋಧಿಗಳು ಮತ್ತು ಪುಂಡರನ್ನು ಶಿಕ್ಷಿಸಿ, ಶಿಷ್ಟರನ್ನು ರಕ್ಷಣೆ ಮಾಡುವುದಕ್ಕಾಗಿ. ಅವರಿಗೆ ಸಂಬಳ ಕೊಡುವುದೂ ನಮ್ಮ ಕಾರ್ಮಿಕರು ಮತ್ತು ರೈತರು. ನಾನು ಮೊನ್ನೆ ಒಬ್ಬ ಪೋಲೀಸಿನವನಿಗೆ ಹೇಳಿದೆ : ''ಅಪ್ಪಾ, ನೀನೂ ಕೂಡ ರೈತನ ಮಗನೇ ; ನಿಮ್ಮಪ್ಪನಿಗೆ ಐದಾರು ಜನ ಮಕ್ಕಳಿದ್ದುದರಿಂದ ಮತ್ತು ಇದ್ದ ಹೊಲ ನಿಮಗೆಲ್ಲ ಸಾಕಾಗದಿದ್ದುದರಿಂದ ನೀನು ಪೋಲೀಸ್ ಪೇದೆಯಾದೆ ; ಆದ ಮೇಲೆ ಐದಾರು ವರ್ಷ ಬೈಸಿಕಲ್ ಮೇಲೆ ಹೋಗುವವರಿಂದ, ಸಿನಿಮಾಗೆ ಹೋಗಿ ಬರುವವರಿಂದ ದುಡ್ಡು ತೆಗೆದುಕೊಂಡು......''ಎಸ್. ಐ. ತೆಗೆದುಕೊಂಡದ್ದನ್ನು ಸಿ. ಐ ಗೆ ಕೊಡಬೇಕು. ಸಿ. ಐ. ಸಂಬಂಧಪಟ್ಟ ಖಾತೆ ಮಂತ್ರಿಗಳಿಗೆ ಕಳುಹಿಸಿಕೊಡಬೇಕು. ಇದು ಎಲ್ಲರಿಗೂ ಗೊತ್ತಿರುವ ರಹಸ್ಯ. ಹೀಗಿರುವುದರಿಂದ, ಅವರು ಬಹಳ ದುರ್ಬಲರಾಗಿದ್ದಾರೆ. ಕೆಳಮಟ್ಟದಲ್ಲಿರುವ ಪೋಲೀಸ್

ವೇದಿಗಳು ನಡೆಯುವುದನ್ನು ತಾವು ಗಮನಿಸಿದ್ದೀರಾ ? ಬೂಟನ್ನು ಹೊರಲಾರದೆ ಸಣ್ಣ ಕಾಲುಗಳನ್ನು ಅವರು ಎಳೆದುಕೊಂಡು ಹೋಗುತ್ತಿರುತ್ತಾರೆ. ಆದರೆ, ಮೇಲ್ಮಟ್ಟದ ಅಧಿಕಾರಿಗಳು ಯಾವುದೋ ಒಂದು ಗೋಡೆಯ ರೀತಿ ಕಾಣಿಸುತ್ತಾರೆ. ಅಂತೂ ಪೋಲೀಸರದು ವಿಚಿತ್ರ ! ಹೊಟ್ಟೆಯಲ್ಲಿರತಕ್ಕ ಸಿಟ್ಟನ್ನು ಅವರು ಬಡವರ ಮೇಲೆ ತೀರಿಸಿಕೊಂಡುಬಿಡುತ್ತಾರೆ. ರೈತರು ಬಂದರೆ ರೈತರ ಮೇಲೆ ; ಕಾರ್ಮಿಕರು ಬಂದರೆ ಕಾರ್ಮಿಕರ ಮೇಲೆ ; ವಿದ್ಯಾರ್ಥಿಗಳು ಬಂದರೆ ವಿದ್ಯಾರ್ಥಿಗಳ ಮೇಲೆ ತಮ್ಮ ಸಿಟ್ಟನ್ನು ತೀರಿಸಿಕೊಂಡುಬಿಡುತ್ತಾರೆ. ಪೋಲೀಸರೆಂದರೆ ನಾಯಿಯನ್ನು "ಛೂ" ಬಿಟ್ಟ ಹಾಗೆ ! "ಛೂ" ಎಂದರೆ ಸಾಕು ಹಿಡಿದುಬಿಡುತ್ತಾರೆ.

೪-೦೦ ಪಿ. ಎಂ.

ಮನೆಗೆ ಬೀಗ ಹಾಕಿರಲಿ, ಹೊಡೆದು ಒಳಗೆ ಹೋಗಿ ಹೊಡೆಯುತ್ತಾರೆ ; ಮಲಗಿರಲಿ ಹೊಡೆಯುತ್ತಾರೆ ; ರಕ್ತದ ಆಸೆ ಇರತಕ್ಕ ನಾಯಿಗಳನ್ನು ಸರ್ಕಾರದವರು ತಯಾರು ಮಾಡಿದ್ದಾರೆ. ಸರ್ಕಾರ ನಂಬಿರುವುದನ್ನು ನಿಮ್ಮನ್ನು ಅಂತ ಒಂದು ಕಡೆ ಪೋಲೀಸಿನವರಿಗೆ ಹೇಳಿದೆ. ಸರ್ಕಾರ ಇವತ್ತು ರೈತರನ್ನು ನಂಬಿಲ್ಲ ; ಕಾರ್ಮಿಕರನ್ನು ನಂಬಿಲ್ಲ ; ಕಷ್ಟಪಡತಕ್ಕ ಜನರನ್ನು ನಂಬಿಲ್ಲ. ಇವತ್ತು ಒಳಗೆ ಕೂತುಕೊಂಡು ಲಾಟಿ ಚಾರ್ಜ ಮಾಡಿ ಅಂತ ಆರ್ಡರ್ ಮಾಡುತ್ತಾರೆ ; ಆರ್ಡರ್ ಬಂದ ಕೂಡಲೇ ಲಾಠಿ ಚಾರ್ಜ ಮಾಡುತ್ತಾರೆ. ಪೋಲೀಸಿನವರು ಕೂಡ ರೈತರ ಮತ್ತು ಕಾರ್ಮಿಕರ ಮಕ್ಕಳೇ ; ನಿಮ್ಮನ್ನು ಲಾಠಿ ಚಾರ್ಜ ಮಾಡಿ ಎಂದು ನಿಮ್ಮ ಅಧಿಕಾರಿಗಳು ಹೇಳಿದರೆ ನಿಮ್ಮ ಅಧಿಕಾರಿಗಳ ಮೇಲೆ ಜೋರಾಗಿ ಲಾಠಿ ಎತ್ತಿ ಮೆಲ್ಲಗೆ ಮಡಗಿ.

ಇನ್ನು ಈ ದೇಶದಲ್ಲಿ ಕೋಮು ಗಲಭೆಗಳು ಅವಿಚಿನ್ನವಾಗಿ ಹಬ್ಬುತ್ತಿವೆ. ಬೇರೆ ರಾಜ್ಯಗಳಲ್ಲಿ ಹದಗೆಟ್ಟಿರುವಷ್ಟು ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಇನ್ನು ಹದಗೆಟ್ಟಿಲ್ಲ. ಪರಿಸ್ಥಿತಿ ಹದಗೆಡುವ ಸಂದರ್ಭಯಿರುವುದರಿಂದ ಬೀಜ ಮೊಳಕೆಯಾಗುವುದಕ್ಕಿಂತ ಮುಂಚಿತವಾಗಿಯೇ ತೆಗೆಯಬೇಕು. ಇದನ್ನು ತೆಗೆಯತಕ್ಕ ಪ್ರಾಮಾಣಿಕ ಪ್ರಯತ್ನ ಮಾಡಿದರೆ ಯಾವುದೇ ಕೋಮು ಗಲಭೆಗಳಾಗಲೀ ಸಂಭವಿಸುವುದಕ್ಕೆ ಆಗುವುದಿಲ್ಲ.

ಛೇರ್ಮನ್.—ಕೆಲವು ನಡೆದಿರತಕ್ಕ ಕೋಮು ಗಲಭೆಗಳು ನಮ್ಮ ಸಮಾಜಕ್ಕೆ ಕಳಂಕ ತರುವಂತವುಗಳಲ್ಲವೆ ?

ಶ್ರೀ ಜೆ. ಹೆಚ್. ಪಟೇಲ್ —ಅಂತ ಪ್ರಸಂಗ ಬರದ ಹಾಗೆ ನೋಡಿಕೊಳ್ಳುವುದಕ್ಕೆ ತಕ್ಕ ಕ್ರಮ ಕೈಗೊಳ್ಳಬೇಕು. ಇನ್ನು ಸನ್ಮಾನ ಸಮಾರಂಭಗಳ ಬಗ್ಗೆ ನನಗೆ ವೈಯಕ್ತಿಕವಾಗಿ ಇದರ ಬಗ್ಗೆ ಕಾಳಜಿ ಇಲ್ಲ. ಆದರೆ, ಸನ್ಮಾನ ಎನ್ನುವುದು ಜೋಕಾಗಬಾರದು. ಹೃತ್ಪೂರ್ವಕವಾಗಿ ಸನ್ಮಾನ ಮಾಡಿದರೆ ಹೋಗಿ. ಹೋಗಬಾರದು ಎಂದು ಯಾರು ಹೇಳುವುದಿಲ್ಲ. ಇದು ಮಾಕರಿ ಆಗಬಾರದು. It is almost becoming vulgar. That is why, through you I request the Hon'ble Chief Minister to observe some norms with regard to these felicitations.

ರಾಜ್ಯದಲ್ಲಿ ಏನು ಮಾಡಿದ್ದಾರೆ, ಏನು ಬಿಟ್ಟಿದ್ದಾರೆ ಎನ್ನುವುದರ ಬಗ್ಗೆ ಹೇಳುತ್ತಾ, ಮೆಡಿಕಲ್ ಕಾಲೇಜುಗಳನ್ನು ತೆಗೆದಿದ್ದೇವೆ ಫೈಲ್ ಕ್ಲಿಯರೆನ್ಸ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಸೂಪರ್‌ಫ್ಲಾಸ್ ಬೋರ್ಡ್ ತೆಗೆದ್ದೀವೆಂದು ಹೇಳಿದ್ದಾರೆ ಇದು ಸ್ವಾಗತಾರ್ಹವಾದುದು. ಇವುಗಳಿಂದ ನಿಜವಾಗಿಯೂ ರಾಜ್ಯದ ಆರ್ಥಿಕ ಭದ್ರತೆಗಾಗಿ ಮತ್ತು ಸಾಮಾಜಿಕ ಒಳಿತಿಗಾಗಿ ಮಾಡಿದಂತ ಕೆಲಸವಲ್ಲ ಇವುಗಳನ್ನು ಮಾಡಿದ್ದು ಸಾಧನೆ ಎಂದು ತಾವು ಹೇಳುವುದಾದರೆ, ನಮ್ಮದು ಅಭ್ಯಂತರವಿಲ್ಲ. ಇವತ್ತು ಸರ್ಕಾರ ದಿನದಿನಕ್ಕೆ ಪತ್ರಿಕೆಗಳ ಪ್ರಕಾರ ಹಲವಾರು ರಾಜನೀತಿಯನ್ನು ಬಲ್ಲವರ ಪ್ರಕಾರ ಕರ್ನಾಟಕ ಸರ್ಕಾರ ಜನ ವಿರೋಧಿ ಸರ್ಕಾರವಾಗುತ್ತಿದೆ ಪೋಲೀಸ್ ರಾಜ್ಯವಾಗುತ್ತಿದೆ. ಎಲ್ಲದಕ್ಕಿಂತ ಹೆಚ್ಚಾಗಿ ರಾಜ್ಯದಲ್ಲಿ ಇಂದು ಖಾಸಗಿ ಗುಂಡಾಗಿರಿ ಜಾಸ್ತಿಯಾಗುತ್ತಿದೆ. ಇದಕ್ಕೆ ಕಾರಣರು ಯಾರು ಎಂದು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ಲಕ್ಷ್ಮೀ ಸಾಗರ್.—ಬಿಡಿಸಿ ಹೇಳಿ

ಶ್ರೀ ಜೆ.ಹೆಚ್. ಪಟೇಲ್.—ಸರ್ಕಾರದ ಗುಂಡಾಗಿರಿ ಅಂದರೆ ಸರ್ಕಾರ ಪೋಲೀಸಿನವರನ್ನು ನೇಮಿಸಿಕೊಂಡು ಮಾಡುವಂತ ಗುಂಡಾಗಿರಿ. ಖಾಸಗೀ ಗುಂಡಾಗಿರಿ ಅಂದರೆ ಒಂದು ಪಾರ್ಟಿಗೆ ಸಂಬಂಧ ಪಟ್ಟಂತೆ ಒಬ್ಬ ವ್ಯಕ್ತಿಗೆ ಸಂಬಂಧಪಟ್ಟಂತೆ ಮಾಡುವಂತಾದ್ದು. ಇವತ್ತು ನಮ್ಮ ರಾಜ್ಯದಲ್ಲಿ ಒಬ್ಬ ವ್ಯಕ್ತಿಯ ಸಂಬಂಧ ಇಟ್ಟುಕೊಂಡು ಪತ್ರಿಕಾಲಯಗಳಿಗೆ ನುಗ್ಗಿ ಅವರನ್ನು ಬಂಧನಕ್ಕೊಳಗಾಗುವಂತೆ ಮಾಡತಕ್ಕ ಜನ ತಯಾರಾಗಿದ್ದಾರೆ. ಇವತ್ತು ಸರ್ಕಾರದ ಕಾರ್ಯನೀತಿಯನ್ನು ಹಾಗೂ ಒಬ್ಬ ಮಂತ್ರಿಯ ಕಾರ್ಯನೀತಿಯನ್ನು, ಶಾಸಕರ ಕಾರ್ಯನೀತಿಯನ್ನು ಟೀಕೆ ಮಾಡಿದರೆ ಅವರನ್ನು ಹೊಡೆಯು ವುದು ಬಡಿಯುವುದು ಇವತ್ತು ನಡೆಯುತ್ತಾ ಇದೆ ಅಂದರೆ ಇವತ್ತು ನಾವು ಯಾವ ಇಸವಿಯಲ್ಲಿದ್ದೇವೆ ಯಾವ ಸರ್ಕಾರದಲ್ಲಿದ್ದೇವೆ ? ನಮ್ಮ ಸ್ಥಿತಿಗತಿ ಏನು ಟೀಕೆ ಮಾಡಿದರೆ ಚಾಕು, ಚೂರಿ ಉಪಯೋಗ ಮಾಡುವಂತ ಕಾಲ ಬಂದಿದೆ. ಸರ್ಕಾರ ಇದಕ್ಕೆ ಸಂಬಂಧವಿಲ್ಲವೆಂದು ಹೇಳಬಹುದು ಇವತ್ತು ಇದು ನಡೆಯುತ್ತಿರುವುದು ವಾಸ್ತವಿಕ. ಇವತ್ತು ಇಂಥ ದುರ್ಬಲ ಸ್ಥಿತಿಗೆ ನಾವು ಬಂದಿದ್ದೇವೆ ಇವತ್ತು ಯಾರನ್ನು ಯಾರು ಟೀಕೆ ಮಾಡುವ ಹಾಗಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸಮಾಜದ ಒಂದು ಗುಂಪಿನ ಮೇಲೆ ಮತ್ತೊಂದು ಗುಂಪಿನವರು ಗುಂಡಾಗಿರಿ ಮಾಡಿದಾಗ, ಕಾನೂನು ಪಾಲನೆ ಮಾಡತಕ್ಕ ಪೋಲೀಸಿನವರು ಕ್ರಮ ಏತಕ್ಕೆ ತೆಗೆದುಕೊಳ್ಳು ತ್ತಿಲ್ಲ ಅದನ್ನು ಹೇಳಿ.

ಛೇರ್ಮನ್,—ಸರ್ಕಾರದ ಪ್ರಚೋದನೆ ಇಲ್ಲವೆಂದಮೇಲೆ ಅದಕ್ಕೆ ಸರ್ಕಾರದ ಸಂಬಂಧವಿಲ್ಲ.

ಶ್ರೀ ಜೆ.ಹೆಚ್. ಪಟೇಲ್.—ಸರ್ಕಾರ ನೇರವಾಗಿ ಗುಂಡಾಗಿರಿಯಲ್ಲಿ ಪ್ರವೇಶ ಮಾಡಿಲ್ಲವೆಂದು ಮೇಲ್ನೋಟಕ್ಕೆ ಕಾಣುತ್ತೆ ಇದರ ಬಗ್ಗೆ ಸಮಯ ಬಂದಾಗ ಮಾತನಾಡುತ್ತೇನೆ. ಎಲ್ಲರಿಗೂ ಗೊತ್ತಿರುವ ಹಾಗೆ ಪತ್ರಿಕೆಗಳಲ್ಲಿ ಪ್ರಚಾರ ನೋಡಿದರೆ ಪೋಲೀಸಿನವರೇ ಕೈಕಟ್ಟಿಕೊಂಡು ಕೂತುಕೊಂಡಿರುವ ಸನ್ನಿವೇಶ ಗಳು ಬಂದಿದೆ. ಇಂಥ ಸಂದರ್ಭದಲ್ಲಿ ಸರ್ಕಾರಕ್ಕೆ ಬೇಕಾಗಿರತಕ್ಕ ಅನೇಕರು ಇಂಥ ಗೂಂಡಾಗಿರಿಯಲ್ಲಿ ಸೇರಿಕೊಂಡಿರುತ್ತಾರೆ ಇದರಿಂದ ಪೋಲೀಸಿನವರು ಕ್ರಮ ತೆಗೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ.

ಇನ್ನು ಆಡಳಿತದಲ್ಲಿ ಬ್ರಷ್ಟತನ, ಬ್ರಷ್ಟಾಚಾರ ಮೊದಲಿನಿಂದಲೂ ಬಂದಿದೆ. ಇವರು ಹೊಸದಾಗಿ ಷುರು ಮಾಡಿದ್ದು ಎಂದು ನಾನು ಹೇಳುವುದಿಲ್ಲ. ಇವರ ಕಾಲದಲ್ಲಿ ವೇಗವಾಗಿ ಹೋಗುತ್ತಿದೆ. ಎಲ್ಲಾ ಕಡೆ ಇದರ ಬಗ್ಗೆ ಖುಲ್ಲಾ ಖುಲಾಮು. ಹಿಂದೆ ಇಂಥ ಕೆಲಸದಲ್ಲಿ ಸ್ವಲ್ಪ ನಾಚಿಕೆ ಪಟ್ಟುಕೊಳ್ಳುತ್ತಿದ್ದರು. ಇವತ್ತು ನಾಚಿಕೆ, ಮಾನ ಮರ್ಯಾದೆ ಬಿಟ್ಟು ಬ್ರಷ್ಟಚಾರದ ವ್ಯವಸ್ಥೆ ನಡೆಯುತ್ತಿದೆ. ಅಧಿಕಾರಿಗಳಾಗಿರಲಿ ಪ್ರತಿನಿಧಿಗಳಾಗಿರಲಿ, ಮಂತ್ರಿಗಳಾಗಿರಲಿ ಯಾರೇ ಆಗಿರಲಿ ಬ್ರಷ್ಟಾಚಾರ ಇವತ್ತು ಎದ್ದು ಕಾಣುತ್ತಿದೆ. ಅಪ್ಪರ್ ಕೃಷ್ಣ ಬಗ್ಗೆ ಒಂದು ಪುಸ್ತಕ ಬರೆದಿದ್ದಾರೆ ಯಾವ ಯಾವ ಇಂಜಿನಿಯರ್ ಎಷ್ಟೆಷ್ಟು ದುಡ್ಡು ಕೊಟ್ಟಿದ್ದಾರೆ, ಮಾನ್ಯ ಸದನದ ನಾಯಕರಿಗೆ ಕೇಳುತ್ತೇನೆ ಯಾರೋ ಒಬ್ಬ ಇಂಜಿನಿಯರ್ ನಿಮ್ಮ ಹತ್ತಿರ ಬಂದು ನನ್ನ ಸೇವಾವಧಿಯನ್ನು ವಿಸ್ತರಣೆ ಮಾಡಿದರೆ ೫೦ ಲಕ್ಷ ಕೊಡುತ್ತೇನೆಂದು ಹೇಳಿದ್ದು ಪತ್ರಿಕೆಗಳಲ್ಲಿ ವರದಿಯಾಗಿತ್ತು. ಇದನ್ನು ಮುಖ್ಯ ಮಂತ್ರಿಗಳು ಹೇಳಿದ್ದರು. ಮುಖ್ಯ ಮಂತ್ರಿಗಳ ಎದುರಿಗೆ ಬಂದು ತನ್ನ ಸರ್ವೀಸ್ ಎಕ್ಸ್‌ಟೆನ್‌ಷನ್‌ಗೆ ೫೦ ಲಕ್ಷರೂಪಾಯಿ ಕೊಡುತ್ತೇನೆಂದು ಹೇಳುವಷ್ಟು ಧೈರ್ಯವನ್ನು ಒಬ್ಬ ಇಂಜಿನಿಯರ್ ಮಾಡಿದ್ದಾನೆ ಎಂದರೆ ನಿಮ್ಮ ಬಗ್ಗೆ ಸಂಶಯ ಬರುತ್ತದೆ. ಇಲ್ಲದಿದ್ದರೆ, ನಿಮ್ಮ ಎದುರಿಗೆ ಹೇಳಲಿಕ್ಕೆ ಆತನಿಗೆ ಧೈರ್ಯ ಎಲ್ಲಿ ಬರುತ್ತದೆ. ಅದಕ್ಕೆ ಇವರು ವೈಯಕ್ತಿ ಕವಾಗಿ ಕಾರಣರೋ ಇಲ್ಲವೋ ಗೊತ್ತಿಲ್ಲ, ೫೦ ಲಕ್ಷ ರೂಪಾಯಿ ಕೊಡುತ್ತೇನೆ ಎಂದು ಹೇಳಿದ ಮನುಷ್ಯನಿಗೆ ಶಿಕ್ಷೆಯಾಗಿಲ್ಲ. ನ್ಯಾಯವಾಗಿ ನೋಡಿದರೆ ಶಿಕ್ಷೆಯಾಗಬೇಕಾಗಿತ್ತು. ಇಂತಹ ಅಧಿಕಾರಿ ಇಂತಹ ಕಡೆ ಇದ್ದ ಎಂದು ಹೇಳಬೇಕಾಗಿತ್ತು.

ಛೇರ್‌ಮನ್.—ಕಾನೂನಿನಲ್ಲಿ ಕೊಡುವವರಿಗೆ ಶಿಕ್ಷೆ ಇಲ್ಲ ಎಂದು ಕಾಣುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಕೊಡುವವರಿಗೂ ಇದೆ, ತೆಗೆದುಕೊಳ್ಳುವವರಿಗೂ ಇದೆ.

ಶ್ರೀ ಜೆ.ಹೆಚ್. ಪಟೇಲ್.—ಒಂದು ರಾಜ್ಯದ ಮುಖ್ಯ ಮಂತ್ರಿಯ ಎದುರಿಗೆ ೫೦ ಲಕ್ಷ ರೂಪಾಯಿ ಕೊಡುತ್ತೇನೆಂದು ಹೇಳಿದರು ಆತನಿಗೆ ಶಿಕ್ಷೆ ಆಗಿಲ್ಲ ಎಂದರೆ ಈ ರಾಜ್ಯದ ಆಡಳಿತದಲ್ಲಿ ನೀವು ಯಾರನ್ನು ಹೆದರಿಸಲಿಕ್ಕೆ ಸಾಧ್ಯ. ಒಬ್ಬ ತಹಶೀಲ್ದಾರನಿಗೆ ಹೇಳಿದರೆ ಅವನು ಏನು ಮಾಡುತ್ತಾನೆ. ಒಬ್ಬ ಸಣ್ಣ ಆಫೀಸರ್ ಡಿಸ್‌ಮಿಸ್ ಮಾಡಿದರೆ ಏನು ಪ್ರಯೋಜನ. ಇದು ಸರಿಯಾಗಬೇಕಾಗಿದ್ದರೆ ಒಂದು

ದೊಡ್ಡ ಗುಂಡನ್ನು ಹಾರಿಸಿದ್ದರೆ ಆಗ ಬೇರೆಯವರಿಗೂ ಹೆದರಿಕೆಯಾಗುತ್ತಿತ್ತು. ೫೦ ಲಕ್ಷ ರೂಪಾಯಿ ಕೊಡಲಿಕ್ಕೆ ಬಂದಿದ್ದು ಹೇಳಿದ್ದಾರೆ, ಇದು ಅದಕ್ಷತೆ ಮತ್ತು ಸಂಶಯಾಸ್ಪದವಾಗಿದೆ, ಏಕೆಂದರೆ ಅವರು ಪೂರ್ತಿ ಎಕ್ಸ್‌ಪ್ಲೈನ್ ಮಾಡಿಲ್ಲ. ಈಗ ಅಧಿಕಾರಿಗಳಲ್ಲಿ ಏನು ಬಂದಿದೆ ಎಂದರೆ ನಾವು ಎಷ್ಟು ದುಡು ಹೊಡೆದರು ಏನೂ ಆಗುವುದಿಲ್ಲ ಎನ್ನುವ ಅಭಿಪ್ರಾಯ ಬಂದಿದೆ. ಈ ಜನರಿಂದ ದುಡ್ಡು ತೆಗೆದುಕೊಳ್ಳುವುದಕ್ಕೆ ಕೆಲವು ತಂತ್ರಗಳಿವೆ. ಈಗ ಒಂದು ವಿಷಯ ತಿಳಿದು ಬಂದಿದೆ. ಇದು ಸುಳ್ಳೋ ನಿಜವೋ ಗೊತ್ತಿಲ್ಲ. ಸರ್ಕಾರ ಈ ಬಗ್ಗೆ ಉತ್ತರಕೊಡಬೇಕಾಗುತ್ತದೆ. ಇನ್ನು ಬೆಂಗಳೂರು ನಗರದಲ್ಲಿ ಗಗನ ಚುಂಬಿ ಕಟ್ಟಡಗಳನ್ನು ಕಟ್ಟಬಾರದು ಎಂದು ತೀರ್ಮಾನ ಮಾಡಿದ್ದಾರೆ. ಬೆಂಗಳೂರು ನಗರ ಕಾರ್ಪೊರೇಷನ್ನಿನಲ್ಲಿ ನಾಲ್ಕು ಅಂತಸ್ತುಗಳಿಗೆ ಪರ್‌ಮಿಷನ್ ಕೊಡಬಹುದು ಅದರ ಮೇಲ್ಪಟ್ಟು ಕೊಡಬಾರದು ಎಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಇವೊತ್ತು ಬಾಂಬೆ, ಕಲ್ಕತ್ತದಿಂದ ಬಂದಿರತಕ್ಕಂತಹ ಶ್ರೀಮಂತರು ಒಂದೊಂದು ಪ್ಲಾಟ್ ಕಟ್ಟಿಸಲಿಕ್ಕೆ ನಲವತ್ತು ಸಾವಿರ ರೂಪಾಯಿಗಳವರೆಗೆ ದುಡ್ಡನ್ನು ಕೊಟ್ಟು ಬಿಲ್ಡಿಂಗ್‌ಗೆ ಪರ್‌ಮಿಷನ್ ಪಡೆಯುತ್ತಿದ್ದಾರೆ ಎನ್ನುವುದು ನನಗೆ ಖಚಿತವಾದ ವರ್ತಮಾನ ಬರುತ್ತಿದೆ. ಇವೊತ್ತು ಸರ್ಕಾರಕ್ಕೆ ಮತ್ತು ಸರ್ಕಾರದಲ್ಲಿರತಕ್ಕ ಸಂಬಂಧಪಟ್ಟ ಜನರಿಗೆ ೪೦ ಸಾವಿರ ರೂಪಾಯಿ ಕೊಟ್ಟು ಅವನು ಎಷ್ಟು ಅಂತಸ್ತಿನ ಮನೆಗಳನ್ನಾದರೂ ಕಟ್ಟಿಸಿಕೊಳ್ಳಬಹುದು. ಈ ರೀತಿ ಅವರು ಕೊಡತಕ್ಕ ಹಣ ಎಲ್ಲಿ ಹೋಗುತ್ತದೆ, ಯಾರಿಗೆ ಹೋಗುತ್ತದೆ ಎಂದು ಹೇಳುವುದಿಲ್ಲ. ಇವರಿಗೆ ಲಾರಿಯಿಂದ ಜನರನ್ನು ತರಿಸಲಿಕ್ಕೆ ದುಡ್ಡು ಎಲ್ಲಿಂದ ಬರುತ್ತದೆ ಎಂದು ಲೆಕ್ಕ ಹಾಕಿದರೆ, ನಾಲ್ಕು ಅಂತಸ್ತು ಕಟ್ಟಡಗಳನ್ನು ಕಟ್ಟತಕ್ಕವರಿಂದ ಬರುತ್ತಿದೆ ಎಂದು ಗೊತ್ತಾಗುತ್ತದೆ. ಇನ್ನು ಎಂಟ್ರಿ ಟ್ಯಾಕ್ಸ್ ಹಾಕಿದ್ದರು. ಅವರ ಬಗ್ಗೆ ಈಗ ವ್ಯವಹಾರ ನಡೆಯುತ್ತಿದೆ. ಅದು ಇನ್ನು ಫೈನಲೈಸ್ ಆಗಿಲ್ಲ. ಆಕ್ಟ್ರಾಯಿ ತೆಗೆದ ಮೇಲೆ ಎಂಟ್ರಿ ಟ್ಯಾಕ್ಸ್ ಹಾಕಿದ್ದ ಅಧಿಕಾರವನ್ನು ಚಾಲೆಂಜ್ ಮಾಡಿದರು. ರಾಜ್ಯದ ಹೈಕೋರ್ಟ್ ಕಾನೂನು ತಪ್ಪು ಎಂದು ಹೇಳಿದರು. ಅನಂತರ ಸರ್ಕಾರ ಸುಪ್ರೀಂ ಕೋರ್ಟಿಗೆ ಹೋಯಿತು. ಈಗ ಸರಿ ಎಂದು ತೀರ್ಮಾನವಾಗಿದೆ. ಅದರ ಪ್ರಕಾರ ಯಾವಾಗ ಕಾನೂನು ಮಾಡಿತ್ತು ಅಲ್ಲಿಂದ ಇಲ್ಲಿಯವರೆಗೆ ಕೊಡಬೇಕಾಗುತ್ತದೆ. ಕೆಲವರು ಈ ಬಗ್ಗೆ ಸ್ಟೇ ತಂದಿದ್ದರು. ಇನ್ನು ಉಳಿದವರದ್ದು ಡಿಪಾಸಿಟ್ ಇದೆ. ಈಗ ಕಾನೂನು ಮಾಡಿದಾಗಿನಿಂದಲೂ ಅಪ್ಲೈ ಆಗಬೇಕು ಎಂದು ಕಾನೂನಿನಲ್ಲಿ ಇದೆ. ಈಗ ಅದನ್ನು ತೆಗೆದರೆ ಕೋಟಿ, ಕೋಟಿ ರೂಪಾಯಿಗಳ ಹಣ ವರ್ತಕರಿಗೆ ಉಳಿಯುತ್ತದೆ. ಅದರಲ್ಲಿ ಕಾಲು ಪರ್‌ಸೆಂಟ್ ಸರ್ಕಾರ ನಡೆಸುವವರಿಗೆ ಬರುತ್ತದೆ. ಈಗ ಇದರ ಬಗ್ಗೆ ವ್ಯವಹಾರ ನಡೆಯುತ್ತಿದೆ. ಆ ಕಾನೂನನ್ನು ತಿದ್ದುಪಡಿ ಮಾಡಿ ರೆಟ್ರೊಸ್‌ಪೆಕ್ಟೀವ್ ತೆಗೆದು ಹಾಕಿದರೆ ಸಾಕಷ್ಟು ಕಪ್ಪೆಗಳನ್ನು ಹಾವು ನುಂಗಿದೆ ಎಂದು ಅರ್ಥವಾಗುತ್ತದೆ. ಇನ್ನು ಒಂದೆರಡು ವಿಚಾರಗಳನ್ನು ನಾನು ಸರ್ಕಾರದ ಗಮನಕ್ಕೆ ತಂದು ನನ್ನ ಮಾತುಗಳನ್ನು ಮುಗಿಸುತ್ತೇನೆ. ಮೈಸೂರಿನಲ್ಲಿ ಒಂದು ಸರ್ಕಾರಿ ಗೆಸ್ಟ್ ಹೌಸ್ ಇದೆ. ಅಲ್ಲಿ ಬಹಳ ಬೆಲೆಯಾದ ಪೀಠೋಪಕರಣಗಳು, ರಗ್ಗುಗಳು, ಉತ್ತಮವಾದ ಸಾಮಾನುಗಳು ಇವೆ ಎಂದು ತಿಳಿದು ಬಂದಿದೆ. ಅವನ್ನು ಈಗ ಟೂರಿಸಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನವರಿಗೆ ವಹಿಸಿಕೊಟ್ಟು, ಅಲ್ಲಿರತಕ್ಕ ಸಾಮಾನುಗಳನ್ನು, ವ್ಯಾಲ್ಯುಬೆಲ್ ಕಾರ್ಪೆಟ್‌ಗಳನ್ನು ಅವರು ಮಾರಾಟ ಮಾಡುತ್ತಾರೋ ಅಥವಾ ಆ ಸಾಮಾನುಗಳು ಕಣ್ಮರೆಯಾಗುತ್ತವೋ ಗೊತ್ತಿಲ್ಲ.

ಅವು ಕಣ್ಮರೆಯಾಗುವ ಸ್ಥಿತಿಯಲ್ಲಿದೆ ಎಂದು ತಿಳಿದು ಬಂದಿದೆ. ಈ ಬಗ್ಗೆ ಸರ್ಕಾರ ಅದರ ಗಂಭೀರತೆ ಏನಿದೆ ಅದನ್ನು ಉಳಿಸಿಕೊಳ್ಳಬೇಕೆಂದು ಬೇರೆ ಯಾವುದೇ ಒಂದು ಒತ್ತಡಕ್ಕೆ ಮಣಿಯದೆ ಕಲಸ ಮಾಡಬೇಕೆಂದು ಸಲಹೆಮಾಡುತ್ತೇನೆ. ರಾಜ್ಯಪಾಲರ ಭಾಷಣವನ್ನು ಒಟ್ಟಾರೆ ಒಂದು ಮಾತಿನಲ್ಲಿ ಹೇಳುವುದಾದರೆ, ಸರ್ಕಾರದ ದಿವಾಳಿತನವನ್ನು ತೋರಿಸತಕ್ಕ ಒಂದು ಸಣ್ಣ ಚಿತ್ರ ನನ್ನ ಕಣ್ಣೆದುರಿಗೆ ಬರುತ್ತಿದೆ. ಅವರ ಉತ್ಸಾಹಯುತ, ಜನಹಿತಕಾರಿಯಾದ ಕೆಲವು ಕಾರ್ಯಕ್ರಮಗಳು ಏನಿವೆ ಅವುಗಳನ್ನು ದೊಡ್ಡದು ಮಾಡಿ, ವಾಸ್ತವಿಕವಾಗಿ ಮನುಷ್ಯನ ಸ್ಥಿತಿ ರಾಜ್ಯದಲ್ಲಿ ಏನಿದೆ ಅದನ್ನು ಅರ್ಥ ಮಾಡಿಕೊಳ್ಳದೆ ಈಗ ನಾವು ಮಾಡಿದ್ದೇ ಸಾಕು ಎನ್ನುವ ತೀರ್ಪಿನಲ್ಲಿ ಹೋದರೆ ದೇಶಕ್ಕೆ ಗಂಡಾಂತರವಿದೆ. ಮತ್ತು ದೇಶದಲ್ಲಿರತಕ್ಕ ಪ್ರಕ್ಷುಬ್ಧ ವಾತಾವರಣ ಆರ್ಥಿಕವಾಗಿ, ರಾಜಕೀಯವಾಗಿ ವಾತಾವರಣ ಏನಿದೆ ನೋಡಿದರೆ ನಾವು ದೂರವಾದಷ್ಟು ಅಷ್ಟೇ ಕಷ್ಟ ಬೆಳವಣಿಗೆಗೆ ಬರುತ್ತಿದೆ. ಈ ತರಹ ಸರ್ಕಾರ ನಡೆಸತಕ್ಕ ಜನರ ವರ್ತನೆಯನ್ನು ಒಪ್ಪಲಿಕ್ಕೆ ಆಗುವುದಿಲ್ಲ. ಆದ್ದರಿಂದ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಮಾಡಲಿಕ್ಕೆ ಆಗುವುದಿಲ್ಲ.

ಛೇರ್‌ಮನ್.—ಮಾನ್ಯ ಸದಸ್ಯರು ಕೆಲವೊಂದು ಕಾರ್ಯಕ್ರಮಗಳನ್ನು ಒಪ್ಪಿಕೊಂಡಿದ್ದೀರಾ ಸಂತೋಷ.

ಶ್ರೀ ಜೆ.ಹೆಚ್. ಪಟೇಲ್.—ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಹೊಸ ವರ್ಷದ ಶುಭಾಶಯುಗಳನ್ನು ಹೇಳಿದ್ದಾರೆ. ಆದ್ದರಿಂದ ನಾವು ಹೊಸ ವರ್ಷದ ಶುಭಾಶಯುಗಳನ್ನು ಹೇಳಬಹುದು. ಭಾಷಣಕ್ಕೆ ಮಾತ್ರ ಹೇಳಲಿಕ್ಕೆ ಆಗುವುದಿಲ್ಲ. ಇನ್ನು ಮುಂದೆ ಈ ತರಹ ಮಾಡಬೇಡಿ ಎಂದು ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ,

† ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ).—ಸನ್ಮಾನ್ಯ ಅಧ್ಯಕ್ಷರೆ, ನಾನು ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಮಾಡುತ್ತಾ ಕೆಲವು ವಿಚಾರಗಳನ್ನು ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರು ಮಾತನಾಡುವಾಗ ಅಧ್ಯಕ್ಷರು ಒಂದು ಪ್ರಶ್ನೆಯನ್ನು ಕೇಳಿದರು. ಮಾರ್ಕೆಟ್ ಕಮಿಟಿಯಲ್ಲಿ ಚೇರ್ಮನ್ನರು ಮತ್ತು ಮೆಜಾರಿಟಿ ಆಫ್ ದಿ ಮೆಂಬರ್ಸ್, ಕೃಷಿಕರು ಮತ್ತು ಬಿಸಿನೆಸ್‌ಮೆನ್ ಕಾನ್ಸ್‌ಪಿರಸಿ ಮಾಡಿ ಕೃಷಿಕರ ವಿರೋಧ ಮಾಡುತ್ತಿದ್ದಾರೆಂದು ಮಾನ್ಯ ಪಟೇಲರು ಏನು ತಮ್ಮ ವಿಚಾರ ಪ್ರಕಟಮಾಡಿದರು ಅದರ ಬಗ್ಗೆ ನಾನು ಸ್ವಲ್ಪಮಟ್ಟಿಗೆ ಸರಿ ಇದೆ ಎಂದು ಒಪ್ಪುತ್ತೇನೆ. ಇವೊತ್ತು ಈ ದೇಶದಲ್ಲಿ ರಸ್ತೆಗಳು ಆಗಿವೆ, ಆಗುತ್ತಿವೆ. ಫುಡ್‌ಗ್ರೈನ್ ಬೆಲೆ ಡಬಲ್ ಆಗುತ್ತಿದೆ ಈ ದೇಶದಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ. ನಾನು ಮೊನ್ನೆ ಬೊಂಬಾಯಿಗೆ ಹೋದಾಗ ಒಂದು ದೃಶ್ಯವನ್ನು ನೋಡಿದೆ. ಅಲ್ಲಿ ಸ್ಕೇರ್‌ಸಿಟಿ ಆಫ್ ಕ್ಯಾರೆಕ್ಟರ್ ಎಂದ ಬರೆದು ಹಾಕಿದ್ದರು. ನಾವು ಕಳೆದ ೩೦ ವರ್ಷದಿಂದ ನೋಡಿದರೆ, ಇದು ಮಾತ್ರ ಕೆಳಮಟ್ಟಕ್ಕೆ ಬಂದಿದೆ ಎನ್ನುವುದನ್ನು ಒಪ್ಪಬೇಕಾಗಿದೆ. ಇದರ ಕಾರಣ ಏನೆಂದರೆ, ನಮ್ಮ ಹತ್ತಿರ ಕಾನ್‌ಸ್ಟಿಟ್ಯೂಷನ್ ಬುಕ್ ಇದೆ. ನಾವು ಇಲ್ಲಿ ಏನಾದರೂ ಅಮೆಂಡ್‌ಮೆಂಡ್‌ಮಾಡಿ ಕಳುಹಿಸಿಕೊಟ್ಟರೆ ಆ್ಯಕ್ಟ್ ಆಗುವಾಗ ಹೈಕೋರ್ಟ್‌ಗೆ ಹೋಗಿ ಅಲ್ಲಿ ರದ್ದಾಗುತ್ತದೆ. ಮತ್ತೆ ನಾವು ತಿದ್ದುಪಡಿಮಾಡಿ ಪಾಸ್‌ಮಾಡಿ ಕಳುಹಿಸುತ್ತೇವೆ, ಪುನಃ ಅದೇ ಆಗುತ್ತದೆ. ಆರ್ಥಿಕ ರಂಗದಲ್ಲಾಗಲಿ, ಸಾಮಾಜಿಕ ರಂಗದಲ್ಲಾಗಲಿ, ಎಲ್ಲಾ ಕೆಟ್ಟು ಹೋಗುತ್ತಿದೆ. ಪ್ರತಿಯೊಬ್ಬರೂ ಇದನ್ನು ವಿಚಾರ ಮಾಡಬೇಕು. ನಾನು ಸರಿ, ದೇಶ ಕೆಟ್ಟದ್ದು ಎನ್ನುವ ಪ್ರಕಾರ ಇವತ್ತು ಮನುಷ್ಯ ಯೋಚನೆ ಮಾಡುತ್ತಿದ್ದಾನೆ. ಯಾವ ಮನುಷ್ಯನೇ ಆಗಲಿ ಸತ್ಯದಿಂದ, ನ್ಯಾಯದಿಂದ ನಡೆದುಕೊಳ್ಳುವುದನ್ನು ಕಲಿಯಬೇಕು. ನನ್ನ ಮಟ್ಟಿಗೆ ಹೇಳುವುದಾದರೆ ಯಾರು ಏನೇ ಹೇಳಿದರೂ ನಾನು ಮಾತ್ರ ನ್ಯಾಯವಾಗಿ, ಸತ್ಯದಿಂದ ನಡೆದುಕೊಳ್ಳುತ್ತಿದ್ದೇನೆ. ಮಂತ್ರಿಗಳೂ, ಶಾಸಕರೂ, ಅಧಿಕಾರಿಗಳೂ ಸರ್ಕಾರದ ಹಣವನ್ನು ಲೂಟಿ ಹೊಡೆಯುತ್ತಿದ್ದಾರೆಂದು ಮಾನ್ಯ ಪಟೇಲ್‌ರವರು ಹೇಳಿದರು. ಇದು ಹೊಸದೇನೂ ಅಲ್ಲ. ಕಳೆದ ೩೦ ವರ್ಷಗಳಿಂದಲೂ ಇದು ಒಂದೇಸಮನೆ ನಡೆದುಕೊಂಡು ಬರುತ್ತಿದೆ. ಸತ್ಯದಿಂದ ನಡೆದುಕೊಳ್ಳತಕ್ಕ ಜನ ಇಲ್ಲಿ ಒಂದು ರೆಸಲ್ಯೂಷನನ್ನು ತಂದು ಮಂತ್ರಿಗಳು, ಶಾಸಕರು, ಅಧಿಕಾರಿಗಳು ರೊಕ್ಕ ಹೊಡೆಯುವುದನ್ನು ಏತಕ್ಕೆ ನಿಲ್ಲಿಸಲಿಲ್ಲ ? ಸ್ವಾಮಿ, ನಾನು ತಮಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಏನೆಂದರೆ. ಕಳೆದ ೩೦ ವರ್ಷಗಳಿಂದ ಯಾರ್ಯಾರು ಎಂ. ಎಲ್. ಎ. ಗಳಾಗಿದ್ದರು, ಎಂ.ಪಿ.ಗಳಾಗಿದ್ದರು. ಮಂತ್ರಿಗಳಾಗಿದ್ದರು, ಅಧಿಕಾರಿಗಳಾಗಿದ್ದರು, ಅವರು ಅಧಿಕಾರಕ್ಕೆ ಬರುವುದಕ್ಕ ಮುಂಚಿತವಾಗಿ ಅವರ ಆಸ್ತಿಪಾಸ್ತಿ ಎಷ್ಟಿತ್ತು ? ಅವರ ಅವಧಿ ಮುಗಿದಮೇಲೆ ಎಷ್ಟು ಆಸ್ತಿ ಇದೆ, ದುಡ್ಡು ಎಷ್ಟಿದೆ, ಮನೆಗಳು ಎಷ್ಟಿವೆ ಇನ್‌ಕಂ ಎಷ್ಟಿದೆ. ಬಂಗಾರ ಎಷ್ಟು ತೆಗೆದುಕೊಂಡಿದ್ದಾರೆ ಎಂಬುದನ್ನೆಲ್ಲಾ ನೋಡಬೇಕು. ಅವರ ವಿಚಾರಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದಕ್ಕೆ ಈ ಸಭೆಯಲ್ಲಿ ಒಂದು ರೆಸಲ್ಯೂಷನ್ ತರಬೇಕೆಂದು ನಾನು ಹೇಳಬಯಸುತ್ತೇನೆ. ನಮ್ಮ ದೇಶದಲ್ಲಿ ಸಮಾಜವಾದವಾಗಲಿ, ಜಾತ್ಯಾತೀತ ರಾಷ್ಟ್ರ ಎಂಬುದಾಗಲಿ, ಅಥವಾ ಡೆಮೋಕ್ರಸಿ ಆಗಲಿ ಯಾವುದೂ ಉಳಿದಿಲ್ಲವೆಂದು ನಾನು ಹೇಳಬೇಕಾಗಿದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಮ್ಮ ದೇಶದಲ್ಲಿ ಇವತ್ತು ಒಬ್ಬ ವ್ಯಕ್ತಿಯ ಆದಾಯ ೨ ರೂಪಾಯಿ ಇದ್ದರೆ, ಮತ್ತೊಬ್ಬ ವ್ಯಕ್ತಿಯ ಆದಾಯ ೨ ಲಕ್ಷ ರೂ. ಇದೆ. ಅಂದಮೇಲೆ ಇದು ಸಮಾಜವಾದವೆ ? ರಾಷ್ಟ್ರಪತಿಗಳು ಒಮ್ಮೆ ಮಾತನಾಡುತ್ತಾ "ನಾನು ಈ ದೌರ್ಭಾಗ್ಯ ದೇಶದ ರಾಷ್ಟ್ರಪತಿಯಾಗಿದ್ದೇನೆ" ಎಂದು ಹೇಳಿದ್ದಾರೆ. ಇಲ್ಲಿರತಕ್ಕ ಪ್ರತಿಯೊಬ್ಬ ಸದಸ್ಯರಿಗೂ ಕೂಡ ಜವಾಬ್ದಾರಿ ಇದೆ ಎಂಬುದನ್ನು ದಯವಿಟ್ಟು ಮರೆಯಬಾರದು. ನಾವು ಒಳ್ಳೆಯ ದಾರಿಯಲ್ಲಿ ಹೋಗತಕ್ಕ ವ್ಯವಸ್ಥೆ ಮಾಡಿಕೊಳ್ಳಬೇಕು.

ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಹೇಳಿದಂತೆ ಒಬ್ಬ ವ್ಯಕ್ತಿಗೆ ೨ ರೂಪಾಯಿ ಮತ್ತೊಬ್ಬ ವ್ಯಕ್ತಿಗೆ ೨ ಲಕ್ಷ ರೂಪಾಯಿ ಇನ್‌ಕಂ ಇದೆ. ಇಂಥ ಸಂದರ್ಭದಲ್ಲಿ ಈ ತಾರತಮ್ಯವನ್ನು ಸರಿಪಡಿಸುವುದಕ್ಕೆ ಸರ್ಕಾರದ ಕೈಯಲ್ಲಿ ಆಗುವುದಿಲ್ಲವೆಂದರೆ ಈ ರಾಜ್ಯದಲ್ಲಿ ಇನ್ನು ಯಾವ ಪ್ರಕಾರ ಆಡಳಿತ ನಡೆಯುತ್ತಿದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಜನತೆ ಇದನ್ನು ನೋಡುತ್ತಿದ್ದಾರೆ. ನಾನು ಸಾಮಾನ್ಯವಾಗಿ ಇಲ್ಲಿರತಕ್ಕ "ಸುಖಸಾಗರ" ಹೋಟೆಲ್‌ಗೆ ಜೂಸ್ ಕುಡಿಯುವುದಕ್ಕೆ ಆಗಾಗ್ಗೆ ಹೋಗು

ತ್ತಿರುತ್ತೇನೆ. ಇತ್ತೀಚೆಗೆ ಅಲ್ಲಿಗೆ ನಾನು ಹೋಗಿದ್ದಾಗ ಸುಮಾರು ೧೦ ಮಂದಿ ಲಂಗೋಟಿ ಹಾಕಿಕೊಂಡಿದ್ದವರು ಬಂದು ಅಲ್ಲಿ ಹಾಕಿದ್ದ ಎಂಜಲು ಪತ್ರಾವಳಿಯನ್ನು ನೆಕ್ಕುತ್ತಿದ್ದರು. ಅದೇ ಪತ್ರಾವಳಿಯನ್ನು ನಾಯಿ ಬೆಕ್ಕುಗಳು ನೆಕ್ಕುತ್ತಿದ್ದುವು. ಸಮಾಜವಾದವನ್ನು ಹೇಳತಕ್ಕ ನಾವುಗಳು ಏನು ಮಾಡಿದ್ದೇವೆ ? ಜನರು ನಮ್ಮನ್ನು ಎಂ.ಪಿ.ಗಳಾಗಿ ಎಂ.ಎಲ್.ಸಿ.ಗಳಾಗಿ, ಎಂ.ಎಲ್.ಎ.ಗಳಾಗಿ ಆರಿಸಿ ಕಳುಹಿಸಿ ನಮಗೆ ಅಧಿಕಾರವನ್ನು ಕೊಟ್ಟಿದ್ದಾರೆ. ನಾವು ಚುನಾವಣೆಯಲ್ಲಿ ಗೆದ್ದು ಬಂದಮೇಲೆ ಏನು ಜನಹಿತ ಕಾರ್ಯವನ್ನು ಮಾಡಿದ್ದೇವೆ. ನಮ್ಮ ಟರ್ಮ್ ಮುಗಿದಮೇಲೆ ನಮಗೆ ಪೆನ್‌ಷನ್ ಬರುವಂತೆ ಮಾಡಿಕೊಂಡಿದ್ದೇವೆ. ಆ ದಿವಸ ಇದನ್ನು ಯಾರು ವಿರೋಧ ಮಾಡಲಿಲ್ಲ. ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಮೊರಾರ್ಜಿ ದೇಸಾಯಿಯವರನ್ನು ಕುರಿತು ಏನು ಸ್ವಾಮಿ ಶಾಸಕರಿಗೆ ಪೆನ್‌ಷನ್ ಬರುವಂತೆ ಮಾಡಿಕೊಳ್ಳುತ್ತಿರುವುದು ಸರಿಯೆ ? ಎಂದು ನಾವು ಕೇಳಿದ್ದಕ್ಕೆ "ನಾನು ಏನು ಮಾಡಲಿ. ಎಲ್ಲರೂ ಇದನ್ನು ಒಪ್ಪಿರುವುದರಿಂದ ನಾನು ಸುಮ್ಮನಿದ್ದೇನೆ'' ಎಂದು ಅವರು ಹೇಳಿದರು. ಇದು ಪ್ರಧಾನಿಯಾದವರು ಹೇಳುವ ಮಾತೇ ? ತಮಗೇ ಒಂದು ಮಾತನ್ನು ಹೇಳುವುದಾದರೆ ಪೋಲೀಸ್ ಪಟೇಲರು ನಿವೃತ್ತರಾಗಿ ೧೦ ವರ್ಷವಾಗಿದ್ದರೂ ಇನ್ನೂ ಅವರ ಪೆನ್‌ಷನ್ ಸೆಟ್ಲ್‌ಮೆಂಟ್ ಆಗಿಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ನಮಗೆ ೨೦ ಸಾವಿರ ದಳಪತಿಗಳು ಬೇಕು. ಇವತ್ತು ೧೪ ಸಾವಿರ ದಳಪತಿಗಳು ಹಗಲು ರಾತ್ರಿ ೨೪ ಗಂಟೆಗಳೂ ದುಡಿದು ತಮ್ಮ ಪೆನ್‌ಷನ್ ಬಗ್ಗೆ ಹಲವಾರು ರೆಪ್ರಸೆಂಟೇಷನ್ಸ್ ಕೊಟ್ಟಿದ್ದರೂ ಇದುವರೆಗೂ ಅವರ ರೆಪ್ರಸೆಂಟೇಷನ್ಸ್‌ಗೆ ತಾವು ಮಾನ್ಯತೆ ಕೊಟ್ಟಿಲ್ಲ. ಈ ಬಗ್ಗೆ ನಾನು ಒಬ್ಬ ಆಫೀಸರನ್ನು ಭೇಟಿಯಾಗಿ ಏನು ಸ್ವಾಮಿ, ನೀವು ಈ ದಳಪತಿಗಳ ವಿಚಾರದಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ ? ನೀವು ಏನು ಕೆಲಸ ಮಾಡುತ್ತಿದ್ದೀರಿ ? ಎಂದು ಕೇಳಿದಾಗ, ಅವರು ವಾಸ್ತವಿಕವಾಗಿ ಏನು ಸತ್ಯಾಂಶ ಇತ್ತೋ ಅದನ್ನು ಹೇಳಿದರು. ಏನೆಂದರೆ, ಸ್ವಾಮಿ, ಇದಕ್ಕಾಗಿ ೧ ಕೋಟಿ ರೂಪಾಯಿ ಖರ್ಚುಮಾಡಿದರೆ ಇದು ಸರಿಹೋಗುತ್ತದೆ ; ಎಂದು ಹೇಳಿದರು. ಕಳೆದ ೪ ವರ್ಷಗಳಿಂದ ಸತತವಾಗಿ ದುಡಿಯುತ್ತಿದ್ದರೂ ಈ ಜನಗಳಿಗೆ ೧ ಕೋಟಿ ರೂ.ಗಳನ್ನು ಖರ್ಚುಮಾಡುವಂತಹ ವಿಚಾರ ಅಷ್ಟು ಸುಲಭವಾಗಿ ಆಗುತ್ತಿಲ್ಲ. ಯಾರೋ ಒಬ್ಬರು ಸ್ಟ್ರೈಕ್ ಮಾಡುತ್ತಾರೆಂದರೆ ಐದು ನಿಮಿಷದಲ್ಲಿ ೧೦ ಕೋಟಿ ರೂಪಾಯಿಗಳನ್ನು ಕೊಡುವಂಥ ತತ್ವವಿದೆ. ಇವತ್ತು ಕಷ್ಟಪಟ್ಟು ದುಡಿಯುವ ಮನುಷ್ಯರಿಗೆ, ಪ್ರಾಮಾಣಿಕವಾಗಿ ದುಡಿಯುವ ಮನುಷ್ಯರಿಗೆ ನಾವು ಏನು ಬೆಲೆ ಕೊಡುತ್ತಿದ್ದೇವೆ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಕ್ಯಾರೆಕ್ಟರ್ ಲೂಸ್ ಈಗಾಗಲೇ ಆಗಿದೆ ಇವತ್ತು ಯಾವ ಪಾರ್ಟಿಯಲ್ಲೇ ಇರಲಿ, ಪ್ರತಿಯೊಬ್ಬರೂ ಏನು ಹೇಳುತ್ತಾರೆ ಅದನ್ನು ಒಪ್ಪಲೇಬೇಕಾಗುತ್ತದೆ. ನ್ಯಾಯವಾಗಿರುವುದನ್ನು ನ್ಯಾಯವೆಂದು ಹೇಳಲೇಬೇಕು. ಅದೇಪ್ರಕಾರ ನಡೆಯಬೇಕೆಂದು ನಾನು ಪ್ರಯತ್ನ ಮಾಡುತ್ತಿದ್ದೇನೆ. ತಪ್ಪನ್ನು ತಪ್ಪು ಎಂದು ಹೇಳುತ್ತೇನೆಯೆ ಹೊರತು ತಪ್ಪನ್ನು ಸರಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಅದೇ ಪ್ರಕಾರ ಇವರಿಗೆ ಸಪೋರ್ಟ್ ಮಾಡುತ್ತಿದ್ದೇನೆ. ಆದರೆ ವಿರೋಧ ಮಾಡುತ್ತೇನೆ ಎನ್ನುವ ಮಾತೇ ಬೇರೆ. ಗೌರ್ನರ್ ಅಡ್ರೆಸ್‌ಗೆ ಹೆಚ್ಚು ಸಪೋರ್ಟ್ ಮಾಡಿ ಒಳ್ಳೆಯದನ್ನು ಒಳ್ಳೆಯದೆಂದು ಹೇಳುತ್ತೇನೆ : ತಪ್ಪು ಇದ್ದರೆ ತಪ್ಪು ಎಂದು ಹೇಳುತ್ತೇನೆ. ಈಗ ಮಾನ್ಯ ಪಟೇಲ್‌ರವರು ತಮ್ಮ ಕೆಲವು ಅಭಿಪ್ರಾಯಗಳನ್ನು ಏನು ಹೇಳಿದ್ದಾರೆ ಅದಕ್ಕೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಖಂಡ್ರೆಯವರು ಮಾನ್ಯ ಸದಸ್ಯರಾದ ಶ್ರೀ ಜೆ.ಹೆಚ್. ಪಟೇಲ್‌ರವರು ಹೇಳಿದ್ದನ್ನು ಸಪೋರ್ಟ್ ಮಾಡುತ್ತಿರುವಂತೆ ಕಾಣುತ್ತಿದೆ.

ಶ್ರೀ ಭೀಮಣ್ಣ ಖಂಡ್ರೆ.—ನೀವು ತಪ್ಪು ತಿಳಿದುಕೊಂಡಿದ್ದೀರೆಂದು ನಾನು ಅಂದುಕೊಂಡಿದ್ದೇನೆ. ಇಲ್ಲಿ ಸತ್ಯವನ್ನು ಹೇಳುವುದಕ್ಕೆ ನಾನು ಬಂದು ನಿಂತಿದ್ದೇನೆ. ನನಗೆ ತಿಳಿದಿರತಕ್ಕದ್ದನ್ನು ಧೈರ್ಯವಾಗಿ ಹೇಳುತ್ತೇನೆ. ಸತ್ಯಂ ವಧಂ, ಸತ್ಯಂ ಚರಂ, ಎನ್ನುವ ರೀತಿಯಲ್ಲಿ ನನ್ನ ಭಾಷಣ ಇದೆ. ಇದನ್ನು ತಮ್ಮ ಮುಂದಿಡುತ್ತೇನೆ. ರೂಲಿಂಗ್ ಪಾರ್ಟಿ ಇದೇ ಎಂದು ತಿಳಿದು ನಾನು ಇದಕ್ಕೆ ಓಟು ಹಾಕುತ್ತೇನೆ. ಪ್ರತಿಯೊಬ್ಬರೂ ನುಡಿದಂತೆ ನಡೆದುಕೊಳ್ಳುವುದನ್ನು ಕಲಿಯಬೇಕು ಸ್ವಾಮಿ, ನನ್ನ ೩೦ ವರ್ಷಗಳ ಅನುಭವದಲ್ಲಿ ಹೇಳುತ್ತಿದ್ದೇನೆ. ನಾನು ಯಾರಿಗೂ ಹೆದರಿ ಕುಳಿತವನಲ್ಲ. ರಾಜ್ಯಪಾಲರ ಭಾಷಣದಲ್ಲಾಗಲಿ, ಅಥವಾ ಜೆ.ಹೆಚ್. ಪಟೇಲ್‌ರ ಭಾಷಣದಲ್ಲಾಗಲಿ ಒಳ್ಳೆಯದಿದ್ದರೆ, ಇದು ಒಳ್ಳೆಯದು ಎಂದು ಹೇಳುತ್ತೇನೆ, ಕೆಟ್ಟದ್ದು ಇದ್ದರೆ ಇದು ಕೆಟ್ಟದ್ದು ಎಂದು ಹೇಳುತ್ತೇನೆ. ಯಾವುದೇ ವಿಚಾರವನ್ನು ತೆಗೆದುಕೊಂಡರೂ ಕೇವಲ ಇದೊಂದೇ ಸರ್ಕಾರವನ್ನು ಹೊಣೆಗಾರರನ್ನಾಗಿ ಮಾಡದೆ ಹಿಂದಿನ ಎಲ್ಲ ಸರ್ಕಾರ

ದವರೂ ಹೊಣೆಗಾರರೆಂದು ಮಾಡಬೇಕು. ಇದರಲ್ಲಿ ನಮ್ಮ ನಿಮ್ಮ ಹೊಣೆಗಾರಿಕೆ ಕೂಡ ಇದೆ. ಇದರ ಬಗ್ಗೆ ತಾವೂ ಕೂಡ ಯೋಚನೆ ಮಾಡಬೇಕು. ೬೦ ಮಂದಿ ಜನತಾ ಪಕ್ಷದ ಜನ ಇದ್ದಾಗ ಇಲ್ಲಿ ಎಂ.ಎಲ್.ಎ. ಮತ್ತು ಎಂ.ಎಲ್.ಸಿ.ಗಳಿಗೆ ಪೆನ್‌ಷನ್ ಕೊಡಬೇಕೆಂದು ಒಂದು ಬಿಲ್ ಬಂತು. ಸ್ವಾಮಿ, ಇವತ್ತು ನಮ್ಮ ಸಮಾಜದಲ್ಲಿ ಒಬ್ಬನಿಗೆ ೨ ರೂಪಾಯಿ, ಇನ್ನೊಬ್ಬನಿಗೆ ೨ ಲಕ್ಷ ರೂ. ಇನ್‌ಕಂ ಇದೆ ಎಂದರೆ ಇದೊಂದು ಸಮಾಜವಾದವೆ? ನಮ್ಮದು ಜಾತ್ಯಾತೀತ ರಾಷ್ಟ್ರವೆಂದು ಹೇಳಿಕೊಂಡು ಜಾತಿಯ ಆಧಾರದ ಮೇಲೆ ರಿಸರ್ವೇಷನ್ ಕೊಡಬೇಕೆಂದು ಮಾಡುತ್ತಿರುವುದು ಏನಾಗಿದೆ ಎಂದರೆ ಜಾತಿ ಬೀಜವನ್ನು ನಾವೇ ಹಾಕಿ ಬೆಳೆಸಿದಂತಾಗುತ್ತಿದೆ. ನಾಳೆ ದಿವಸ ಮುಸಲ್ಮಾನರು ನಮಗೂ ಈ ರಿಸರ್ವೇಷನ್ ಏತಕ್ಕೆ ಕೊಡಬಾರದೆಂದು ಕೇಳುತ್ತಾರೆ. ಏಕೆಂದರೆ ಮಿಲಿಟರಿ ಮತ್ತು ಪೋಲೀಸ್‌ನಲ್ಲಿದೆ, ಅದರ ಪ್ರಕಾರ ಕೊಡಿ ಎಂದು ಕೇಳುತ್ತಾರೆ. ಅಲ್ಲಿ ೨೦ ಪರ್ಸೆಂಟ್ ಇದೆ. ಡೆಲ್ಲಿಯಲ್ಲಿ ಇದ್ದವರೊಬ್ಬರು ಇಲ್ಲಿಗೆ ಬಂದಿದ್ದಾರೆ. ಅವರು ಪಾರ್ಲಿಮೆಂಟ್‌ನಲ್ಲಿ ಇದ್ದವರು ಅವರ ಹೆಸರನ್ನು ನಾನು ಹೇಳುವುದಿಲ್ಲ. ಅವರು ಒಳ್ಳೆಯ ಜವಾಬ್ದಾರಿ ಇರತಕ್ಕ ಜನ. ಜಾತಿ ಆಧಾರದ ಮೇಲೆ ರಿಸರ್ವೇಷನ್ ಕೊಡುತ್ತಿರುವುದು ಒಂದು ರೀತಿಯಲ್ಲಿ ದೇಶದ್ರೋಹ ಎಂದು ಹೇಳುತ್ತಿದ್ದಾರೆ. ಆದರೆ, ಇವತ್ತಿನ ಪರಿಸ್ಥಿತಿಯಲ್ಲಿ ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರು ಯಾರು ? ಇಡೀ ನಮ್ಮ ದೇಶದಲ್ಲಿರತಕ್ಕ ಜನರಿಗೆ ಧೈರ್ಯ ಇಲ್ಲವಾಗಿದೆ. ಈಗ ಸಾಮಾನ್ಯವಾಗಿ ಜನರ ಮನಸ್ಸಿನಲ್ಲಿ ನಾನು ಒಬ್ಬ ಎಂ.ಎಲ್.ಎ. ಆದರೆ ಬದುಕುತ್ತೇನೆ ಇಲ್ಲದಿದ್ದರೆ ಸಾಯುತ್ತೇನೆ ಎನ್ನುವ ಭಾವನೆ ಬಂದಿದೆ.

೪–೩೦ ಪಿ.ಎಂ.

ಶ್ರೀ ಕೆ. ಹೆಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ ಮಾನ್ಯ ಹಾವನೂರ್ ರಿಪೋರ್ಟ್ ರಿಸರ್ವೇಷನ್ ಬಗ್ಗೆ ಮಾನ್ಯ ಸದಸ್ಯರು ಕೆಲವು ಅಭಿಪ್ರಾಯಗಳನ್ನು ಕೊಟ್ಟಿರುವುದು ಪತ್ರಿಕೆಗಳಲ್ಲಿ ಬಂದಿದೆ, ಮಾನ್ಯ ಸದಸ್ಯರು ಹಾವನೂರ್ ಕಮಿಷನ್‌ರವರು ಇಂತಂಥವರಿಗೆ ರಿಸರ್ವೇಷನ್ ಕೊಟ್ಟಿಲ್ಲದೆ ಇರುವುದರಿಂದ ಬಹಳ ಅನ್ಯಾಯವಾಗಿದೆ ಎಂದು ಹೇಳಿಕೆ ಕೊಟ್ಟು ಈಗ ಇಲ್ಲಿ ಈ ರೀತಿ ಹೇಳುತ್ತಿದ್ದಾರೆ. ದಯವಿಟ್ಟು ಅದನ್ನು ಜ್ಞಾಪಕ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಸ್ವಲ್ಪ ತಪ್ಪಿದೆ. ಶ್ರೀಮಾನ್ ಮಲ್ಲಾರಾಧ್ಯರು ಜಾತೀಯ ಆಧಾರದ ಮೇಲೆ ಈ ವರದಿಯನ್ನು ಮಾಡಿದ್ದು ಎಂದು ತಮ್ಮದೇ ಪ್ರಚಾರ ಇದೆ ಎಂದು ಒಂದು ಸಾವಿರ ಸಾರಿ ಹೇಳಿದ್ದಾರೆ. ಹಾವನೂರ್ ರಿಪೋರ್ಟನ್ನು ಈ ಸದನದಲ್ಲಿ ಸುಟ್ಟ ನಂತರ ಪ್ರತಿಯೊಂದು ಹಳ್ಳಿಹಳ್ಳಿಗೂ ಸುತ್ತಿ ಜಾತೀಯತೆಯ ಆಧಾರದ ಮೇಲೆ ರಿಪೋರ್ಟ್ ತಯಾರು ಮಾಡಿದ್ದಾರೆಂದು ಹೇಳಿದ್ದೇನೆಯೇ ಹೊರತು ಲಿಂಗಾಯಿತರಿಗೆ ರಿಸರ್ವೇಷನ್ ಕೊಡಬೇಕು ಎನ್ನುವ ಮಾತನ್ನು ನಾನು ಎಲ್ಲೂ ಹೇಳಲಿಲ್ಲ. ಚಿಕ್ಕಮಗಳೂರು ಚುನಾವಣೆಯ ಸಂದರ್ಭದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಲಿಂಗಾಯಿತರನ್ನು ಹಿಂದುಳಿದ ಜನಾಂಗದ ಲಿಸ್ಟ್‌ನಲ್ಲಿ ಸೇರಿಸಲು ಪ್ರಯತ್ನ ಮಾಡುತ್ತೇನೆಂದು ಹೇಳಿದಾಗ ಆ ರೀತಿ ಮಾಡಿದ್ದೇ ಆದರೆ ದೇಶಕ್ಕೆ ದ್ರೋಹ ಮಾಡಿದಂತಾಗುತ್ತದೆ ಎನ್ನುವ ಮಾತನ್ನು ಹೇಳಿರುತ್ತೇನೆ. ಸ್ಟೇಟ್‌ಮೆಂಟ್ ಇದೆ ಬೇಕಾದರೆ ನೋಡಿ. ಹಾವನೂರ್ ರಿಪೋರ್ಟ್ ಪ್ರಕಾರವೇ ತೆಗೆದುಕೊಂಡರೂ ಎಷ್ಟು ಲಿಂಗಾಯಿತರ ಮೆಟ್ರಿಕ್ಯುಲೇಷನ್ ಇನ್‌ಸ್ಟಿಟ್ಯೂಟ್‌ಗಳಿವೆ. ಎಷ್ಟು ಯೂನಿವರ್ಸಿಟಿಗಳು ಇವೆ. ಈವತ್ತಿನ ದಿವಸ ಪತ್ರಿಕೆಯಲ್ಲಿ ಬಂದಿರುವ ಸುದ್ದಿ ಪ್ರಕಾರ ಶ್ರೀಮಾನ್ ಕೃಷ್ಣಾ ಲೋಕಸಭಾ ಸದಸ್ಯರು ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಜನಾಂಗದವರಿಗೆ ಸರಿಯಾಗಿ ಇನ್ನೂ ಪ್ರಾತಿನಿಧ್ಯ ಸಿಕ್ಕಿಲ್ಲವೆಂದು ಹೇಳುತ್ತಿದ್ದಾರೆ. ಸ್ವಾತಂತ್ರ್ಯ ನಂತರ ಮುಸ್ಲಿಂ ಜನಾಂಗದವರು ಪ್ರತ್ಯೇಕತೆಯನ್ನು ಬಯಸಿ ಪಾಕಿಸ್ಥಾನವನ್ನು ಪಡೆದುಕೊಂಡಂತೆ ಜಾತೀಯತೆಯನ್ನು ಆಧಾರವಾಗಿಟ್ಟುಕೊಂಡರೆ ಒಂದು ಪಾಕಿಸ್ಥಾನವಾಗಿರತಕ್ಕಂಥಾದ್ದು ಸಾವಿರ ಪಾಕಿಸ್ಥಾನ ಮಾಡಬೇಕಾಗುತ್ತದೆ. ಲಿಂಗಾಯಿತರಿಗೆ, ಬ್ರಾಹ್ಮಣರಿಗೆ ಈ ರೀತಿಯಾಗಿ ಎಷ್ಟು ಪಂಗಡಗಳಿವೆ ಅಷ್ಟು ತುಕ್ಕಡಿ ಮಾಡಲು ಸಾಧ್ಯವೇ. ಈ ರೀತಿ ಮಾಡಿದ್ದು ತಪ್ಪು ಇದು ಸರಿಯಲ್ಲವೆಂದು ನಾನು ಹೇಳಿದ್ದೇನೆ.

ಚೇರ್ಮನ್.—ಸುದೈವದಿಂದ ನಮ್ಮ ನಮ್ಮ ಜಾತಿಗೆ ಒಂದೊಂದು ರಾಜ್ಯ ಕೊಡಿ ಎಂದು ಕೇಳುತ್ತಿಲ್ಲವಲ್ಲ ?

ಶ್ರೀ ಭೀಮಣ್ಣ ಖಂಡ್ರೆ.—ನಿಮಗೆ ಗೊತ್ತಿಲ್ಲವೆಂದರೆ ಅದು ನಮ್ಮ ದುರ್ದೈವ. ಎಷ್ಟೋ ಮಂದಿ ಕೇಳಿದ್ದಾರೆ. ಹೈದರಾಬಾದ್ ಬಗ್ಗೆ ಎಷ್ಟೋ ಸಮಿತಿಗಳನ್ನು ಮಾಡಿದ್ದರು ಅದನ್ನು ಬೇಕಾದರೆ ನಿಮ್ಮ ಮುಂದಿಡುತ್ತೇನೆ. ಆವಾಗ ತಮಗೆ ತಿಳಿಯುತ್ತದೆ. ಈ ಪ್ರಕಾರವಾಗಿ ಓಟನ್ನು ತೆಗೆದುಕೊಳ್ಳಲು

ಜಾತಿಯತೆಯನ್ನು ಆಧಾರವಾಗಿಟ್ಟುಕೊಳ್ಳತಕ್ಕಂಥ ಒಂದು ಪೊಲಿಟಿಕಲ್ ಚೇಂಜ್ ಏನು ಇರುತ್ತದೆ ಇದು ತಪ್ಪಬೇಕೆಂದು ಹೇಳುತ್ತೇನೆ. ಈವತ್ತಿನ ದಿವಸ ಜಾತ್ಯತೀತ ರಾಷ್ಟ್ರವನ್ನು ಕಟ್ಟಬೇಕಾದಂಥ ಕಾಲದಲ್ಲಿ ಜಾತೀಯತೆಯ ಹೆಸರಿನಲ್ಲಿ ಡೆಮಾಕ್ರಸಿ ನಡೆಯುತ್ತಿದೆ. ಒಂದು ರೈಲು ಎರಡುನೂರು ಮೈಲಿ ವೇಗದಲ್ಲಿ ಹೋಗುತ್ತಿದ್ದರೆ ಅದು ಎಲ್ಲಿ ಯಾವಾಗ ಬೀಳುತ್ತದೋ ಹೇಳುವುದಕ್ಕೆ ಬರುವುದಿಲ್ಲ. ಮೆಡಿಕಲ್ ಕಾಲೇಜುಗಳಲ್ಲಿ ೯೦ ಪರ್ಸೆಂಟ್ ಮಾರ್ಕ್ಸನ್ನು ತೆಗೆದುಕೊಂಡಿದ್ದರೂ ಸೀಟು ಸಿಗುತ್ತಾ ಇಲ್ಲ. ೯೦ ಪರ್ಸೆಂಟ್ ಮಾರ್ಕ್ಸನ್ನು ತೆಗೆದುಕೊಂಡಿದ್ದರೂ ಸೀಟನ್ನು ಕೇಳಿದರೆ ಯಾವ ಜಾತಿಯಲ್ಲಿ ಹುಟ್ಟಿದ್ದೀರಿ ಎಂದು ಕೇಳುತ್ತಿದ್ದಾರೆ. ಮನುಧರ್ಮ ಶಾಸ್ತ್ರದಲ್ಲಿ ಜಾತಿಭೇದ ಪದ್ಧತಿ ಇರಬಾರದು ಎನ್ನುವ ಮಾತನ್ನು ಹೇಳಿದ್ದಾರೆ. ಎಷ್ಟೋ ಜನ ಮಾನ್ಯ ಮಿತ್ರರೂ ಕೂಡ ಈ ಬಗ್ಗೆ ಹೇಳಿದ್ದಾರೆ. ನಾನೂ ಕೂಡ ಹೇಳು ವುದೇನೆಂದರೆ ಈ ರಾಷ್ಟ್ರ ಉಳಿಯಬೇಕಾದರೆ ಜಾತೀಯತೆ ಪದ್ಧತಿ ಹೋಗಲೇಬೇಕು. ಒಂದು ಕೆಲಸಕ್ಕೆ ಅಪ್ಲಿಕೇಷನ್ ಹಾಕಬೇಕಾದರೂ ಅದರಲ್ಲೂ ಜಾತಿಯನ್ನು ತೋರಿಸಬೇಕು. ಈ ರೀತಿಯಾಗಿ ಈ ದೇಶದಲ್ಲಿ ಇಂಟಗ್ರಿಟಿಯನ್ನು ಬೆಳೆಸುತ್ತಿದ್ದಾರೆ. ಆದ್ದರಿಂದ ಮಾನ್ಯ ಗುಂಡೂರಾವ್ ಇತ್ತಕಡೆ ತಮ್ಮ ಲಕ್ಷವನ್ನು ಹರಿಸಿ ಈ ಜಾತಿಯತೆಯನ್ನು ಹೋಗಲಾಡಿಸಬೇಕೆಂದು ಹೇಳುತ್ತೇನೆ.

ಈವತ್ತಿನ ದಿವಸ ರೈತರ ಬಗ್ಗೆ ಬಹಳಷ್ಟು ಕಳಕಳಿಯನ್ನು ತೋರಿಸುತ್ತಿದ್ದಾರೆ. ಅದರಲ್ಲೂ ಕಾಂಗ್ರೆಸ್ (ಯು) ಅಧ್ಯಕ್ಷರಾದ ಶ್ರೀಮಾನ್ ಅರಸ್‌ರವರಿಗೆ ಬಾರಿ ನೋವುಂಟಾಗಿದೆ. ೮೦ ಪರ್ಸೆಂಟ್ ಜನ ರೈತರೇ ಇರತಕ್ಕಂಥ ಈ ದೇಶದಲ್ಲಿ ಅವರಿಗೆ ಇಲ್ಲಿಯತನಕ ಎಷ್ಟು ಅನ್ಯಾಯವಾಗಿದೆ ಇದನ್ನು ಕೇಳು ವವರೇ ಇರಲಿಲ್ಲ. ಕಣ್ಣೀರು ಬರುತ್ತದೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ೧೯೪೦ನೇ ಇಸವಿಯಿಂದ ಇದಕ್ಕಾಗಿ ಹೋರಾಡಿ ಎಷ್ಟೋ ಜನ ಮಡಿದಿದ್ದಾರೆ.

ಶ್ರೀ ಭೀಮಣ್ಣ ಖಂಡ್ರೆ.—ತಾವು ಕಮ್ಯುನಿಸ್ಟ್ ಪಾರ್ಟಿಯ ಚರಿತ್ರೆಯನ್ನು ಓದಿದ್ದೀರಾ. ೧೯೪೨ರಲ್ಲಿ ಹಿಟ್ಲರ್ ಕಾಲದಲ್ಲಿ ಕಾಂಗ್ರೆಸ್ ಪಕ್ಷ ಎಲ್ಲಿತ್ತು ?

ಶ್ರೀ ಪಂಪಾಪತಿ.—ಕಮ್ಯುನಿಸ್ಟ್ ಪಾರ್ಟಿ ಏನು ಯಾವಾಗ ಎನ್ನುವುದು ನನಗೂ ತಿಳಿದಿರುತ್ತದೆ.

ಶ್ರೀ ಭೀಮಣ್ಣ ಖಂಡ್ರೆ.—ಪ್ರತಿಯೊಂದು ಪಾರ್ಟಿಯು ರೈತರ ಬಗ್ಗೆ ಅನ್ಯಾಯ ಮಾಡಿಕೊಂಡೇ ಬಂದಿರುತ್ತದೆ, ಮಾನ್ಯ ಜೆ. ಎಚ್. ಪಟೇಲರು ಕರ್ನಾಟಕಕ್ಕೆ ಅದ: ಪತನವಾಗುವ ಸ್ಥಿತಿಗೆ ಬಂದಿದೆ ಎಂದರು. ಆ ಕಡೆ ಕುಳಿತಾಗ ಒಂದು ಮಾತು ಈ ಕಡೆ ಕುಳಿತಾಗ ಒಂದು ಮಾತು. ಕರ್ನಾಟಕವೆಂಬ ಹೆಸರನ್ನು ೧೯೬೨ನೇ ಇಸವಿಯಲ್ಲಿಯೇ ಇಡಬೇಕೆಂದು ಹೇಳಿದಾಗ ಕರ್ನಾಟಕದಲ್ಲಿಯೇ ಹಿಂದೂಸ್ಥಾನ ಪಾಕಿಸ್ಥಾನವಾಗಿತ್ತು. ಹಳೇ ಮೈಸೂರು ಹಳೇ ಮೈಸೂರಾಗಿಯೇ ಉಳಿಯಬೇಕೆಂದು ಹೇಳಿ ವಾದಿಸಿ ದವರು ತಮ್ಮ ಕಾಲದಲ್ಲಿ ಕರ್ನಾಟಕವೆಂದು ಹೆಸರನ್ನಿಟ್ಟು ಜಾಹಿರಾತು ಹೊರಡಿಸಿದರು. ತಾನು ಮಾಡಿ ದರೆ ಒಂದು ಮಂತ್ರೊಬ್ಬರು ಮಾಡಿದರೆ ಒಂದು ಈ ರೀತಿಯಾದ ರಾಜಕಾರಣ ಮಾಡಿದರೆ ಅಧಃಪತನ ವಾಗದೆ ಮತ್ತೇನಾಗುತ್ತದೆ ಎಂದು ಹೇಳುತ್ತೇನೆ. ಮೂವತ್ತು ಮೂರು ವರ್ಷದಿಂದಲೂ ಯಾರನ್ನು ವಿಶ್ವಾಸ ಘಾತುಕತನ ಮಾಡಿದರೋ, ಯಾವುದೇ ಜಾತಿ ಇರಲಿ ಪ್ರತಿಯೊಬ್ಬರು ಸರ್ಕಾರಕ್ಕೆ ವಿಶ್ವಾಸ ಘಾತುಕತನವನ್ನೇ ಮಾಡಿಕೊಂಡು ಬಂದಿರುತ್ತಾರೆ. ಒಂದೇ ಸಮಿತಿಯ ಜನ ೮೦ ಪರ್ಸೆಂಟ್ ತಿಂದು ಬಿಟ್ಟಿರುತ್ತಾರೆ. ಬೆಂಗಳೂರು ಅಭಿವೃದ್ಧಿಗಾಗಿ ೧೫೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹಳ್ಳಿಗಳಿಗಾಗಿ ಎಷ್ಟು ಹಣ ಇಟ್ಟಿದ್ದೀರೆಂದು ಕೇಳುತ್ತೇನೆ. ಹಳ್ಳಿಗಳಲ್ಲಿ ಕುಡಿಯುವುದಕ್ಕೆ ಈವತ್ತಿಗೂ ನೀರು ದೊರಕಂತಿಲ್ಲ, ಕುಡಿಯುವ ನೀರಿನ ವ್ಯವಸ್ಥೆ ಮಾಡಿದರೆ ಜನರನ್ನು ಉದ್ಧಾರ ಮಾಡಿದಂತಾಗುತ್ತ ದೆಂದು ನಾನು ಹೇಳುತ್ತೇನೆ. ಈ ಸಂದರ್ಭದಲ್ಲಿ ಒಂದು ಮಾತು ನೆನಪಿಗೆ ಬರುತ್ತದೆ. ಶ್ರೀಮಾನ್ ಬಂಗಾರಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಲಾಯಿತು. ಅವರು ಮಾರ್ಕೆಟ್ ಸೆಸ್ ಕಡಿಮೆ ಮಾಡಬೇಕೆಂದು, ಬೆಟರ್‌ಮೆಂಟ್ ಲೆವಿಯನ್ನು ಕಡಿಮೆ ಮಾಡಬೇಕೆಂದು ಶಿಫಾರಸ್ಸು ಮಾ ಡಿ ದ್ದರು. ಆದರೆ ಸೆಕ್ರೆಟರಿಯವರು ಇದನ್ನೆಲ್ಲ ಮಾಡಿದರೆ ಖಜಾನೆಯೇ ಬರಿದಾಗುತ್ತದೆಂದು ಹೇಳಿದರು. ಇಂಡಸ್ಟ್ರಿಯಲ್ ಕರಪ್ಟ್ ಎಷ್ಟೋ ಜನ ಆಫೀಸರ್‌ಗಳು ತಿಂದುಹಾಕಿರುತ್ತಾರೆ. ರಾಜ್ಯದಲ್ಲಿ ೮೦ ಪರ್ಸೆಂಟ್ ಹಳ್ಳಿಗಳಲ್ಲಿರತಕ್ಕಂಥ ಜನರಿಗೆ ಏನೇನು ಸವಲತ್ತುಗಳನ್ನು ಕೊಟ್ಟಿಲ್ಲ. ಈವತ್ತಿನ ದಿವಸ ಒಬ್ಬ ಸದಸ್ಯರಿಗೆ ಎಷ್ಟು ಹಣ ಖರ್ಚು ಮಾಡುತ್ತಿರುತ್ತೀರಿ, ಇಷ್ಟೆಲ್ಲ ದೃಷ್ಟಿಯಲ್ಲಿದ್ದರೂ ಕೂಡ ಇಂದು ರೈತರನ್ನು ದನಗಳನ್ನು ದೊಡ್ಡಿಗೆ ಹೂಡುವ ರೀತಿಯಲ್ಲಿ ಹೂಡಿದ್ದೀರಿ.

ಆದರೆ ಈ ದಿನ ಏನು ಆಗಿದೆ ಸ್ವಾಮಿ? ಈ ದಿನ ನಗರದಲ್ಲಿ ಕುಳಿತಿರತಕ್ಕಂತಹ ಜನರಿಗೆ, ವಿಧಾನಸೌಧದಲ್ಲಿ ಕುಳಿತಿರತಕ್ಕಂತಹ ಜನರಿಗೆ ಹಳ್ಳಿಯಲ್ಲಿನತಕ್ಕಂತಹ ರೈತರ ಕಷ್ಟ ತಿಳಿದಿಲ್ಲ. ನಗರದಲ್ಲಿರತಕ್ಕಂತಹ ಜನ ತಾವೇ ಮನುಷ್ಯರು ಎಂದು ತಿಳಿದುಕೊಂಡಿದ್ದಾರೆ. ಆದರೆ ಈ ದಿನ ಹಳ್ಳಿಯ ಜನರು ಜಾಗೃತರಾಗಿದ್ದಾರೆ. ಅವರುಗಳು ಬುದ್ಧಿ ಕಲಿಸಬೇಕೆಂದು ಇಂದು ಹೊರಟಿದ್ದಾರೆ. ಈಗ ರೈತರಿಗೆ ದೊಡ್ಡ ಅನ್ಯಾಯವಾಗಿದೆ ಎಂದು ಹೇಳಿಕೊಳ್ಳುವ ಹಿಂದಿನ ಮುಖ್ಯ ಮಂತ್ರಿಗಳು ಅವರ ಕಾಲಾವಧಿಯಲ್ಲಿ ರೈತರಿಗೆ ಮಾಡಿದ ಅನ್ಯಾಯಗಳನ್ನು ತಿಳಿದುಕೊಂಡಿಲ್ಲವೆ? ೧೯೭೨-೭೩ರಲ್ಲಿ ಇಡೀ ಉತ್ತರ ಕರ್ನಾಟಕದ ೮ ಜಿಲ್ಲೆಗಳಲ್ಲಿ ಬರಗಾಲ ಬಂದಿದ್ದಾಗ ಸರ್ಕಾರಕ್ಕೆ ರೈತರಲ್ಲಿದ್ದ ಬೀಜವನ್ನು ಖರೀದಿ ಮಾಡಲು ಪತ್ರವನ್ನು ಬರೆಯಲಾಗಿತ್ತು. ಆದರೆ ಅವರುಗಳು ನಮ್ಮಲ್ಲಿದ್ದಂತಹ ಬೀಜವನ್ನು ಖರೀದಿ ಮಾಡಲಿಲ್ಲ. ಮಹಾರಾಷ್ಟ್ರದವರು, ಆಂಧ್ರಪ್ರದೇಶದವರು ಖರೀದಿ ಮಾಡಿಕೊಂಡು ಹೋದರು. ಬೇಕಾದರೆ ರೆಕಾರ್ಡ್ ತೆಗೆಸಿ ನೋಡಿ. ಎಲ್ಲ ವಿಷಯವೂ ಅದರಲ್ಲಿ ಇದೆ. ೧೬ನೇ ಜೂನ್ ಆದರೂ ಬಿತ್ತನೆಗೆ ಬೀಜ ಇಲ್ಲದೆ ರೈತರು ತಮ್ಮ ಮಂಗಳ ಸೂತ್ರಗಳನ್ನು ಮಾರಿ ಬದುಕುವಂತಹ ಪರಿಸ್ಥಿತಿ ಒದಗಿಬಂದಿತ್ತು. ಅಂತಹ ಪರಿಸ್ಥಿತಿಯಲ್ಲಿ ಬೀಜವನ್ನು ಕೊಡಿ ಎಂದು ಹೇಳಿದಾಗ ಅವರು ಕೊಡಲಿಲ್ಲ. ಆ ನಂತರ ೧೦,೦೦೦ ಜನ ಭಾಲ್ಕಿ ತಾಲ್ಲೂಕಿನಲ್ಲಿ ಮುಖಂಡರು ಕುಳಿತಾಗ ಅವರಿಗೆ ಬೀಜ ಕೊಡುವ ಬದಲು ಲಾಠಿಯಲ್ಲಿ ಹೊಡೆದಿದ್ದಾರೆ. ಅವರುಗಳನ್ನು ಆಸ್ಪತ್ರೆಗೆ ದಾಖಲ್ಮಾಡಲಾಯಿತು. ನಾನು ಅವರುಗಳನ್ನು ಹೋಗಿ ನೋಡಿಕೊಂಡು ಬಂದಿದ್ದೇನೆ. ಜಿಲ್ಲಾ ಜನರೆಲ್ಲಾ ಹೋಗಿ ಮುಖ್ಯ ಮಂತ್ರಿಯವರನ್ನು ಕೇಳಿದಾಗ ಅವರು ಏನನ್ನೂ ಕೇಳಲಿಲ್ಲ. ಆಗ ಸರ್ಕಾರ ಉರುಳುತ್ತದೆ ಎಂದು ತಿಳಿದಾಗ ಮೂರ್ನಾಲ್ಕು ವರ್ಷಕಾಲ ಉಗ್ರಾಣದಲ್ಲಿದ್ದು ಹಾಳಾಗಿದ್ದಂತಹ ಆಹಾರಧಾನ್ಯಗಳನ್ನು ನಮಗೆ ಬೀಜ ಎಂದು ಹೇಳಿ ತಂದು ಕೊಟ್ಟರು. ಅಂದಿನ ಸರ್ಕಾರ ಆ ರೀತಿ ಜನರಿಗೆ ಮೋಸ ಮಾಡಿತು. ಆಗ ಹಾಕಿದ ಬೀಜ ಬೆಳೆಯಲಿಲ್ಲ. ರೈತರಿಗೆ ಬಹಳ ನಷ್ಟವಾಯಿತು. ಅಂದು ಕೊಟ್ಟ ಸಾಲದ ಮೇಲೆ ಚಕ್ರಬಡ್ಡಿ ಹಾಕಿ ಸಾಲವನ್ನು ವಸೂಲು ಮಾಡುತ್ತಿದ್ದಾರೆ ಈ ರೀತಿ ರೈತರನ್ನು ಚೀಟ್ ಮಾಡಿದರು. ಯೂರೋಪಿನಲ್ಲಾಗಿದ್ದರೆ ರೈತರು ನ್ಯಾಯಾಲಯಕ್ಕೆ ಹೋಗಿ ಕಾಂಪನ್‌ಸೇಷನ್ ಪಡೆಯುತ್ತಿದ್ದರು. ಆ ರೀತಿ ಇಲ್ಲಿನ ರೈತರು ಜಾಗೃತರಾಗಿಲ್ಲ. ೮ ವರ್ಷವಾಗಿದ್ದರೂ ರೈತರು ಪೆನಾಲ್ಟಿ ಕೊಟ್ಟು ಕೊಂಡೇ ಬರುತ್ತಿದ್ದಾರೆ. ಚಿಕ್ಕಮಗಳೂರಿನಲ್ಲಿ, ಬಳ್ಳಾರಿಯಲ್ಲಿ ಗಲಾಟೆಯಾಯಿತು. ೧೯೭೮ರಲ್ಲಿ ಐವತ್ತು ಸಾವಿರ ಜನ ಹೋಗಿ ಡೆಪ್ಯೂಟಿ ಕಮೀಷನರ್‌ರವರಿಗೆ ಮನವಿ ಮಾಡಿಕೊಂಡಾಗ ಅವರಿಂದ ಉತ್ತರ ಬರಲಿಲ್ಲ. ಇವತ್ತು ರೈತರು ಜಾತಾ ಹೊರಟು ದೀಪಸ್ಥಂಭವನ್ನು ಎತ್ತಿ ತರುತ್ತಿರುವುದಕ್ಕೆ ಉದ್ಘಾಟನೆ ಮಾಡಲು ಹೋದಂತಹವರು ಆಗ ಮುಖ್ಯ ಮಂತ್ರಿಗಳಾಗಿದ್ದರು. ಆಗ ರೈತರ ಪರವಾಗಿ ನಾವು ಬರೆದ ಪತ್ರಗಳಿಗೆ ಅವರಿಂದ ಉತ್ತರ ಬರುತ್ತಿರಲಿಲ್ಲ. ಅವರ ಸರ್ಕಾರ ಇದ್ದಾಗ ನಾವು ಡೆಪ್ಯೂಟಿ ಕಮಿಷನರ್‌ರವರಿಗೆ ಬರೆದ ಪತ್ರಕ್ಕೆ ಉತ್ತರಬರುತ್ತಿರಲಿಲ್ಲ. ಶ್ರೀಮತಿ ಇಂದಿರಾಗಾಂಧಿಯವರಿಗೆ ಒಬ್ಬ ಚಪ್ರಾಸಿ ಪತ್ರ ಬರೆದಳೆ ಆ ಬಗ್ಗೆ ಅವರಿಂದ ೧೫ ದಿವಸಗಳಲ್ಲಿ ಉತ್ತರ ಆತನಿಗೆ ದೊರಕುತ್ತದೆ. ಶ್ರೀಮಾನ್ ಅರಸ್ ಅವರಿಗೆ ರೈತ ಜನರು ಬರೆದ ಪತ್ರಕ್ಕೆ ಇವರು ದನಗಳೆಂದು ತಿಳಿದುಕೊಂಡು ಪತ್ರಕ್ಕೆ ಉತ್ತರವನ್ನು ಕೊಡುವ ಮನಸ್ಸು ಮಾಡುತ್ತಿರಲಿಲ್ಲ. ಆಗ ಅಲ್ಲಿನ ರೈತರು ನಮ್ಮ ಮೇಲೆ ಅನ್ಯಾಯವಾಗಿದೆ, ಸಾಲ ಅಗಾಧವಾಗಿದೆ ಎಂದು ಅಳುತ್ತಿದ್ದರು, ಸಾಲ ತೀರಿಸುವ ಶಕ್ತಿ ಇಲ್ಲ ಆದರೂ ನಾವು ಅಪ್ರಮಾಣಿಕರಲ್ಲ ಎಂದು ಕಣ್ಣೀರು ಇಡುತ್ತಿದ್ದಾಗ ಅಂದಿನ ಮುಖ್ಯಮಂತ್ರಿಗಳು ಅನುಕಂಪ ತೋರಿಸಲಿಲ್ಲ. ಇದನ್ನು ಸ್ವಲ್ಪ ತಾವು ತಿಳಿದು ಕೊಳ್ಳಬೇಕು. ಅಂದಿನ ಮುಖ್ಯ ಮಂತ್ರಿಗಳು ರೈತರಿಗೆ ಕೊಟ್ಟ ಉಡುಗೊರೆಗಳೇನೆಂಬುದನ್ನು ತಾವು ತಿಳಿದುಕೊಳ್ಳಬೇಕು. ಎಜುಕೇಷನ್ ಸೆಸ್ ೧೨ ಪರ್ಸೆಂಟ್ ಇದ್ದುದನ್ನು ಹಿಂದಿನ ಮುಖ್ಯ ಮಂತ್ರಿಗಳು ೫೦ ಪರ್ಸೆಂಟ್ ಮಾಡಿದರು. ಹೆಲ್ತ್ ಸೆಸ್ ೧೨ ಪರ್ಸೆಂಟ್ ಇದ್ದುದನ್ನು ೫೦ ಪರ್ಸೆಂಟ್ ಮಾಡಿದರು. ಇದೆಲ್ಲವನ್ನೂ ನೋಡಿ ನನ್ನ ರಕ್ತ ಕುದಿಯುತ್ತಿದೆ ಬೆಟರ್‌ಮೆಂಟ್ ಲೆವಿ ಒಂದು ಎಕರೆಗೆ ೫೦೦ ರೂಪಾಯಿ ಇದ್ದುದನ್ನು ಅಂದಿನ ಸಮಾಜಸೇವಕರೆನಿಸಿಕೊಂಡಂತಹ ಮುಖ್ಯ ಮಂತ್ರಿಗಳು ೧೫೦೦ ರೂಪಾಯಿಗೆ ಏರಿಸಿದರು. ವಾಟರ್‌ರೇಟ್ ೮೦ ರೂಪಾಯಿ ಇದ್ದುದನ್ನು ೩೦೦ ರೂಪಾಯಿ ಮಾಡಿದರು. ವಿದ್ಯುತ್‌ಶುಲ್ಕ ಒಂದು ಯೂನಿಟ್‌ಗೆ ೧೧ ಪೈಸೆ ಇದ್ದುದನ್ನು ೨೪-೨೫ ಪೈಸೆಗೆ ಏರಿಸಿದರು. ಆಹಾರ ಧಾನ್ಯಗಳ ಮೇಲೆ ಆಗ ಸೇಲ್ಸ್‌ಟ್ಯಾಕ್ಸ್ ಇರಲಿಲ್ಲ. ಪಕ್ಕದ ರಾಜ್ಯಗಳಾದ ಆಂಧ್ರಪ್ರದೇಶ, ಮಹಾರಾಷ್ಟ್ರಗಳಲ್ಲೂ ಇದು ಇರಲಿಲ್ಲ. ಆದರೆ ನಮ್ಮ ರಾಜ್ಯದಲ್ಲಿ ಅದನ್ನು ೪ ಪರ್ಸೆಂಟ್ ಮಾಡಿದರು. ಮಾರ್ಕೆಟಿಂಗ್ ಸೆಸ್ಸ್ ನೂರು ರೂಪಾಯಿಗೆ ಎಂಟಾಣೆ ಇದ್ದುದನ್ನು ೨ ರೂಪಾಯಿಗಳ ವರೆಗೆ ಏರಿಸಿದರು. ಎಫ್.ಸಿ.ಐ.

ಯವರು ಹೈಬ್ರಿಡ್ ಜೋಳ ಹಾಗೂ ಬಾಜ್ರವನ್ನು ೮೫ ರೂಪಾಯಿಗಳಂತೆ ಕೊಳ್ಳಲು ಹೇಳಿದರೂ ಮಾನ್ಯ ದೇವರಾಜ ಅರಸ್ ಅವರು ಧಾನ್ಯವನ್ನು ಖರೀದಿ ಮಾಡಲಿಲ್ಲ. ಆ ಬಗ್ಗೆ ನಾವು ಅಂದಿನ ಮುಖ್ಯ ಮಂತ್ರಿಗಳಿಗೆ ೨೦ ಟೆಲಿಗ್ರಾಮು ಗಳನ್ನೂ ಸಹಾ ಮಾಡಿದ್ದೇವೆ. ಆದರೂ ಖರೀದಿ ಮಾಡಲಿಲ್ಲ. ಇದನ್ನು ಖರೀದಿ ಮಾಡಿದ್ದರೆ ರೈತರಿಗೆ ಸುಮಾರು ೧೦ ಕೋಟಿ ರೂಪಾಯಿ ಸಿಕ್ಕುತ್ತಿತ್ತು. ಅದನ್ನೂ ಮಾಡಲಿಲ್ಲ. ಶ್ರೀಮಾನ್ ದೇವರಾಜ ಅರಸ್ ಅವರು ರೈತರ ಮೊದಲ ಶತೃ ಎಂದು ನಾನು ಹೇಳುತ್ತೇನೆ. ಆಗ ಉತ್ತರ ಭಾರತದವರು ಆರುನೂರು ಕೋಟಿ ಲಾಭ ಸಂಪಾದನೆ ಮಾಡಿಕೊಂಡರು ಧಾನ್ಯ ಕೊಳ್ಳುವಬಗ್ಗೆ ನಾವು ಆಗ ಕೇಂದ್ರ ಸರ್ಕಾರಕ್ಕೆ ಬರೆದುಕೊಂಡಾಗ ಅವರು ರಾಜ್ಯ ಸರ್ಕಾರದಿಂದ ಪತ್ರ ಬರಲಿ ಖರೀದಿ ಮಾಡುತ್ತೇವೆಂದರು. ಆದರೆ ನಮ್ಮ ರಾಜ್ಯ ಸರ್ಕಾರ ಆಗ ಕಾಗದವನ್ನು ಬರೆಯಲೇ ಇಲ್ಲ. ನಮ್ಮ ಸರ್ಕಾರದವರು ಆಗ ಖರೀದಿ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ಇದರಿಂದ ಸುಮಾರು ೧೦ ಕೋಟಿ ರೂಪಾಯಿ ನಷ್ಟವಾಯಿತು. ಇದಕ್ಕೆ ಯಾರು ಜವಾಬ್ದಾರರು ? ಈಗ ಶ್ರೀಮಾನ್ ಗುಂಡೂರಾವ್ ಅವರ ಸರ್ಕಾರ ಅಧಿಕಾರಕ್ಕೆ ಬಂದಿದೆ. ನಾನು ಯಾರನ್ನೂ ಪೂಜೆ, ಪ್ರಶಂಸೆ ಮಾಡುವುದಕ್ಕೆ ಹೋಗುವುದಿಲ್ಲ, ರೈತರ ನೆರವಿಗೆ ಬಂದಿರುವವರನ್ನು ಪ್ರಶಂಸೆ ಮಾಡುವುದು ಧರ್ಮವೆಂದು ನಾನು ತಿಳಿದುಕೊಂಡಿದ್ದೇನೆ. ರೈತರಿಗೆ ಒಳ್ಳೆಯದನ್ನು ಮಾಡುವವರಿಗೆ ಪ್ರಶಂಸೆ ಮಾಡಿ ಕೆಟ್ಟದ್ದನ್ನು ಮಾಡಿದವರಿಗೆ ಟೀಕೆ ಮಾಡುವುದು ನನ್ನ ಧರ್ಮ ಎಂದು ತಿಳಿದುಕೊಂಡಿದ್ದೇನೆ. ೨೦-೨-೧೯೮೦ರಲ್ಲಿ ಸುಮಾರು ೨ ಲಕ್ಷ ಮಂದಿ ರೈತರು ಕಿಸಾನ್ ರ್‍ಯಾಲಿ ನಡೆಸಿದಾಗ ಮಾನ್ಯ ಗುಂಡೂರಾಯರು ರೈತರ ಕುಂದು ಕೊರತೆ ಬಗ್ಗೆ ಎಕ್ಸ್‌ಪರ್ಟ್ ಕಮಿಟಿ ಮಾಡುತ್ತೇನೆಂದು ಭರವಸೆಯನ್ನು ಇತ್ತರು. ಅದೇ ರೀತಿ ಅವರು ನಡೆದು ವರದಿಯನ್ನೂ ಸಹಾ ತರಿಸಿಕೊಂಡಿದ್ದಾರೆ. ಆ ಪ್ರಕಾರವಾಗಿ ಅವರು ಕೆಲವು ತೆರಿಗೆಗಳನ್ನು ಕಡಿಮೆ ಮಾಡಿದ್ದಾರೆಂದು ಈ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೆಟರ್‌ಮೆಂಟ್ ಲೆವಿಯನ್ನು ಅಬಾಲಿಷ್ ಮಾಡಿದರು. ಶ್ರೀಮಾನ್ ಜೆ. ಎಚ್. ಪಟೇಲರು ಬೆಟರ್‌ಮೆಂಟ್ ಲೆವಿ ರದ್ದು ಮಾಡಿ ವಾಟರ್‌ರೇಟ್ ಜಾಸ್ತಿ ಮಾಡಿದರು ಎಂದು ಹೇಳಿದರು. ಇದು ಸುಳ್ಳು ೧೯೭೨-೭೩ರಲ್ಲಿ ವಾಟರ್ ರೇಟು ಏನಿತ್ತು ಅದನ್ನು ಶ್ರೀಮಾನ್ ದೇವರಾಜ ಅರಸ್ ಅವರು ಮೂರು ಪಟ್ಟು ಜಾಸ್ತಿ ಮಾಡಿದರು ಈಗ ಬೆಟರ್‌ಮೆಂಟ್ ಲೆವಿಯನ್ನು ರದ್ದು ಮಾಡಿದ್ದಾರೆ. ಬೆಟರ್‌ಮೆಂಟ್ ಲೆವಿ ಹೋಗಿದ್ದು ಇದರಿಂದಾಗಿ ವಾಟರ್ ರೇಟು ಕಡಿಮೆಯಾಯಿತು. ಇದನ್ನು ತಾವು ನೋಡಬಹುದು. ರಾಜ್ಯದ ಕಬ್ಬು ಬೆಳೆಗಾರರ ಮೇಲೆ ೪ ಕೋಟಿ ರೂಪಾಯಿಗಳಷ್ಟು ಸೂಟಿ ಬಿಟ್ಟಿದ್ದಾರೆ. ಪಂಪುಸೆಟ್ಟುಗಳ ಮೇಲೆ (೧ ಎಚ್.ಪಿ) ಪರ್ಚೇಸ್ ಟ್ಯಾಕ್ಸನ್ನು ೫೦ ರೂಪಾಯಿಗಳವರೆಗೆ ಕಡಿಮೆ ಮಾಡಿದ್ದಾರೆ. ಇದಕ್ಕಿಂತ ಇನ್ನೇನು ಕಡಿಮೆ ಮಾಡಬೇಕು ? ಈವೊತ್ತು ಪರ್ಚೇಸ್ ಟ್ಯಾಕ್ಸ್ ಆಗಲಿ, ಎಲೆಕ್ಟ್ರಿಕಲ್ ಛಾರ್ಜಸ್ ಆಗಲಿ ನಮ್ಮ ಸರ್ಕಾರದವರು ಏನು ಹಾಕಿದ್ದಾರೆ ಪ್ರತಿಯೊಂದು ಹಾರ್ಸ್ ಪವರ್‌ಗೆ ೫೦ ರೂಪಾಯಿ ಅಂತ ಏನು ಮಾಡಿದ್ದಾರೆ ಇದು ಬೇರೆ ರಾಜ್ಯಕ್ಕೆ ಹೋಲಿಸಿ ನೋಡಿದರೆ ಆದಕ್ಕಿಂತ ಜಾಸ್ತಿಯಾಗಿಲ್ಲ ಕಡಿಮೆ ಇದೆ. ಎಂದು ಹೇಳುತ್ತೇನೆ.

ಇನ್ನು ಅಬಾಲಿಷನ್ ಆಫ್ ಲ್ಯಾಂಡ್ ಟ್ಯಾಕ್ಸ್ ೧೦ ಎಕರೆಯವರೆಗೆ ಏನು ಮಾಡಿದ್ದಾರೆ ಅದನ್ನು ಮೆಚ್ಚತಕ್ಕಂಥಾದ್ದೇ. ಇದರ ಜೊತೆಗೆ ಡ್ರೈ ಲಾಂಡ್ಸ್ ಬಗ್ಗೆಯೂ ವಿಚಾರ ಮಾಡುತ್ತೇವೆಂದು ಹೇಳಿದ್ದಾರೆ. ಇನ್ನು ಸೀಡ್ ಲೋನ್ಸ್ ಮತ್ತು ಜರ್ಮಿನೇಷನ್ ಬಗ್ಗೆ ಹೇಳುವುದಾದರೆ ಸ್ಮಾಲ್ ಫಾರ್ಮರ್ಸ್‌ಗೆ ಮತ್ತು ಮಾರ್ಜಿನಲ್ ಫಾರ್ಮರ್ಸ್‌ಗೆ ಅನೇಕ ಉಪಯುಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂದು ಹೇಳುತ್ತೇನೆ. ಇನ್ನು ಪ್ರೊಕ್ಯೂರ್‌ಮೆಂಟ್ ವಿಚಾರದಲ್ಲಿ ಹೇಳುವುದಾದರೆ ಭತ್ತ ೮೦ ರೂಪಾಯಿ ಇದ್ದದು ೧೦೫ ಮಾಡಿದ್ದಾರೆ, ಇನ್ನೂ ಜಾಸ್ತಿ ಮಾಡಬೇಕು. ಇನ್ನು ನರಗುಂದದ ರೈತರಿಗೆ ಎರಡು ಕೋಟಿ ರೂಪಾಯಿ ಸಾಲವನ್ನು ಒದಗಿಸಿ ಕೊಡುತ್ತೇವೆಂದು ಹೇಳಿದ್ದರು, ಅವರಿಗೆ ಇನ್ನು ಆ ಸಾಲ ಸಿಕ್ಕಿಲ್ಲ, ಇದನ್ನು ಕೊಡಿಸಿಕೊಡಬೇಕು ಎಂದು ಹೇಳುತ್ತೇನೆ. ರೈತರಿಗೆ ಯಾವ ಸಹಾಯ ಸೌಲಭ್ಯವನ್ನು ಒದಗಿಸಿಕೊಟ್ಟರೂ ಕೂಡ ಸಾಲದು. ಅವರ ಪ್ರಾಬ್ಲಮ್ ಸಾಲ್ವ್ ಆಗುವುದಿಲ್ಲ. ಅದಕ್ಕೆ ಏನು ಮಾಡಬೇಕೆಂದರೆ ಅಗ್ರಿಕಲ್‌ಚರಲ್ ಪ್ರೈಸ್ ಕಮೀಷನ್ ಏನು ಇದೆ ಅದರಲ್ಲಿ ೫೦ ಪರ್ಸೆಂಟ್ ಅಷ್ಟು ಜನರನ್ನು ಕಿಸಾನ್ ಜನರನ್ನು ಅಲ್ಲಿಗೆ ಹಾಕಿದರೆ ಈ ಪ್ರಾಬ್ಲಮ್ ಸಾಲ್ವ್ ಆಗಬಹುದು ಅವರಿಗೆ ಏನೇನು ಅನ್ಯಾಯವಾಗುತ್ತಾ ಇದೆ ಅದನ್ನೆಲ್ಲಾ ಹೇಳಬಹುದು. ಅಲ್ಲಿ ಅಗ್ರಿಕಲ್‌ಚರಲ್ ಎಕನಾಮಿಸ್ಟ್ಸ್ ಏನು ಇದ್ದಾರೆ ಅವರಿಂದ ಬಹಳ ಅನ್ಯಾಯವಾಗುತ್ತಾ ಇದೆ, ಆ ಕಮಿಟಿಯಲ್ಲಿ ೫೦ ಪರ್ಸೆಂಟ್ ಅಷ್ಟು ರೈತರಾದಂಥಾ ಜನ ಇರಬೇಕು. ಈ ಬಗ್ಗೆ ನಮ್ಮಲ್ಲಿ ಒಂದು ಕಿಸಾನ್ ಸಮ್ಮೇಳನ

ನಡೆದಾಗ ಒಂದು ರೆಸಲ್ಯೂಷನ್ ಅನ್ನು ಪಾಸ್ ಮಾಡಿ ಕಳುಹಿಸಿಕೊಟ್ಟಿದ್ದೇವೆ. ಅವರಿಂದ ನಮಗೆ ಅನ್ಯಾಯವಾಗುತ್ತಾ ಇದೆ, ಔಟ್‌ಪುಟ್ ಸರಿಯಾಗಿ ಸಿಕ್ಕುತ್ತಾ ಇಲ್ಲ ಲೇಬರ್‌ಗೂ ತೊಂದರೆಯಾಗುತ್ತಾ ಇದೆ. ಈ ಕಾರಣದಿಂದ ಅಗ್ರಿಕಲ್‌ಚರಲ್ ಪ್ರೈಸ್ ಕಮಿಷನ್ ೫೦ ಭಾಗ ಜನ ರೈತರಾದಂಥಾವರನ್ನು ನೇಮಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ರೈತರ ಚಳುವಳಿ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ರೈತರ ಬಗ್ಗೆ ಏನು ಈವೊತ್ತು ಚಳುವಳಿ ನಡೆಯುತ್ತಾ ಇದೆ ನ್ಯಾಯವಾದ ರೈತರಾಗಿರುವವರು ಮಾಡುತ್ತಾ ಇಲ್ಲ, ರೈತರ ಪಾರ್ಟಿ ಏನು ಇದ್ದಾರೆ ಬೇರೆಯವರು ಈ ಚಳುವಳಿ ಮಾಡುತ್ತಾ ಇದ್ದರೆ, ನಿಜವಾದ ರೈತರ ಜಾಥಾ ಬರುತ್ತಾ ಇಲ್ಲ.

ಶ್ರೀ ಪಂಪಾಪತಿ.—ಸ್ವಾಮಿ, ನಿಜವಾದ ರೈತರೂ ಜಾಥಾ ಬರುತ್ತಾ ಇಲ್ಲ ಎಂದು ತಿಳಿಯಬೇಡಿ, ಈ ರೀತಿ ಹೇಳಿ ರೈತರನ್ನು ಅವಮಾನ ಮಾಡುವುದು ಸರಿಯಲ್ಲ. ಅದಕ್ಕೆ ನಾವು ಒಪ್ಪಿಗೆ ಕೊಟ್ಟಿಲ್ಲಾ. ರಾಜ್ಯದ ಎಲ್ಲಾ ಭಾಗದ ರೈತರೂ ಕೂಡ ಈ ಜಾಥಾದಲ್ಲಿ ಬರುತ್ತಿದ್ದಾರೆ ಅವರು ರೈತರಲ್ಲ ಎಂದು ಹೇಳುವುದು ಸರಿಯಲ್ಲ.

ಶ್ರೀ ಭೀಮಣ್ಣ ಖಂಡ್ರೆ.—ಈವೊತ್ತು ಸರ್ಕಾರ ಏನು ನಡೆಸುತ್ತಾ ಇದೆ, ಅದರಲ್ಲಿ ರಕ್ಷಕರೂ ಇದ್ದಾರೆ, ಭಕ್ಷಕರೂ ಇದ್ದಾರೆ, ಬೇಕಾದರೆ ಅಂಕಿಅಂಶ ಕೊಟ್ಟು ಹೇಳುತ್ತೇನೆ. ನಿಜವಾದಂಥ ರೈತರು ಜಾಥಾದಲ್ಲಿ ಬರುತ್ತಾ ಇಲ್ಲ ಎಂದು ಹೇಳುತ್ತೇನೆ.

ಶ್ರೀ ಪಂಪಾಪತಿ.—ನಿಜವಾದ ರೈತರು ಆ ಜಾಥಾದಲ್ಲಿ ಬರುತ್ತಾ ಇಲ್ಲ ಎಂದು ಹೇಳಬೇಡಿ, ಅದು ಬಂದಮೇಲೆ ನೋಡಿ ಹೇಳಿ, ಸುಮ್ಮನೆ ಹೇಳುವುದಕ್ಕೆ ಹೋಗಬೇಡಿ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಅದರಲ್ಲಿ ಫ್ಯಾಕ್ಟರಿ ರೈತರು ಎಷ್ಟು ಜನ ಬರುತ್ತಾ ಇದ್ದಾರೆ?

ಶ್ರೀ ಪಂಪಾಪತಿ.—ನಿಮ್ಮ ಮನೆಯ ಹಿಂದುಗಡೆ ಇರತಕ್ಕಂಥಾ ರೈತರು ಅದರಲ್ಲಿ ಬರುತ್ತಾ ಇಲ್ಲ, ಅಲ್ಲಿ ನಿಮಗೆ ಬೇಕಾದ ರೈತರು ಬರುತ್ತಾ ಇಲ್ಲ, ತಾವು ಹೋಗಿನೋಡಿದರೆ ಗೊತ್ತಾಗುತ್ತದೆ, ತಾವು ರೈತರ ಬಗ್ಗೆ ಹೀಗೆ ಹೇಳಿದರೆ ನಾನು ಸುಮ್ಮನೆ ಇರುವುದಿಲ್ಲ.

ಛೇರ್ಮನ್.—ಮಾನ್ಯ ಸದಸ್ಯರು ಯೀಲ್ಡ್ ಆದರೆ ತಾವು ಮಾತನಾಡಬೇಕು, ಯೀಲ್ಡ್ ಆಗದೇ ಇದ್ದರೂ ಕೂಡ ಹೀಗೆ ಮಾತನಾಡುತ್ತಾ ಹೋದರೆ ಅದು ಶಿಸ್ತಿನ ಉಲ್ಲಂಘನೆಯಾಗುತ್ತದೆ, ಅಲ್ಲದೆ ಮಧ್ಯೆ ಮಧ್ಯೆ ತಾವು ಈ ರೀತಿ ಎದ್ದು ನಿಂತುಕೊಂಡು ಮಾತನಾಡುವುದು ಕ್ರಮಬದ್ಧವಾಗಿರುವುದಿಲ್ಲ.

ಶ್ರೀ ಭೀಮಣ್ಣ ಖಂಡ್ರೆ.—ನರಗುಂದದಿಂದ ಜ್ಯೋತಿಯನ್ನು ಹಿಡಿದುಕೊಂಡು ಬರತಕ್ಕಂಥಾ ರೈತರು ನಿಜವಾದ ರೈತರಾದರೆ, ನಿಜವಾಗಿ ಯಾವ ರೈತ ಸತ್ತಿದ್ದಾರೆ ಅವರ ಜೋತಿಯನ್ನು ಹಿಡಿದು ಕೊಂಡು ಬರುತ್ತಾ ಇದ್ದರೆ, ನಾನು ಅದಕ್ಕೆ ಸಂಪೂರ್ಣವಾಗಿ ನಮಸ್ಕಾರ ಮಾಡುತ್ತೇನೆ ಹಾಗೂ ಅವರನ್ನು ಅಭಿನಂದಿಸುತ್ತೇನೆ. ಆದರೆ ಅದನ್ನು ದುರುಪಯೋಗ ಮಾಡಿಕೊಂಡು ಯಾವ ಜನ ರೈತರು ಅಂದುಕೊಂಡು ಬರುತ್ತಾರೋ ಅವರಿಗೆ ಕರುಣೆ ಏತಕ್ಕೆ ತೋರಿಸಬೇಕು? ಆ ರೀತಿ ಮಾಡಿದರೆ ಗುಂಡೂರಾಯರ ಸರ್ಕಾರ ಮಣಿಯುವುದಿಲ್ಲ. ಹಿಂದೆ ದೇವರಾಜ ಅರಸ್ ಸರ್ಕಾರ ಇದ್ದಾಗ ಆ ರೈತರಿಗೆ ಬಹಳ ಅನ್ಯಾಯ ಮಾಡಿದ್ದಾರೆ, ಅವರಿಗೆ ತೆರಿಗೆ ಹೆಚ್ಚಿಗೆ ಹಾಕಿದ್ದಾರೆ ನಮ್ಮ ಈ ಸರ್ಕಾರ ಬಂದಮೇಲೆ ರೈತರಿಗೆ ಎಷ್ಟೋ ಕನ್‌ಸೆಷನ್ ಕೊಟ್ಟಿದೆ ಅದಕ್ಕಾಗಿ ನಾವು ಅಭಿನಂದನೆಯನ್ನು ಸಲ್ಲಿಸಬೇಕು. ವಾಸ್ತವಿಕ ವಾದ ವಿಚಾರ ಹೇಳಬೇಕಾದರೆ ಇಡೀ ದೇಶದಲ್ಲಿ ೧೦೦ಕ್ಕೆ ೮೦ ರಷ್ಟು ಜನರುರೈತರು ಇದ್ದಾರೆ. ನಮ್ಮ ದೇಶದಲ್ಲಿ ಸ್ಮಾಲ್ ಫಾರ್ಮರ್ಸ್, ಮಾರ್ಜಿನಲ್ ಫಾರ್ಮರ್ಸ್ ಮತ್ತು ದೊಡ್ಡ ದೊಡ್ಡ ರೈತರು ಏನು ಇದ್ದಾರೆ ಅವರೆಲ್ಲಾ ಸೇರಿ ಒಂದು ಗೂಡಿಸಂಘಟನೆ ಆಗಬೇಕು. ನಮ್ಮ ದೇಶ ನೈತಿಕ ರಾಜ್ಯವಾಗಬೇಕಾದರೆ ಕಿಸಾನ್ ರಾಜ್ಯ ಆಗಬೇಕು, ಅದು ಆಗಬೇಕಾದರೆ ಆ ಪಾರ್ಟಿ ಈ ಪಾರ್ಟಿ ಅನ್ನದೆ ಎಲ್ಲರೂ ಒಂದುಗೂಡ ಬೇಕು, ಹಾಗೆ ಮೊದಲು ಸಂಘಟನೆ ಮಾಡಿಕೊಂಡು ಬರಲಿ ನಂತರ ಅವರ ಡಿಮ್ಯಾಂಡ್ ಏನು ಇದೆ ಅದನ್ನು ಇಡಲಿ ಒಪ್ಪಿಕೊಳ್ಳುತ್ತೇನೆ. ಜೆ. ಹೆಚ್. ಪಟೇಲರು ಆ ಪಾರ್ಟಿಯಲ್ಲಿ ಕುಳಿತಿದ್ದಾರೆ, ಬಂಗಾರಪ್ಪನವರು ನಮ್ಮ ಪಾರ್ಟಿಗೆ ಬಂದಿದ್ದಾರೆ ಎಂದು ತಾವೇ ಒಂದು ಜಡ್ಜ್ ಮಾಡಿಕೊಂಡು ಏನೋ ಹೇಳುತ್ತಾ ಇರುವುದು ಸರಿಯಲ್ಲ. ಕಾಂಗ್ರೆಸ್ ಅಧ್ಯಕ್ಷರೇ ಆಗಲಿ ಯಾರೇ ಆಗಲಿ ಅವರು ಕಾಂಗ್ರೆಸ್ ಅನ್ನುವ ಭಾವನೆ ಯಾರ ಹತ್ತಿರ ಇದೆಯೋ ಅಂಥಾವರ ವಿಚಾರದಲ್ಲಿ ನಾನು ಹೇಳುತ್ತೇನೆ. ಈವೊತ್ತಿನ

ದಿವಸ ರೈತರ ಒಂದು ಚಳುವಳಿ ಏನು ನಡೆಯುತ್ತಾ ಇದೆ ಅದು ಸರಿಯಾದ ಕ್ರಮವಲ್ಲ ಅನ್ಯಾಯ ನಡೆಯುತ್ತಾ ಇದೆ, ವಾಸ್ತವಿಕವಾದ ರೈತರಾದವರು ಈ ಚಳುವಳಿ ಮಾಡುತ್ತಾ ಇಲ್ಲ, ಅದಕ್ಕೆ ವಿರುದ್ಧ ವಾಗಿರುವವರು ಮಾಡುತ್ತಾ ಇದ್ದಾರೆ, ಅದನ್ನು ದುರುಪಯೋಗ ಮಾಡಿಕೊಂಡು ಅವರ ವಿರುದ್ಧವಾಗಿ ಯಾರು ಹೋರಾಟ ಮಾಡುತ್ತಾರೋ ಅದು ಕಿಸಾನ್‌ಗೆ ದ್ರೋಹವಾದಂತಾಗುತ್ತದೆ ಎಂದು ಹೇಳುತ್ತೇನೆ. ಆದುದರಿಂದ ನಾನು ಈಪ್ರೊತ್ತು ಹೇಳುತ್ತೇನೆ ನಮ್ಮ ದೇಶದಲ್ಲಿ ರಾಷ್ಟ್ರೀಯ ಭಾವೈಕ್ಯತೆ ಬರಬೇಕಾದರೆ ಒಳ್ಳೆಯ ಜನರನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು ಇಲ್ಲದೇಹೋದರೆ ಕಷ್ಟವಾಗುತ್ತದೆ ಎಂದು ಹೇಳುತ್ತೇನೆ.

ಎರಡನೆಯದಾಗಿ ಈ ಪಂಚಾಯಿತಿ ಆಕ್ಟ್‌ನಲ್ಲಿ ಕೆಲವು ಲೋಪದೋಷಗಳು ಇವೆ ಅದನ್ನು ಸರಿಪಡಿಸಬೇಕು. ಪಂಚಾಯಿತಿ ರಾಜ್ಯಕ್ಕೆ ಒಂದು ಹೆಚ್ಚಿನ ಅಧಿಕಾರ ಕೊಡಬೇಕು. ಡೀಸೆಂಟ್ರಲೈಸೇಷನ್ ಪವರ್ ಇರಬೇಕು. ಮಹಾರಾಷ್ಟ್ರದಲ್ಲಿ ಜಿಲ್ಲಾ ಪರಿಷತ್ತುಗಳಿಗೆ ಒಂದು ಹೆಚ್ಚಿನ ಅಧಿಕಾರ ಕೊಟ್ಟಿದ್ದಾರೆ. ಅದೇರೀತಿ ನಮ್ಮ ಇಲ್ಲಿ ಪಂಚಾಯಿತಿಗೆ ಮತ್ತು ತಾಲ್ಲೂಕುಬೋರ್ಡ್‌ಗೆ ಹೆಚ್ಚಿನ ಅಧಿಕಾರ ಕೊಡಬೇಕು. ಮಹಾರಾಷ್ಟ್ರದಲ್ಲಿ ಜಿಲ್ಲಾ ಪರಿಷತ್ತುಗಳಿಗೆ ಅಧಿಕಾರ ಕೊಟ್ಟಿರುವುದರಿಂದ ಆ ಅಧ್ಯಕ್ಷರಿಗೆ ಡೆಪ್ಯೂಟಿ ಕಮೀಷನರ್ ಆಗಲಿ ಡಿವಿಷನಲ್ ಕಮೀಷನರ್ ಆಗಲಿ ಒಂದು ಗೌರವ ಕೊಡುತ್ತಾರೆ, ಆದರೆ ನಮ್ಮ ರಾಜ್ಯದಲ್ಲಿರುವ ಪಂಚಾಯಿತಿಗೆ ಮತ್ತು ತಾಲ್ಲೂಕುಬೋರ್ಡ್‌ಗೆ ಆ ಅಧಿಕಾರ ಇಲ್ಲದೇ ಇರುವುದರಿಂದ ಒಬ್ಬ ಎಂ.ಎಲ್.ಎ. ಏನಾದರೂ ಅಲ್ಲಿ ಕೆಲಸಕ್ಕೆ ಹೋದರೆ ಅಲ್ಲಿರುವ ಅಧಿಕಾರಿಯನ್ನು ಬೆಗ್ ಮಾಡ ಬೇಕಾಗುತ್ತದೆ. ಈ ಕಾರಣದಿಂದ ನಾನು ಹೇಳುವುದೇನೆಂದರೆ ಅವರಿಗೆ ಕೊಟ್ಟಿರುವ ಅಧಿಕಾರವನ್ನು ಸ್ವಲ್ಪ ಡಿಸ್ಟ್ರಿಬ್ಯೂಟ್ ಮಾಡಬೇಕು ಎಂದು ಹೇಳುತ್ತೇನೆ. ಪಂಚಾಯಿತಿಗೆ ಮತ್ತು ತಾಲ್ಲೂಕ್‌ಬೋರ್ಡ್‌ಗೆ ಡೀಸೆಂಟ್ರಲೈಸೇಷನ್ ಆಫ್ ಪವರ್ಸ್ ಇರಬೇಕು ಎಂದು ಮತ್ತೊಮ್ಮೆ ಹೇಳುತ್ತೇನೆ. ಮತ್ತು ಮಹಾರಾಷ್ಟ್ರದಲ್ಲಿ ಜಿಲ್ಲಾ ಪರಿಷತ್ತು ಇರುವ ಹಾಗೆ ಇಲ್ಲೂ ಕೂಡ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ನಮ್ಮ ಭಾಗದಲ್ಲಿ ಕಾರಂಜಿ ಪ್ರಾಜೆಕ್ಟ್ ಇದೆ. ಈ ಮಾತನ್ನು ಹೇಳಿದರೆ ಮಾನ್ಯ ಅರ್ಥ ಮಂತ್ರಿಗಳು ತಪ್ಪು ತಿಳಿದುಕೊಳ್ಳಬಾರದು. ಈಗ ೮ ತಿಂಗಳು ಹಿಂದೆ ಈ ಪ್ರಾಜೆಕ್ಟ್‌ಗೆ ೨ ಕೋಟಿ ರೂಪಾಯಿ ಏನು ಕೊಟ್ಟರಿ ಅದನ್ನು ಇನ್ನೂ ಖರ್ಚು ಮಾಡಿಲ್ಲಾ. ಈಪ್ರೊತ್ತು ನಮ್ಮ ಭಾಗದಲ್ಲಿ ಡ್ರಾಟ್ ಕಂಡೀಷನ್ಸ್ ಇದೆ. ಈ ಬಗ್ಗೆ ಏನಾದರೂ ಒಂದು ಆಕ್ಷನ್ ತೆಗೆದುಕೊಳ್ಳಬೇಕಾದರೆ. ಅಲ್ಲಿಂದ ಒಂದು ಲೆಟರ್ ಬರೆದರೆ ಅದು ಮೊದಲು ಡೆಪ್ಯೂಟಿ ಕಮೀಷನರಿಗೆ ಬರಬೇಕು, ನಂತರ ಡಿವಿಷನಲ್ ಕಮೀಷನರಿಗೆ ಬರಬೇಕು. ನಂತರ ವಿಧಾನಸೌಧದಲ್ಲಿರುವ ಸೆಕ್ರೆಟರಿಗೆ ಬರಬೇಕು ನಂತರ ಕ್ಯಾಬಿನೆಟ್‌ಗೆ ಹೋಗಿ ಮಂಜೂರಾತಿ ಆಗಬೇಕು. ತದನಂತರ ಅದು ಹಂತ ಹಂತವಾಗಿ ಪುನಃ ಪ್ರದಕ್ಷಿಣೆ ಹಾಕಿಕೊಂಡು ಬರುವವರೆಗೆ ಇನ್ನು ಎಷ್ಟು ದಿನಗಳು ಹಿಡಿಯುತ್ತದೋ. ಅಲ್ಲಿಯವರೆಗೂ ಆ ಕೆಲಸ ಹಾಗೆಯೇ ಇರಬೇಕು. ಅದ ಕ್ಕೋಸ್ಕರವಾಗಿ ನಾನು ಹೇಳುವುದೇನೆಂದರೆ ಮಹಾರಾಷ್ಟ್ರದಲಿರುವ ಜಿಲ್ಲಾ ಪರಿಷತ್ತುಗಳ ಹಾಗೆ ಇಲ್ಲೂ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳಿಗೆ ಅಧಿಕಾರ ಇದ್ದರೆ ಆ ಕೆಲಸಗಳು ಬೇಗ ಆಗುತ್ತದೆ. ಬಡ್ಜೆಟ್ಟಿನಲ್ಲಿ ಹಣ ಮಂಜೂರಾದ ತಕ್ಷಣ, ಯಾವ ಯಾವ ಯೋಜನೆಗೆ ಎಷ್ಟೆಷ್ಟು ಹಣ ಇಟ್ಟಿದ್ದಾರೆ ಅದರಂತೆ ಕೆಲಸಕಾರ್ಯಗಳನ್ನು ಮಾಡಿಸುವುದಕ್ಕೆ ಅನುಕೂಲವಾಗುತ್ತದೆ. ಈವಾಗ ನಮ್ಮ ಯೋಜನೆ ಯಾವ ರೀತಿ ಆಗುತ್ತದೆ ಎಂದರೆ ಯಾವುದಾದರೂ ಒಂದು ಪ್ರಾಜೆಕ್ಟ್‌ಗೆ ೧೦ ಕೋಟಿ ಖರ್ಚು ಮಾಡ ಬೇಕಾದರೆ ಡೆಲ್ಲಿಯಲ್ಲಿ ಕೂತುಕೊಂಡು ಪ್ಲಾನ್ ಮಾಡುವುದು ನಂತರ ಬೆಂಗಳೂರಿನಲ್ಲಿ ಅದರ ಬಗ್ಗೆ ಒಂದು ಸಭೆ ನಡೆಸುವುದು ಆ ರೀತಿ ಆಗುತ್ತಾ ಇದೆ. ಇದರಿಂದ ಯಾವ ಕೆಲಸಕಾರ್ಯಗಳು ಸರಿಯಾಗಿ ಆಗುತ್ತಾ ಇಲ್ಲ. ಆದುದರಿಂದ ಈ ವಿಲೇಜ್ ಪಂಚಾಯಿತಿಗಳಿಗೆ ಹೆಚ್ಚು ಅಧಿಕಾರವನ್ನು ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಕೋಆಪರೇಟೀವ್ ಇನ್ಸ್ಟಿಟ್ಯೂಷನ್ಸ್ ಬಗ್ಗೆ ಹೇಳಬೇಕಾದರೆ ಹಿಂದೆ ದೇವರಾಜ ಅರಸರ ಕಾಲದಲ್ಲಿ ಇದು ಬಹಳ ಹದಗೆಟ್ಟು ಹೋಗಿತ್ತು. ನಮ್ಮ ಗುಂಡೂರಾಯರ ಸರ್ಕಾರ ಬಂದಮೇಲೆ ಇದರ ಬಗ್ಗೆ ಅನೇಕ ಸಾಧನೆಗಳನ್ನು ಮಾಡಿದ್ದಾರೆ. ಈಗ ಕೋಆಪರೇಟೀವ್ ಮೂವ್‌ಮೆಂಟಿನಲ್ಲಿ ಇರತಕ್ಕಂಥಾ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಒಂದು ಕಮಿಟಿ ಮಾಡಿದ್ದಾರೆ. ಈ ಕೋಆಪರೇಟೀವ್ ಆಕ್ಟ್‌ನಲ್ಲಿ ಕೆಲವು ಲೋಪದೋಷಗಳು ಇವೆ. ಅದಕ್ಕೆ ನಾನು ತಮಗೆ ಒಂದು ಸಲಹೆ ಮಾಡುತ್ತೇನೆ. ಅದೇ ನೆಂದರೆ ಈ ಆಕ್ಟ್‌ನಲ್ಲಿರುವ ೧೪ ಎ, ೨೯ ಎ ಮತ್ತು ೧೨೯ ಎ ಮತ್ತು ಕೆಲವು ಸೆಕ್ಷನ್‌ಗಳಲ್ಲಿ ಇನ್ನೂ

ಲೋಪದೋಷಗಳು ಇವೆ, ಅದನ್ನು ಸರಿಪಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ,

೫-೦೦ ಪಿ.ಎಂ.

ಕೋಆಪರೇಟೀವ್ ಮೂವ್‌ಮೆಂಟನ್ನು ಜೀವಂತವಾಗಿ ಮಾಡಬೇಕು. ನಿರುದ್ಯೋಗಿಗಳಾಗಿರುವವರಿಗೆ ಕೆಲಸ ಸಿಕ್ಕುವಂಥಾ ವ್ಯವಸ್ಥೆ ಮಾಡಬೇಕು.

ಇನ್ನು ನಮ್ಮ ರಾಜ್ಯದಲ್ಲಿ ಭಿಕ್ಷುಕರೇನಿದ್ದಾರೆ, ಅವರು ಭಿಕ್ಷೆಯನ್ನು ಮಾಡಬಾರದೆಂದು ಕೇಂದ್ರ ಸರ್ಕಾರದವರು ಹೇಳುತ್ತಿದ್ದಾರೆ. ಅವರಿಗೆ ಕೆಲಸ ಕೊಡುವುದಾದರೆ, ಅವರೇಕೆ ಭಿಕ್ಷೆ ಬೇಡುವುದಕ್ಕೆ ಹೋಗುತ್ತಾರೆ ? ಆದ್ದರಿಂದ ಭಿಕ್ಷುಕರಿಗೆ ಯಾವುದಾದರೂ ಕೆಲಸವನ್ನು ಒದಗಿಸಿ ಅವರು ಜೀವನ ಮಾಡುವಂಥಾ ಒಂದು ವ್ಯವಸ್ಥೆಯನ್ನು ಮಾಡಬೇಕು.

ಮತ್ತೊಂದು ವಿಷಯವೇನೆಂದರೆ ಈಗ ನಮ್ಮ ರಾಜ್ಯದಲ್ಲಿ ಮಧ್ಯಪಾನ ಮಾಡತಕ್ಕಂತಹ ಪದ್ಧತಿ ಏನಿದೆ ಅದನ್ನು ಅವಶ್ಯವಾಗಿ ದೂರಮಾಡಬೇಕು, ಮಧ್ಯಪಾನ ಮಾಡುವುದನ್ನು ಬಂದ್ ಮಾಡದಿದ್ದರೆ ದೇಶ ಉಳಿಯುವುದಿಲ್ಲ. ನಮ್ಮ ದೇಶದಲ್ಲಿ ಕ್ರಿಮಿನಲ್ ಪ್ರೊಸೀಜರ್ ಕೋಡ್ ಇವೆ, ಇಂಡಿಯನ್ ಪೀನಲ್ ಕೋಡ್ ಇದೆ. ಆದರೂ ಸಹ ಜನಗಳು ತಪ್ಪುಗಳನ್ನು ಮಾಡುತ್ತಿದ್ದಾರೆ. ಹೊಡೆದಾಟ ಬಡಿದಾಟ ನಡೆಯುತ್ತಿದೆ. ಮರ್ಡರ್ ಕೇಸುಗಳು ನಡೆಯುತ್ತಿವೆ ಆ ರೀತಿಯಾಗಬಾರದು. ಯಾವುದೇ ಒಂದು ಕಾನೂನನ್ನು ಸರ್ಕಾರ ಮಾಡಿದರೂ ಕೂಡ ಅದನ್ನು ಅಮಲಿನಲ್ಲಿ ಜಾರಿಗೆ ತರಬೇಕು.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಯಾವುದೇ ಒಂದು ಕಾನೂನನ್ನು ಸರ್ಕಾರ ಮಾಡಿದರೂ ಕೂಡ, ಸಿಬ್ಬಂಧಿ ವರ್ಗದವರು ಅದನ್ನು ಜಾರಿಗೆ ಕೊಡದೆ ಲಂಚಕೋರರಾಗುತ್ತಿದ್ದಾರೆ. ಆದ್ದರಿಂದ ಮೊದಲು ಲಂಚಗುಳಿತನವನ್ನು ನಿರ್ಮೂಲನ ಮಾಡಬೇಕು. ನಮ್ಮ ರಾಜ್ಯದಲ್ಲಿ ಜನಗಳ ನೈತಿಕ ಮಟ್ಟ ಸಂಧಾರಣೆಯಾಗತಕ್ಕಂತಹ ಶಿಕ್ಷಣವನ್ನು ಕೊಡಬೇಕು. ಈಗ ೩೦ ವರ್ಷಗಳಿಂದಲೂ ಕೂಡ ಅಂತಹ ಒಂದು ನೈತಿಕ ಶಿಕ್ಷಣವನ್ನು ಜನಗಳಿಗೆ ಕೊಡತಕ್ಕಂತಹ ಪ್ರಯತ್ನವನ್ನು ನಮ್ಮ ಸರ್ಕಾರ ಮಾಡಿಲ್ಲ. ಆದ್ದರಿಂದ ಪ್ರತಿಯೊಂದು ಶಾಲೆಯಲ್ಲಿಯೂ ಕೂಡ ನೈತಿಕ ಶಿಕ್ಷಣವನ್ನು ಕೊಡುವುದಕ್ಕೆ ಒಂದು ವೇಳೆಯನ್ನು ಗೊತ್ತುಮಾಡಬೇಕು. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಸುಬ್ಬಯ್ಯ ಶೆಟ್ಟಿ (ಸೂರತ್‌ಕಲ್).—ಮಾನ್ಯ ಸಭಾಧ್ಯಕ್ಷರೇ, ನಮ್ಮಲ್ಲಿ ಮೊದಲಿನಿಂದಲೂ ಸಹ ದೇವರ ಸಹಸ್ರನಾಮಾವಳಿ ಪೂಜೆಯನ್ನು ಮಾಡತಕ್ಕಂತಹ ಒಂದು ಪದ್ಧತಿಯಿದೆ. ಅದರಲ್ಲಿ ವಿಷ್ಣು ಸಹಸ್ರ ನಾಮಾವಳಿ, ಗಣೇಶ ಸಹಸ್ರನಾಮಾವಳಿಯೆಂದು ಇರುವುದನ್ನು ನಾನು ಕೇಳಿದ್ದೇನೆ. ಅದರೆ, ಈಗ ಒಂದು ನವೀನ ಸಹಸ್ರ ನಾಮಾವಳಿ ಬಂದಿರುವುದನ್ನು ನಾನು ಕೇಳಿದ್ದೇನೆ. ಇವತ್ತು ಈ ಸಭೆಯಲ್ಲಿ ಮೂರು ಜನ ಆಡಳಿತ ಪಕ್ಷದ ಸದಸ್ಯರು ಮಾತನಾಡಿದ್ದಾರೆ. ರಾಜ್ಯಪಾಲರ ಭಾಷಣವನ್ನು ಕೂಡ ನಾನು ಓದಿದ್ದೇನೆ. ಮಾನ್ಯ ಸದಸ್ಯರು ಮಾಡಿದ ಭಾಷಣ ಮತ್ತು ರಾಜ್ಯಪಾಲರ ಭಾಷಣ ಎರಡರಲ್ಲೂ ಕೂಡ ನನಗೆ ಸಹಸ್ರ ನಾಮಾವಳಿ ಇರುವುದು ಕಂಡುಬಂತು. ಮೊದಲು ಮಾತನಾಡಿದ ಇಬ್ಬರು ಸದಸ್ಯರಂತೂ ಎಷ್ಟೋ ಸಹಸ್ರನಾಮಾವಳಿಯನ್ನು ಹೇಳಿದರು. ಸಹಸ್ರ ನಾಮಾವಳಿಯನ್ನು ಅವರು ಮಾಡಿದ್ದೂ ಮಾಡಿದ್ದೆ. ಈಗಿರತಕ್ಕ ನಮ್ಮ ಘನಸರ್ಕಾರ ಒಂದು ಹಿನ್ನಲೆಯಲ್ಲಿ ಅಸ್ತಿತ್ವಕ್ಕೆ ಬಂತು. ಈ ಸರ್ಕಾರ ದಿನಬಳಕೆ ವಸ್ತುಗಳ ಬೆಲೆಯನ್ನು ಕಡಿಮೆ ಮಾಡುತ್ತದೆ ಎನ್ನುವ ಹಿನ್ನಲೆಯಲ್ಲಿ ಬಂತು. ಆದರೆ, ಈ ಸರ್ಕಾರ ಒಂದು ವರ್ಷದಲ್ಲಿ ಯಾವ ರೀತಿ ಕೆಲಸ ಮಾಡಿದೆ ಎಂಬುದನ್ನು ಜನತೆ ಮನಗಂಡಿದ್ದಾರೆ. ಈ ಸರ್ಕಾರಕ್ಕೆ ಈ ಮಂತ್ರಿಮಂಡಲದ ಸದಸ್ಯರಿಗೆ ಸರ್ಕಾರವನ್ನು ನಡೆಸುವ ಬಗ್ಗೆ ಎಷ್ಟು ಕಳಕಳಿಯಿದೆ, ಎಷ್ಟು ಕೆಲಸ ಮಾಡಿದ್ದಾರೆ ಎಂಬುದನ್ನು ನಾವು ನೋಡಬಹುದು. ಇದಕ್ಕೆ ರಾಜ್ಯಪಾಲರ ಭಾಷಣದಲ್ಲಿ ಒಂದೇ ಒಂದು ಉದಾಹರಣೆಯನ್ನು ಹೇಳುವುದಾದರೆ, ಅದರಲ್ಲಿಈರೀತಿ ಹೇಳಿದ್ದಾರೆ

> "We are looking forward to the Government of India giving their final clearance to the Vijayaragar Steel Project,"

ವಿಜಯನಗರ ಸ್ಟೀಲ್ ಪ್ಲಾಂಟ್ ಏನಿದೆ, ಇದರ ಬಗ್ಗೆ ಈ ಸದನದಲ್ಲಿ ಕೆಲವು ತಿಂಗಳ ಹಿಂದೆ ಒಂದು ನಿರ್ಣಯವನ್ನು ಮಾಡಿದ್ದರು. ಅದು ಏನೆಂದರೆ ಇಂಡಿಯಾ ಸರ್ಕಾರದವರು ವಿಜಯನಗರ ಸ್ಟೀಲ್ ಪ್ಲಾಂಟ್‌ಗೆ ೩೦ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ ಎನ್ನುವ ಬಗ್ಗೆ ಒಂದು ಅಭಿನಂದನಾ ನಿರ್ಣಯವನ್ನು ಸರ್ಕಾರದವರು ಈ ಸಭೆಯ ಮುಂದೆ ಮಂಡಿಸಿದ್ದರು. ಆದರೆ ಇಂಡಿಯಾ ಸರ್ಕಾರದವರೂ ಈ ವಿಜಯನಗರ ಸ್ಟೀಲ್ ಪ್ಲಾಂಟ್‌ಗೆ ಎಷ್ಟು ಹಣವನ್ನು ಮಂಜೂರು ಮಾಡಿದ್ದಾರೆ ಎಂಬುದನ್ನು ಕರಾರುವಕ್ಕಾಗಿ ತಿಳಿದುಕೊಳ್ಳುವ ಒಂದು ಕಳಕಳಿ ಶಕ್ತಿ ಇರಲಿಲ್ಲ. ಜನತೆಯನ್ನು ಯಾವುದೋ ಒಂದು ತಪ್ಪು ದಾರಿಗೆ ಎಳೆಯುವಂತಹ ಒಂದು ಪ್ರವೃತ್ತಿ ಇವರಲ್ಲಿ ಇದೆಯೇ ಹೊರತು ಮತ್ತೇನು ಇಲ್ಲ. ಇದನ್ನು ನೋಡಿದರೆ ಈ ಸರ್ಕಾರಕ್ಕೆ ಮಂತ್ರಿಮಂಡಲದವರಿಗೆ ಜನತೆಯ ಬಗ್ಗೆ ಎಷ್ಟೊಂದು ಕಾಳಜಿ ಮತ್ತು ಕಳಕಳಿ ಇದೆ ಎಂಬುದನ್ನು ಈ ಒಂದು ದೃಷ್ಟಾಂತದಿಂದ ತಿಳಿದುಕೊಳ್ಳಬಹುದು. ಮತ್ತೆ ಇನ್ನೊಂದು ದೃಷ್ಟಾಂತ ನಮ್ಮ ಗಮನಕ್ಕೆ ಬಂದಿದೆ ಅದೇನೆಂದರೆ ಈಗ ಕೇರಳ ರಾಜ್ಯದಿಂದ ನಮ್ಮ ರಾಜ್ಯಕ್ಕೆ ವಿದ್ಯುಚ್ಛಕ್ತಿ ಸಪ್ಲೈಯಾಗುತ್ತಿದೆ ಆದ್ದರಿಂದ ಕೇರಳ ಸರ್ಕಾರದ ವಿದ್ಯುಚ್ಛಕ್ತಿ ಮಂತ್ರಿಗಳು, ನಮ್ಮ ರಾಜ್ಯದಿಂದ ಸುಮಾರು ೭-೮ ಕೋಟಿ ರೂಪಾಯಿಗಳ ವಿದ್ಯುಚ್ಛಕ್ತಿ ಬಾಕಿ ಕೊಡಬೇಕೆಂದು ಒಂದು ಸ್ಟೇಟ್‌ಮೆಂಟನ್ನು ಕೊಟ್ಟರು. ಆಗ ನಮ್ಮ ಸರ್ಕಾರದ ವತಿಯಿಂದ ನಾವೇನು ಬಾಕಿ ಕೊಡಬೇಕಾಗಿಲ್ಲವೆಂದು ಹೇಳಿಕೆ ಕೊಟ್ಟರು. ಆ ಮೇಲೆ ಮರುದಿವಸ ಎರಡೂವರೆ ಲಕ್ಷ ರೂಪಾಯಿಗಳ ವಿದ್ಯುಚ್ಛಕ್ತಿ ಬಾಕಿ ಕೊಡಬೇಕೆಂದು ಹೇಳಿಕೆ ಕೊಟ್ಟರು. ತದನಂತರ ನಾಲ್ಕುವರೆ ಲಕ್ಷ ರೂಪಾಯಿಗಳ ಬಾಕಿ ಕೊಡಬೇಕೆಂದು ಮತ್ತೊಂದು ಹೇಳಿಕೆಯನ್ನು ಕೊಟ್ಟರು. ಹೀಗೆ ಈ ವಿಚಾರದಲ್ಲಿ ಎಷ್ಟು ಕೋಟಿ ರೂಪಾಯಿಗಳನ್ನು ಬಾಕಿ ಕೊಡಬೇಕೆಂಬುದು ಗೊತ್ತಿಲ್ಲ. ಕೇರಳ ಮುಖ್ಯಮಂತ್ರಿಗಳು ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದನ್ನು ನಾನು ಓದಿದ್ದೇನೆ. ಅವರ ಸ್ಟೇಟ್‌ಮೆಂಟ್‌ನಲ್ಲಿ ನಮ್ಮ ಸರ್ಕಾರದ ಕಡೆಯಿಂದ ಮಾತುಕತೆ ನಡೆಸಿದ ನಂತರ ೨ ಕೋಟಿ ರೂಪಾಯಿಗಳು ಸಂದಾಯವಾಯಿತು ಎಂದು ಕೇರಳ ಸರ್ಕಾರದವರು ಹೇಳಿದ್ದಾರೆ. ಆದರೆ ನಮ್ಮ ಸರ್ಕಾರದವರು ಈ ಬಗ್ಗೆ ಎಷ್ಟು ಹಣವನ್ನು ಸಂದಾಯ ಮಾಡಿದ್ದಾರೆಂಬುದು ನಮಗೆ ಗೊತ್ತಿಲ್ಲ. ಇದರ ಬಗ್ಗೆ ನಮ್ಮ ಸರ್ಕಾರದವರು ಹೇಳಿಕೆಯನ್ನು ಕೊಡಬೇಕಾದ ಅಗತ್ಯವಿದೆ. ಇನ್ನೊಂದು ದೃಷ್ಟಾಂತ ಏನೆಂದರೆ ಸರ್ಕಾರವನ್ನು ನಡೆಸುವಂತಹ ಮಂತ್ರಿಮಂಡಲ ಏನಿದೆ ಇದು ಈ ಸರ್ಕಾರದ ಆಗುಹೋಗುಗಳ ಬಗ್ಗೆ ಕಾಳಜಿ ವಹಿಸುವುದಿಲ್ಲ ಎನ್ನುವ ಬಗ್ಗೆ ಒಂದು ದೃಷ್ಟಾಂತವನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ಕಳೆದ ವರ್ಷದ ರಾಜ್ಯಪಾಲರ ಭಾಷಣದಲ್ಲಿ ಈ ರೀತಿ ಹೇಳಿದ್ದಾರೆ.

> "My Government have accorded highest priority to bringing down the prices of essential commodities like food grain sugar, Vegetable Oil and Kerosene which during the last few months unfortunately showed a sudden rise."

ಇವರು ಪ್ರಾರಂಭದಲ್ಲಿ ನಮ್ಮ ಜನತೆಗೆ ಕೊಟ್ಟಂತಹ ವಾಗ್ದಾನ, ಈ ಒಂದು ವರ್ಷದ ಅವಧಿಯಲ್ಲಿ ಜೀವನಾವಶ್ಯಕ ವಸ್ತುಗಳ ಬೆಲೆ ದವಸಧಾನ್ಯಗಳ ಬೆಲೆ, ಸಕ್ಕರೆ ಬೆಲೆ ಎಷ್ಟು ಕಡಿಮೆಯಾಗಿದೆ. ಇವರು ಬೆಲೆಯನ್ನು ಕಡಿಮೆ ಮಾಡುತ್ತೇವೆಂದು ಏನು ಹೇಳಿದ್ದರು ಎಷ್ಟು ಕಡಿಮೆಮಾಡಿದ್ದಾರೆ. ಕಳೆದ ವರ್ಷ ಸಕ್ಕರೆ ಬೆಲೆ ಒಂದು ಕೆ.ಜಿ.ಗೆ. ಮೂರು ರೂಪಾಯಿ ೫೦ ಪೈಸೆ ಇದ್ದದ್ದು ಇವತ್ತು ೭ ರೂಪಾಯಿ ಆಗಿದೆ. ಇದನ್ನೇ ಇವರು ಕಡಿಮೆ ಮಾಡಿರುವುದು.

ಇವರು ಯಾವು ಯಾವುದನ್ನು ಎಷ್ಟೆಷ್ಟು ಕಡಿಮೆ ಮಾಡಿದ್ದಾರೆಂಬುದನ್ನು ಮುಂದೆ ವಿವರವಾಗಿ ಹೇಳುತ್ತೇನೆ. ಎಲ್ಲ ಲೆಕ್ಕಗಳು ನನ್ನ ಹತ್ತಿರ ಇವೆ. ಕೇರಳಾದಿಂದ ನಮ್ಮ ರಾಜ್ಯಕ್ಕೆ ವಿದ್ಯುಚ್ಛಕ್ತಿ ಸರಬರಾಜು ಮಾಡುತ್ತಿರುವ ಬಗ್ಗೆ ಇನ್ನೂ ಸ್ವಲ್ಪ ಹೇಳುವುದು ಉಚಿತ ಎಂದು ನನಗನ್ನಿಸುತ್ತದೆ. ೧೯೭೪ರಲ್ಲಿ ಕರ್ನಾಟಕ ಸರ್ಕಾರಕ್ಕೂ ಮತ್ತು ಕೇರಳಾ ಸರ್ಕಾರಕ್ಕೂ ೪ ವರ್ಷಗಳ ಒಂದು ಒಪ್ಪಂದವಾಯಿತು, ಯೂನಿಟ್ ಒಂದಕ್ಕೆ ೨.೩ಪೈಸೆ ದರದಲ್ಲಿ ವಿದ್ಯುಚ್ಛಕ್ತಿ ಒದಗಿಸಬೇಕೆಂಬ ಬಗ್ಗೆ ಒಂದು ಅಗ್ರಿಮೆಂಟ್ ಆಯಿತು. ಈ ೪ ವರ್ಷಗಳ ಒಪ್ಪಂದವು ಮುಗಿಯುವುದಕ್ಕೆ ಮೊದಲೇ ಕೇರಳಾ ಸರ್ಕಾರವು ವಿದ್ಯುಚ್ಛಕ್ತಿ ದರದ ಬಗ್ಗೆ ಪುನಃ ಬದಲಾವಣೆಯಾಗಬೇಕೆಂದು ಕೇಳುತ್ತಿದೆ ಎಂಬ ಸಂಗತಿ ನನಗೆ ತಿಳಿದು

ಬಂದಿದೆ. ಇದರ ಜೊತೆಗೆ ವಿದ್ಯುಚ್ಛಕ್ತಿಯನ್ನು ಬಹಳ ದೂರದವರೆಗೆ ಕೊಂಡೊಯ್ಯುವಾಗ ಟ್ರಾನ್ಸ್ ಮಿಷನ್ ಲೈನ್-ಲಾಸ್ ಎಂಬುದು ಆಗುತ್ತದೆ. ಇಲ್ಲಿಯವರೆಗೆ ಕೇರಳಾದ ಇಡಿಕಿಯಿಂದ ಕರ್ನಾಟಕದ ಗಡಿಯವರೆಗೆ ಆಗುತ್ತಿದ್ದ ಈ ಲೈನ್-ಲಾಸ್‌ಗೆ ನಾವು ಹಣ ಕೊಡಬೇಕಾಗಿರಲಿಲ್ಲ. ಆದರೆ ಈಗ ಇಡಿಕಿಯಿಂದ ನಮ್ಮ ರಾಜ್ಯದವರೆಗೆ ಎಷ್ಟು ಲೈನ್-ಲಾಸ್ ಆಗುತ್ತದೋ ಅಷ್ಟಕ್ಕೂ ಸಹ ದುಡ್ಡು ಕೊಡಬೇಕಾಗಿದೆ. ಈಗ ನಮ್ಮ ಸರ್ಕಾರದವರು ಒಂದು ವರ್ಷಕ್ಕೆ ಮಾಡಿಕೊಂಡಿರುವ ಅಗ್ರಿಮೆಂಟ್ ಪ್ರಕಾರ ಯೂನಿಟ್ ಒಂದಕ್ಕೆ 21 ಪೈಸೆಯಂತೆ ಕೊಡಬೇಕಾಗಿದೆ. ನಮ್ಮ ರಾಜ್ಯದ ಜನತೆಯ ಮೇಲೆ ಹೆಚ್ಚಿನ ಒಂದು ಭಾರ ಹಾಕುವಂತಹ ಈ ಒಂದು ಕಾರ್ಯಕ್ರಮವನ್ನು ಸರ್ಕಾರ ಏಕೆ ಕೈಕೊಂಡಿತು ಎಂಬುದನ್ನು ಜನತೆಗೆ ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ರೈತರ ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡಿರುವುದರಿಂದ ನಾನು ಹೆಚ್ಚು ಮಾತನಾಡಲು ಹೋಗುವುದಿಲ್ಲ. ರೈತರ ಜಾಥಾದ ಬಗ್ಗೆ ಮಾನ್ಯ ಭೀಮಣ್ಣ ಖಂಡ್ರೆಯವರು ಮಾತನಾಡಿದರು. ಆ ಜಾಥಾದಲ್ಲಿ ರೈತರೇ ಇಲ್ಲ ಎನ್ನುವ ಮಾತನ್ನು ಅವರು ಹೇಳಿದರು. ಶ್ರೀಮಾನ್ ಭೀಮಣ್ಣ ಖಂಡ್ರೆಯವರು ಆ ಜಾಥಾವನ್ನೇ ನೋಡಿಲ್ಲವೆಂದು ನಾನಾದರೂ ತಿಳಿದುಕೊಂಡಿದ್ದೇನೆ.

ಶ್ರೀ ವೀರಪ್ಪಮೊಯಿಲಿ.—ನರಗುಂದದಲ್ಲಿ ಅವರು ನೋಡಿರಬಹುದು

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ನಾನು ನರಗುಂದಕ್ಕೆ ಹೋಗಿದ್ದೆ. ಅಲ್ಲಿಗೆ ಭೀಮಣ್ಣ ಖಂಡ್ರೆಯವರು ಬಂದಿರಲಿಲ್ಲ. ಮತ್ತೆ ತಾವು ಯಾರೂ ಬಂದಿರಲಿಲ್ಲ. ನರಗುಂದದ ವಿಷಯ ತಾವು ಹೇಳಿದ ಕಾರಣ ಒಂದು ವಿಷಯ ಹೇಳಬೇಕಾಗಿದೆ. ಏನೆಂದರೆ, ಅಲ್ಲಿಯ ರೈತರು ಜಾಥಾದಲ್ಲಿ ಭಾಗವಹಿಸಬಾರದೆಂದು ಕೊಂಡು ಅವರ ಮೇಲೆ ಪೋಲೀಸರನ್ನು ರಾಜ್ಯಸರ್ಕಾರದವರು ಛೂ ಬಿಟ್ಟಿದ್ದನ್ನು ನಾನು ಕಂಡೆ. ಪೋಲೀಸಿನವರು ಎಷ್ಟೇ ಬೆದರಿಕೆ ಹಾಕಿದರೂ ಸಹ ಅಲ್ಲಿನ ರೈತರು ಜಾಥಾದಲ್ಲಿ ಭಾಗವಹಿಸಿದ ಕಾರಣ ನಾನು ಅವರನ್ನು ಮನಸಾರೆ ಅಭಿನಂದಿಸುತ್ತೇನೆ. ನಾನೂ ಕೂಡ ರೈತರ ಜಾಥಾದಲ್ಲಿ ನೂರು ಕಿಲೋ ಮೀಟರ್‌ವರೆಗೆ ನಡೆದಿದ್ದೇನೆ. ಮತ್ತು ರೈತರ ಜೊತೆಯಲ್ಲಿ ಇದ್ದೆ. ಮಾನ್ಯ ಭೀಮಣ್ಣ ಖಂಡ್ರೆಯವರೂ ಸಹ ರೈತರ ಜಾಥಾದಲ್ಲಿ ಸೇರಿಕೊಂಡು ನಡೆದುಕೊಂಡು ಬಂದಿದ್ದರೆ ಆ ಜಾಥಾದಲ್ಲಿ ರೈತರಿದ್ದಾರೆಂಬುದು ಅವರಿಗೆ ಅರ್ಥವಾಗುತ್ತಿತ್ತು. ಆದರೆ ಅವರು ಅದನ್ನು ನೋಡಿಯೇ ಇಲ್ಲ. ರೈತರ ಜಾಥಾ ಹೋದ ಕಡೆಯಲ್ಲಿ ಅಲ್ಲಿನ ಸುತ್ತಮುತ್ತಲ ರೈತರಲ್ಲಿ ಯಾವ ಒಂದು ಉತ್ಸಾಹ ಇತ್ತು ಎಂದರೆ, ಅಕ್ಕಪಕ್ಕದ ರೈತರು, ಹೆಣ್ಣುಮಕ್ಕಳು ತಲೆಯ ಮೇಲೆ ಬುತ್ತಿಯನ್ನು ಕಟ್ಟಿಕೊಂಡು ಬಂದು ರೈತರಿಗೆ ಹಂಚುತ್ತಿದ್ದರು. ಜಾಥಾದಲ್ಲಿದ್ದ ರೈತರಿಗೆ ಹೆಣ್ಣುಮಕ್ಕಳು ಆರತಿ ಎತ್ತುತ್ತಿದ್ದರು. ಅನ್ನ, ರೊಟ್ಟಿ, ಮಜ್ಜಿಗೆ ಹಾಗೂ ನೀರನ್ನು ಹಂಚುತ್ತಿದ್ದರು. ಇದೊಂದು ಹೃದಯ ಸ್ಪರ್ಶಿ ಘಟನೆ ಹಾಗೂ ಮನಸ್ಸಿಗೆ ಆಹ್ಲಾದ ಕೊಡುವಂತಹ ಒಂದು ದೊಡ್ಡ ಸಂಗತಿ ಎಂದು ನಾನಾದರೂ ಅಂದುಕೊಂಡಿದ್ದೇನೆ. ಈ ರೈತರ ಜಾಥಾದ ಬಗ್ಗೆ ಇನ್ನೂ ಹೇಳಬೇಕೆಂದರೆ, ಈ ಜಾಥಾಕ್ಕೆ ರೈತರು ಬರದಂತೆ ಮಾಡಬೇಕೆಂದುಕೊಂಡು ಕೆಲವರುನಾನಾ ರೀತಿಯ ಪ್ರಯತ್ನಗಳನ್ನು ನಡೆಸಿದರು. ರಾಣಿಬೆನ್ನೂರಿನಲ್ಲಿ ಇದರ ವಿರುದ್ಧವಾಗಿ ಮೀಟಿಂಗ್ ಮಾಡಿದರು. ಈ ರೀತಿ ಮೀಟಿಂಗ್ ಮಾಡಿದವರನ್ನು ಅಲ್ಲಿಂದ ಓಡಿಸಿದ್ದೂ ಸಹ ನನಗೆ ಗೊತ್ತಿದೆ ಆದರೂ ಸಹ ಇವರುಗಳು ಜಾಥಾದಲ್ಲಿ ಬರುತ್ತಿರುವ ರೈತರಿಗೆ ರೊಟ್ಟಿ ಕೊಡಬೇಡಿ, ಅನ್ನ ತಿಂಡಿ ಕೊಡಬೇಡಿ, ನೀರು ಕೊಡಬೇಡಿ ಎಂದು ಅಕ್ಕಪಕ್ಕದ ಹಳ್ಳಿಗಳ ರೈತರಿಗೆ ಹೋಗಿ ಹೇಳಿದ ಪ್ರಸಂಗ ನನ್ನ ಗಮನಕ್ಕೆ ಬಂದಿದೆ. ರೈತರ ಮುಖಂಡರು ಹಾಗೂ ಸರ್ಕಾರೀ ರೈತ ಮುಖಂಡರು ಎಂದು ಯಾರು ಯಾರು ಇದ್ದಾರೋ ಅವರ ಮೂಲಕವೇ ಈ ರೀತಿಯ ಹೇಳಿಕೆ ಕೊಡಿಸಿದ್ದಾರೆ. ಈ ರೈತ ಜಾಥಾದಲ್ಲಿ ರಾಜಕೀಯ ಸೇರಿದೆ. ಆದಕಾರಣ ಈ ಜಾಥಾದಲ್ಲಿ ಯಾರೂ ಪಾಲ್ಗೊಳ್ಳಬಾರದು, ರೈತರಿಗೆ ರಾಜಕೀಯ ಬೇಡ ಎಂದು ಹೇಳುವಂತಹ ಹೇಳಿಕೆಗಳನ್ನು ಕೊಟ್ಟಿದ್ದಾರೆ. ರೈತರಿಗೆ ರಾಜಕೀಯ ಏತಕ್ಕೆ ಬೇಡ ಎಂದು ನಾನು ಹೇಳುತ್ತೇನೆ ? ರೈತರಿಗೆ ರಾಜಕೀಯ ಇಲ್ಲದ ಕಾರಣದಿಂದಲೇ ರೈತರು ಈ ಒಂದು ಸ್ಥಿತಿಗೆ ಬಂದಿರುವುದು. ನಾಲ್ಕು ರಾಜಕೀಯ ಪಕ್ಷಗಳು ಸೇರಿಕೊಂಡು ಈ ರೈತರ ಜಾಥಾವನ್ನು ಹೊರಡಿಸಿರುವುದು. ಈ ಮೂಲಕ ಹಳ್ಳಿಯ ಪ್ರತಿಯೊಬ್ಬ ರೈತನಿಗೂ ರಾಜಕೀಯ ಪ್ರಜ್ಞೆ ಮೂಡಿಸಬೇಕೆಂಬುದೇ ನಮ್ಮ ಉದ್ದೇಶವಾಗಿದೆ. ರೈತರಲ್ಲಿ ರಾಜಕೀಯ ಪ್ರಜ್ಞೆ ಬಂದರೆ, ರೈತ ವಿರೋಧ ಭಾವನೆಯನ್ನು ಹೊಂದಿರುವಂತಹ ರಾಜಕೀಯ ವ್ಯಕ್ತಿಗಳನ್ನು ಹೊರಗೆ ದಬ್ಬಿ, ರಾಜಕೀಯ ಪ್ರಜ್ಞೆಯುಳ್ಳ ರೈತರೇ ಈ ಸರ್ಕಾರವನ್ನು ನಡೆಸಿದಾಗ ಮಾತ್ರ ರೈತರಿಗೆ ನ್ಯಾಯ ಸಿಗುತ್ತದೆಯೇ ಹೊರತು, ಇನ್ನು ಬೇರೆ ಯಾವ ರೀತಿಯಿಂದಲೂ ರೈತರಿಗೆ ನ್ಯಾಯ ಒದಗಿಸುವುದಕ್ಕೆ

ಸಾಧ್ಯವಿಲ್ಲವೆಂದು ನಾನು ನಂಬಿಕೊಂಡಿದ್ದೇನೆ. ರೈತರಿಗೆ ರಾಜಕೀಯ ಪ್ರಜ್ಞೆ ಕೊಡಬೇಕೆಂದುಕೊಂಡು ನಾವು ಈ ಮೊದಲೂ ಸಹ ಕೆಲಸ ಮಾಡಿದ್ದೇವೆ. ಇದಕ್ಕೆ ಪ್ರಥಮ ಹೆಜ್ಜೆಯಾಗಿ ನಾವು ಭೂಮಸೂದಾ ಕಾನೂನನ್ನು ಜಾರಿಗೆ ತಂದೆವು. ಇದರ ಒಂದು ಅಂಗವಾಗಿ ಹೆಚ್ಚಿನ ರೈತರಿಗೆ ರಾಜಕೀಯ ಪ್ರಜ್ಞೆ ಬಂದಿದೆ. ಅದರ ಒಂದು ಪ್ರತಿಫಲವಾಗಿ ರೈತರು ಈ ರೈತ ಜಾಥಾದಲ್ಲಿ ಭಾಗವಹಿಸಿರುವುದು ನಮಗೆ ಕಂಡುಬಂದಿದೆ. ಇದರ ಜೊತೆಗೆ ರೈತರಲ್ಲಿ ಇನ್ನೂ ಹೆಚ್ಚಿನ ರಾಜಕೀಯ ಪ್ರಜ್ಞೆ ಬರುವಂತೆ ಮಾಡುವುದು ಅಗತ್ಯವಿದೆ.

ಇನ್ನು ಆ ಕಡೆಯಿಂದ ಮಾನ್ಯ ಸದಸ್ಯರುಗಳು ಮಾತನಾಡುವಾಗ ರೈತರಿಗೆ ಬಹಳಷ್ಟು ಸವಲತ್ತು ಕೊಟ್ಟಿದೆ ಎಂದು ಹೇಳುತ್ತಿದ್ದಾರೆ ಇವರು ಏನೇನು ಸವಲತ್ತುಗಳನ್ನು ಕೊಟ್ಟಿದ್ದಾರೆಂಬುದನ್ನು ಸ್ವಲ್ಪ ನೋಡಬೇಕಾಗಿದೆ. ಈಗ ಬೆಟರ್‌ಮೆಂಟ್ ಲೆವಿಯನ್ನು ಮನ್ನಾ ಮಾಡಿದ್ದಾರೆ. ಇದು ಸಂತೋಷದ ಸಂಗತಿ. ಇದರ ಜೊತೆಗೆ ಲೆವಿ ಟ್ಯಾಕ್ಸನ್ನು ಕಡಿಮೆ ಮಾಡಿದ್ದೇವೆಂದು ಹೇಳಿದ್ದಾರೆ. ಎಷ್ಟು ಕಡಿಮೆ ಮಾಡಿದ್ದಾರೆಂಬುದನ್ನು ನೋಡಬೇಕಾಗಿದೆ. ನಮ್ಮ ಮಲೆನಾಡು ಪ್ರದೇಶದಲ್ಲಿ ಭತ್ತದ ಬೆಳೆಗೆ ಎಕರೆ ಒಂದಕ್ಕೆ ೨೫ ರೂಪಾಯಿಗಳಿದ್ದ ಲೆವಿಯನ್ನು ಈಗ ೩೨ ರೂಪಾಯಿಗಳಿಗೆ ಹೆಚ್ಚು ಮಾಡಿದ್ದು ಇವರಿಗೆ ಕಡಿಮೆ ಎಂದು ಕಾಣುತ್ತಿದೆ. ೨೫ ರೂಪಾಯಿಗಳಿಂದ ೩೨ ರೂಪಾಯಿಗಳವರೆಗೆ ಇಳಿಸಿದರು. ನಂತರ ಬಾಕಿ ನೀರಾವರಿ ಪ್ರದೇಶದಲ್ಲಿ ಎಕರೆಗೆ ೩೫ ರೂಪಾಯಿ ಇದ್ದಂಥ ಭತ್ತದ ದರವನ್ನು ೪೮ ರೂಪಾಯಿಗಳಿಗೆ ಇಳಿಸಿದರು. ಮಲೆನಾಡಿನಲ್ಲಿ ತೋಟದ ಬೆಳೆಗೆ ೩೫ ರೂಪಾಯಿ ದರ ಇದ್ದದ್ದನ್ನು ೫೦ ರೂಪಾಯಿಗೆ ಇಳಿಸಿದ್ದಾರೆ. ಇದು ದರ ಇಳಿಸಿದಂಥ ಒಂದು ಪಟ್ಟಿ, ಇದನ್ನು ನಮ್ಮ ರೈತ ಮುಖಂಡರಿಗೆ ಹೇಳಿಕೊಂಡು ಬಂದು, ರೈತರಿಗೆ ರಾಜಕೀಯ ಬೇಡ ಎಂದು ಹೇಳಿ ರೈತರನ್ನು ಗುತ್ತಿಗೆಗೆ ತೆಗೆದುಕೊಂಡ ಹಾಗೆ ಮಾಡಿದ್ದಾರೆ. ಒಟ್ಟಿನಲ್ಲಿ ರೈತರನ್ನು ಗುತ್ತಿಗೆಗೆ ತೆಗೆದುಕೊಂಡು ಬಿಟ್ಟಿದ್ದಾರೆ. ರೈತರು ಹಾಗೆಯೇ ಇದ್ದರೆ ಜಿಲ್ಲಾವಾರು ತಾಲ್ಲೂಕುವಾರು ಎಕ್ಸೈಸ್ ಕಂಟ್ರಾಕ್ಟರನ್ನು ಗುತ್ತಿಗೆಗೆ ತೆಗೆದುಕೊಂಡ ಹಾಗೆ ಆಗುತ್ತದೆ. ಈ ಸ್ಟೇಟ್‌ನಲ್ಲಿ ಮುಂದೆ ಯಾರೂ ಅಧಿಕಾರಕ್ಕೆ ಬರಬಾರದು, ನಾವೇ ಅಧಿಕಾರವನ್ನು ನಡೆಸಿಕೊಂಡಿರಬಹುದು ಎಂದು ಆ ರೀತಿ ಮಾಡಿದ್ದಾರೆ. ಇವತ್ತಿನ ದಿವಸ ರೈತರಲ್ಲಿ ಆ ಒಂದು ಪ್ರಶ್ನೆ ಬಂದುಬಿಟ್ಟರೆ ನಮ್ಮ ಗುತ್ತಿಗೆಗೆ ಎಲ್ಲಿ ಪೆಟ್ಟು ಬೀಳುತ್ತದೆಯೋ ಎಂಬ ಭಯ ಅವರಿಗೆ ಬಂದ ಹಾಗೆ ಕಾಣುತ್ತಿದೆ. ಅದಕ್ಕೋಸ್ಕರ ರೈತರಿಗೆ ರಾಜಕೀಯ ಬೇಡ ಎಂದು ಹೇಳುತ್ತಾ ಬರುತ್ತಿದ್ದಾರೆ. ಇವತ್ತು ರೈತರಿಗೆ ಆ ಒಂದು ಪ್ರಜ್ಞೆ ಬಂದುಬಿಟ್ಟಿದೆ. So far, these farmers were sleeping giants, now they are steering up. ಇವತ್ತಿನ ದಿವಸ ರೈತರ ಜಾಥಾ ಬರುತ್ತಿದೆ. ಅವರು ಇವತ್ತಿನದಿವಸ ಅವರಲ್ಲಿರತಕ್ಕಂಥ ಒಂದು ಶಕ್ತಿ ಏನಿದೆ ಅದರಿಂದಲೇ ಅವರು ಮೇಲೆದ್ದು ಬರುತ್ತಿದ್ದಾರೆ. ಅವರ ಬಗ್ಗೆ ಉತ್ಸಾಹ ಇರತಕ್ಕಂಥವರು ಅದನ್ನು ಸ್ವಾಗತಿಸಬೇಕು. ಅದಕ್ಕೆ ಅಡ್ಡಿ ಆತಂಕ ಒಡ್ಡುವುದು ಸರಿಯಲ್ಲ. ಈ ರೈತರ ಜಾಥಾ ಇರುವಂಥಾದ್ದು ಯಾವ ಒಂದು ಸರ್ಕಾರದ ವಿರುದ್ಧವೂ ಅಲ್ಲ. ಯಾರೊಬ್ಬರ ವಿರುದ್ಧವೂ ಅಲ್ಲ. ಅದು ರಾಜಕೀಯ ಜಾಥಾ ಆಗಿರುವಂಥಾದ್ದು ಅವರ ಕಷ್ಟ ಕಾರ್ಪಣ್ಯಗಳು ಏನಿವೆ ಅದರ ಬಗ್ಗೆ ಸಮಾಜದ ಪ್ರಜ್ಞೆಯನ್ನು ಮೂಡಿಸುವುದಕ್ಕೆ ರೈತರ ಜಾಥಾ ಇರುವಂಥಾದ್ದಾಗಿದೆ. ನಾನು ಇವತ್ತು ಮಾನ್ಯ ಸದಸ್ಯರಿಗೆ ಮತ್ತು ರೈತರ ಮುಖಂಡರು ಎಂದು ಹೇಳಿಕೊಳ್ಳುವವರಿಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಏನೆಂದರೆ ರೈತರ ಜಾಥಾದ ಡಿಮ್ಯಾಂಡ್‌ಗಳು ಏನಿವೆ ಆ ಡಿಮ್ಯಾಂಡ್‌ಗಳಲ್ಲಿ ಯಾವ ಯಾವ ಡಿಮ್ಯಾಂಡ್‌ಗಳನ್ನು ಒಪ್ಪಿಕೊಳ್ಳುವುದಿಲ್ಲ ಎಂಬುದನ್ನು ಅವರು ಸಾರ್ವಜನಿಕವಾಗಿ ಹೇಳಬೇಕು. ರೈತ ಕಾರ್ಮಿಕರಿಗೆ ಹೆಚ್ಚು ಸವಲತ್ತನ್ನು ಕೊಡಬೇಕೆಂಬುದನ್ನು ಅವರು ಏತಕ್ಕೆ ಒಪ್ಪಿಕೊಳ್ಳುತ್ತಿಲ್ಲ? ಅಥವಾ ನರಗುಂದದ ರೈತ ಸಮುದಾಯದ ಬಗ್ಗೆ ಮತ್ತು ಅಲ್ಲಿಯ ರೈತರಿಗೆ ಬಂದ ಕಷ್ಟಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅವರಿಗಾಗಿ ಹೋರಾಟ ಮಾಡಿ ಯಾರ್ಯಾರು ಹುತಾತ್ಮರಾಗಿದ್ದಾರೋ ಅವರ ಒಂದು ಜ್ಯೋತಿ ಇಲ್ಲಿಗೆ ಬರುವಾಗ, ಆ ಜ್ಯೋತಿಯ ಡಿಮ್ಯಾಂಡ್ ಏನಿದೆ ಅಲ್ಲಿ ಸರ್ಕಾರ ಕೆಲವು ಜನ ನಿರ್ದೋಷಿ ಬಡ ರೈತರನ್ನು ಬಂಧಿಸಿ ಅವರ ಮೇಲೆ ಕೊಲೆಯ ಮೊಕದ್ದಮೆಯನ್ನು ಏನು ಹಾಕಿದೆಯೋ ಆ ಮೊಕದ್ದಮೆಯನ್ನು ಹಿಂತೆಗೆದುಕೊಳ್ಳಬೇಕೆಂಬ ಬೇಡಿಕೆ ಏನಿದೆ ಅದನ್ನು ಏತಕ್ಕೆ ಒಪ್ಪುತ್ತಾ ಇಲ್ಲ, ಆ ಮೊಕದ್ದಮೆಯನ್ನು ಏತಕ್ಕೆ ಹಿಂತೆಗೆದುಕೊಳ್ಳುತ್ತಿಲ್ಲ ಎಂದು ಕೇಳಬೇಕಾಗಿದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದು ವಾಕ್ಯವನ್ನು ಸೇರಿಸಿದ್ದಾರೆ. ಅದು ಏನೆಂದರೆ "The food policy for 1980-81 has for its objectives, a remunerative support price for the farmers and supply of foodgrains to the consumers at

reasonable price'' ಎಂದು ಇದೆ. ಇದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಈ ದಿಶೆಯಲ್ಲಿ ಸರ್ಕಾರದವರು ಮಾಡಿದ ಕೆಲಸವೇನು? ಮೊನ್ನೆ ಮಾನ್ಯ ಆಹಾರ ಸಚಿವರು ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ಈ ಲೆವಿಯನ್ನು ಕಡ್ಡಾಯವಾಗಿ ನಾವು ವಸೂಲು ಮಾಡುತ್ತೇವೆಂದು ಹೇಳುವಂಥ ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ಈ ಲೆವಿಯ ದರ ಏನು? ರೆಮ್ಯುನರೇಟಿವ್ ಸಪೋರ್ಟ್ ಪ್ರೈಸ್ ಏನು ಎಂದು ಕೇಳಬಯಸುತ್ತೇನೆ. ಕನ್‌ಸ್ಯೂಮರ್ಸ್‌ಗೆ ಫುಡ್‌ಗ್ರೈನ್ಸನ್ನು ರೀಸನಬಲ್ ಪ್ರೈಸ್‌ನಲ್ಲಿ ಸರಬರಾಜು ಮಾಡುವ ಬಗ್ಗೆ ಹೇಳಿದ್ದಾರೆ. ಆದರೆ ರೈತರಿಗೆ ಆಗಿರತಕ್ಕಂಥ ನಷ್ಟವನ್ನು ಅದರಲ್ಲಿ ಸೇರಿಸಿ ರೀಸನಬಲ್ ಪ್ರೈಸ್‌ಗೆ ಅದನ್ನು ಅವರಿಗೆ ಕೊಡುವುದಕ್ಕಾಗುವುದಿಲ್ಲವೇ? ರೈತರಿಗೆ ರೆಮ್ಯುನರೇಟಿವ್ ಸಪೋರ್ಟ್ ಪ್ರೈಸನ್ನು ಕೇಂದ್ರ ಸರ್ಕಾರಕ್ಕಿಂತ ಜಾಸ್ತಿ ಕೊಟ್ಟಿದ್ದೇವೆ ಎಂದು ನಮ್ಮ ರಾಜ್ಯ ಸರ್ಕಾರದವರು ಹೇಳಿದ್ದಾರೆ. ರೈತರಿಗೆ ಅದರಿಂದ ಸಮಾಧಾನವಾಗುವುದಿಲ್ಲ. ಕೇಂದ್ರ ಸರ್ಕಾರದವರು ೯೫ ರೂಪಾಯಿಗಳನ್ನು ಕೊಟ್ಟಿದ್ದಾರೆ, ನಾವು ೧೦೫ ರೂಪಾಯಿಗಳನ್ನು ಕೊಟ್ಟಿದ್ದೇವೆ, ನೀವು ಸಂತುಷ್ಟಿ ಪಡೆಯಿರಿ ಎಂದು ಹೇಳಿದರೆ ಅದರಿಂದ ಯಾವ ಸಂತುಷ್ಟಿಯನ್ನು ಅವರು ಪಡೆಯುವುದಕ್ಕೆ ಆಗುವುದಿಲ್ಲ. ಅವರಿಗೆ ನ್ಯಾಯವಾದ ಬೆಲೆಯನ್ನು ಕೊಟ್ಟರೆ ನಮಗೂ ಸಂತೋಷವಾಗುತ್ತದೆ, ಅವರಿಗೂ ಸಂತುಷ್ಟಿ ಸಿಗುತ್ತದೆ ಬರೇ ಮಾತಿನಲ್ಲಿ ಅವರಿಗೆ ಬೆಂಬಲ ಬೆಲೆಯನ್ನು ಜಾಸ್ತಿ ಕೊಟ್ಟಿದ್ದೇವೆ ಎಂದರೆ that is not an argument. ಇನ್ನೊಂದು ವಿಚಾರವೇನೆಂದರೆ ಇತ್ತೀಚೆಗೆ ಕೇಂದ್ರ ಸರ್ಕಾರದವರು ಡೀಸಲ್ ದರವನ್ನು ಹೆಚ್ಚಿಸಿದಾಗ ತಕ್ಷಣದಲ್ಲಿ ನಮ್ಮ ರಾಜ್ಯ ಸರ್ಕಾರದವರು ನಮ್ಮ ಕೆ.ಎಸ್.ಆರ್.ಟಿ.ಸಿ ಬಸ್ ದರವನ್ನು ಹೆಚ್ಚಿಸಿದ್ದಾರೆ ಏತಕ್ಕೆ? ರೈತರಿಗೆ ಅವರ ಇನ್‌ಪುಟ್ಸ್ ಬಗ್ಗೆ ಮತ್ತು ಜೀವನಾವಶ್ಯಕ ವಸ್ತುಗಳ ದರವೆಲ್ಲ ಏರಿರುವಾಗ ರೈತರಿಗೆ ಅವರು ನಷ್ಟ ಮಾಡಿಕೊಂಡು ಲೆವಿಯನ್ನು ಕೊಡಬೇಕೆಂದು ಕೇಳುತ್ತಿದ್ದಾರಲ್ಲ ಇದು ಯಾವ ನ್ಯಾಯ ಎಂದು ಕೇಳುತ್ತೇನೆ. ಸರ್ಕಾರದವರೇ ನಡೆಸುವಂಥ ಕೆ.ಎಸ್.ಆರ್.ಟಿ.ಸಿಗೆ ಡೀಸಲ್ ಬೆಲೆ ಹೆಚ್ಚಾದಾಗ ಒಂದಕ್ಕೆ ೩ ಪಟ್ಟು ದರವನ್ನು ಹೆಚ್ಚು ಮಾಡಿ ಅದನ್ನು ಜನತೆಯ ಮೇಲೆ ಹೇರಿರುವುದು ಇದೂಸಹಯಾವ ನ್ಯಾಯ ಎಂದು ನಾನು ಕೇಳಬಯಸುತ್ತೇನೆ ಇನ್ನು ಬೆಟರ್‌ಮೆಂಟ್ ಲೆವಿಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಇದರ ಬಗ್ಗೆ ಮಾನ್ಯ ಸದಸ್ಯರಾದ ಕುಸನೂರ್‌ರವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಸರ್ಕಾರದವರು ಬೆಟರ್‌ಮೆಂಟ್ ಲೆವಿಯನ್ನು ತೆಗೆದದ್ದನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಆದರೆ ಈ ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಎಂದರೆ ಈ ಬೆಟರ್‌ಮೆಂಟ್ ಲೆವಿಯನ್ನು ವಸೂಲು ಮಾಡಿದರೆ ಡ್ಯಾಮ್ ಕಟ್ಟಲಿಕ್ಕೆ ಹಣ ಬೇಕಾಗುತ್ತದೆ ಎಂದು ಅವರು ಹೇಳಿದ್ದಾರೆ. ಡ್ಯಾಮ್ ಕಟ್ಟುವುದಕ್ಕಾಗಿ ಮತ್ತೆ ಬೆಟರ್‌ಮೆಂಟ್ ಲೆವಿಯನ್ನು ವಸೂಲು ಮಾಡುವುದಾದರೆ ಬೆಟರ್‌ಮೆಂಟನ್ನು ಏನು ತೆಗೆದಹಾಗೆ ಆಯಿತು? ಎಲ್ಲಿ ಡ್ಯಾಮ್ ಕನ್‌ಸ್ಟ್ರಕ್ಟ್ ಮಾಡುತ್ತಾರೆಯೋ ಅಲ್ಲಿ ಫಾರ್ಮರ್ಸ್‌ಗಾಗಿ ಅದನ್ನು ಕನ್‌ಸ್ಟ್ರಕ್ಟ್ ಮಾಡುತ್ತಾರೆಂದು ಹೇಳುತ್ತಾರೆ. ಇದನ್ನು ನಾನು ಒಪ್ಪುವುದಿಲ್ಲ. ರೈತರು ಅಲ್ಲಿ ಇದ್ದಾರೆ ಅಷ್ಟೆ. ಸರ್ಕಾರದವರಿಗೆ ಅಲ್ಲಿ ನೀರು ಇದೆ, ಡ್ಯಾಮ್ ಕಟ್ಟುವುದಕ್ಕೆ ಸೈಟ್ ಸಿಕ್ಕಿದೆ, ಆದ್ದರಿಂದ ಡ್ಯಾಮ್ ಕಟ್ಟುತ್ತಾರೆಯೇ ಹೊರತು ರೈತರಿಗಾಗಿ ಡ್ಯಾಮ್ ಕನ್‌ಸ್ಟ್ರಕ್ಟ್ ಮಾಡುತ್ತಾ ಇಲ್ಲ. ಈಗಾಗಲೇ ಕನ್‌ಸ್ಟ್ರಕ್ಟ್ ಮಾಡಿರುವಂಥವುಗಳು ಏನಿವೆ ಅಲ್ಲಿ ರೈತರಾಗಿ ಮಾನ್ಯ ಕುಸನೂರ್‌ರವರು ಇದ್ದಾರೆ ಅಥವಾ ಇನ್ನೊಬ್ಬರು ಇದ್ದಾರೆ ಎಂದು ಕನ್‌ಸ್ಟ್ರಕ್ಟ್ ಮಾಡಿಲ್ಲ. ಅಲ್ಲಿ ಡ್ಯಾಮ್ ಕನ್‌ಸ್ಟ್ರಕ್ಟ್ ಏತಕ್ಕೆ ಮಾಡಿದ್ದಾರೆ ಎಂದರೆ ನಮ್ಮ ರಾಜ್ಯದ ಹಿತದೃಷ್ಟಿಯಿಂದ ಅಲ್ಲಿ ಹೆಚ್ಚು ನೀರು ಸಿಕ್ಕಿದೆ, ಅಲ್ಲಿ ಡ್ಯಾಮ್ ಕಟ್ಟುವುದಕ್ಕೆ ಸರಿಯಾದ ಜಾಗವೂ ಸಿಕ್ಕಿದೆ. ಅಲ್ಲಿಯ ನೀರನ್ನು ಹಾಳು ಮಾಡುವುದು ಸರಿಯಲ್ಲ, ಈ ನೀರನ್ನು ಉಪಯೋಗಿಸಿಕೊಂಡರೆ ಹೆಚ್ಚಿನ ಒಂದು ಉತ್ಪತ್ತಿಯಾಗಿ ಈ ರಾಜ್ಯದಲ್ಲಿ ಸಮೃದ್ಧಿಯಾಗುವುದಕ್ಕೆ ಸಾಧ್ಯತೆ ಇದೆ ಎನ್ನುವ ದೃಷ್ಟಿಯಿಂದ ಡ್ಯಾಮ್ ಕಟ್ಟಿದ್ದಾರೆ ಆದರಿಂದ ರೈತರಿಗೆ ಯಾವ ಅನುಕೂಲಗಳನ್ನೂ ಕೊಡುತ್ತಾ ಇಲ್ಲ. ಅಲ್ಲಿ ರೈತರು ಇದ್ದಾರೆ ಅಷ್ಟೆ. ಡ್ಯಾಮ್ ಕಟ್ಟಿದಾಗ ರೈತರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತಾರೆ. ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಡ್ಯಾಮ್ ಕಟ್ಟುವಂಥಾದ್ದು ರೈತರಿಗೆ ಅನುಕೂಲವಾಗಲೇಬೇಕು, ರಾಜ್ಯದಲ್ಲಿ ಉತ್ಪತ್ತಿ ಜಾಸ್ತಿಯಾಗಬೇಕು ಎನ್ನತಕ್ಕಂಥ ದೃಷ್ಟಿಯಿಂದ. ಆದರೆ ರೈತರಿಗೆ ಆದರಿಂದ ಅನುಕೂಲವಾಗುತ್ತಾ ಇಲ್ಲ. ಈಗ ಬೆಟರ್‌ಮೆಂಟ್ ಲೆವಿಯನ್ನು ವಸೂಲು ಮಾಡುವುದು ಒಳ್ಳೆಯದು ಎಂದು ಹೇಳುತ್ತಾರೆ. ಶರಾವತಿ ಡ್ಯಾಮನ್ನು ಕಟ್ಟುವಾಗ ಅದಕ್ಕಾಗಿ ಜಾಸ್ತಿ ಹಣವನ್ನು ಖರ್ಚು ಮಾಡಿದಾಗ ಅಲ್ಲಿ ಕನ್‌ಸ್ಯೂಮರ್ಸ್ ಮೇಲೆ ಬೆಟರ್‌ಮೆಂಟ್ ಲೆವಿಯನ್ನು ಏತಕ್ಕೆ ಹಾಕಲಿಲ್ಲ? ಕನ್‌ಸ್ಯೂಮರ್ಸ್ ಮೇಲೆ ಬೆಟರ್‌ಮೆಂಟ್ ಲೆವಿ ಹಾಕಿಲ್ಲ. ಮಾನ್ಯ

ಸ್ನೇಹಿತರು ಭೂಮಿಯ ಬೆಲೆ ಹೆಚ್ಚಾಯಿತು ಎಂದು ಹೇಳಿದರು.

೫-೩೦ ಪಿ.ಎಂ.

ಅಧ್ಯಕ್ಷರು.—ಯಾವಾಗಲೂ ನೀರು ಇಲ್ಲದೇ ಇರತಕ್ಕ ಖುಷ್ಕಿ ಜಮೀನು ಏನಿದೆ ಅದರ ಬೆಲೆ ಕಡಿಮೆ ಇರುತ್ತದೆ. ನೀರು ಬಂದ ಮೇಲೆ ಅದರ ಬೆಲೆ ಜಾಸ್ತಿಯಾಗುತ್ತದೆ. So, the consolidated fund of the State has contributed for the escalation of the prices. The principle of levying the betterment levy was this.

ಶ್ರೀ ಎಂ. ಚಂದ್ರಶೇಖರ್.—ಜಮೀನನ್ನು ಮಾರಿಕೊಳ್ಳುವ ಹಾಗಿದ್ದರೆ ಇದು ಸರಿ. ರೈತ ಜಮೀನನ್ನು ಮಾರಿಕೊಳ್ಳುವುದಿಲ್ಲ, ಉತ್ಪತ್ತಿ ಮಾಡಿ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸುತ್ತಾನೆ.

ಅಧ್ಯಕ್ಷರು.—ಮೊದಲು ಅದಕ್ಕೆ ಒಳಗಾದವರು ನಾವು, ಹಳೇ ಮೈಸೂರಿನವರು. ಆಗ ಎಕರೆಗೆ ೨೫೦ ರೂಪಾಯಿ ಇತ್ತು; ಅದು ಕೆ.ಆರ್. ಸಾಗರ, ವಾಣಿವಿಲಾಸಸಾಗರ ಕಟ್ಟುವ ಕಾಲಕ್ಕೆ. ನಂತರ ಇನ್ನೂರು, ಇನ್ನೂರು ರೂಪಾಯಿ ಹೆಚ್ಚುತ್ತಾ ಬಂತು. But the principle involved in levying the betterment levy was that the supply of water has contributed for the escalation of the value of the land and for that escalation of the value the State has contributed. Therefore, for the State, the beneficiary will have to contribute...

ಶ್ರೀ ಎಂ. ಚಂದ್ರಶೇಖರ್.—ಬೆಟರ್‌ಮೆಂಟ್ ಲೆವಿ ಹಾಕದೆ ಸಂಪತ್ತು ಹೆಚ್ಚಾಗಿದೆ. ವರ್ಷೇ ವರ್ಷೇ ದೇಶದ ಸಂಪತ್ತು ವೃದ್ಧಿಯಾಗುತ್ತಿದೆ.

ಅಧ್ಯಕ್ಷರು.—ದಾವಣಗೆರೆಯಲ್ಲಿ ಭದ್ರ ನದಿ ಬಂದಿದೆ. ಅಲ್ಲಿ ಮೊದಲು ಎಕರೆಗೆ ೩-೪ ಸಾವಿರ ರೂಪಾಯಿ ಇತ್ತು. ಇವತ್ತು ೨೫ ಸಾವಿರ ರೂಪಾಯಿ ಆಗಿದೆ. Anyway, let us not go to that. That is a different aspect.

ಶ್ರೀ ವಿ. ಮಾಸಿಯಪ್ಪ.—ಬೆಟರ್‌ಮೆಂಟ್ ಲೆವಿ ವಜಾ ಮಾಡಿರುವಾಗ ಅದರ ಮೇಲೆ ವಾದ ಮಾಡುವುದು ಏನಿದೆ.

ಅಧ್ಯಕ್ಷರು.—ಬೆಟರ್‌ಮೆಂಟ್ ಲೆವಿ ವಜಾ ಆಗಿದೆ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಜಮೀನಿನ ವ್ಯಾಲ್ಯು ಹೆಚ್ಚಾಗುತ್ತದೆ ಎಂದು ಮಾನ್ಯ ಸ್ನೇಹಿತರು ಹೇಳಿದರು.

ಅಧ್ಯಕ್ಷರು.—That was the principle involved in it.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ರೂರಲ್ ಏರಿಯಾ ರೈತರ ಮೇಲೆ ಈ ಪ್ರಿನ್ಸಿಪಲ್ ಅಪ್ಲೈ ಆಗುತ್ತದೆ. ಬೆಂಗಳೂರಿನಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವುದರಿಂದ ಇಲ್ಲಿಯ ವ್ಯಾಲ್ಯು ಹೆಚ್ಚಾಗಿದೆ.

ಅಧ್ಯಕ್ಷರು.—ಎಲ್ಲಿ ೮-೧೦ ಇಂಚು ಮಳೆ ಬರತಕ್ಕ ಪ್ರದೇಶವಿದೆ, ಅಲ್ಲಿ ಬಡತನದಲ್ಲಿರತಕ್ಕವರಿಗೆ ಸಾಲ ಕೊಟ್ಟು ಬಾವಿ ತೆಗೆದು ಅವರು ವ್ಯವಸಾಯ ಮಾಡುತ್ತಾರೆ. He is individually a debtor to the Land Development Bank or some other agency. This man need not pay anything whereas that man becomes a debtor and he has to pay for a period of 20 to 25 years.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಇದು ಸರಿ. ಖುಷ್ಕಿ ಜಮೀನಿನಲ್ಲಿರತಕ್ಕವರು ಏನು ಸಾಲದಿಂದ ಮುಳುಗಿದ್ದಾರೆ ಅವರಿಗೂ ಈ ಒಂದು ಅನುಕೂಲ ಮಾಡಿಕೊಡಬೇಕು ಎನ್ನುವುದು. ಅವನಿಗೆ ಕೊಟ್ಟಿದ್ದೀರಿ, ಇವನಿಗೂ ಕೊಡಿ, ಖುಷ್ಕಿ ಜಮೀನಿನಲ್ಲಿರುವವನಿಗೂ ಕೊಡಿ ಎನ್ನುವುದು ಡಿಮ್ಯಾಂಡ್.

ಒಬ್ಬ ಸದಸ್ಯರು.—ಬಾಧಾದ ಅನುಭವ ತಮಗೂ ಆಗಿದೆ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಅಸೆಂಬ್ಲಿ ಇದ್ದುದರಿಂದ ಇಷ್ಟು ಬೇಗ ಮಾಡಿದ್ದು. ಅದಲ್ಲ ಪ್ರಶ್ನೆ. ಜಮೀನಿನ ಬೆಲೆ ಏರುತ್ತದೆ ಎನ್ನುವ ವಾದ ಏನಿದೆ...

SRI V.V. PATTAR.—You were also part of the Government which levied the betterment levy. Why did you not make any objection ?

SRI B. SUBBAIAH SHETTY.—We have made objection. But you do not know it. ಸ್ವಾಮಿ, ಅವರಿಗೆ ವಿಚಾರ ಗೊತ್ತಿಲ್ಲ ಎಂದು ಕಾಣುತ್ತದೆ, ಆ ವಿಚಾರ ಮಾತ ನಾಡುವುದು ಬೇಡ. ಮಂಗಳೂರಿನಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಆದುದರಿಂದ ಮಂಗಳೂರಿನಲ್ಲಿ ಪ್ರೈಸ್ ಜಾಸ್ತಿಯಾಗಿದೆ. ಬೆಂಗಳೂರಿನಲ್ಲಿ ಸಾವಿರಾರು ಕೋಟಿ ರೂಪಾಯಿ ಗಳನ್ನು ಖರ್ಚು ಮಾಡಿದ್ದರಿಂದ ಬೆಂಗಳೂರಿನಲ್ಲಿಯೂ ಬೆಲೆ ಜಾಸ್ತಿಯಾಗಿದೆ. ಇಲ್ಲಿ ಯಾವ ಬೆಟರ್‌ಮೆಂಟ್ ಲೆವಿನೂ ಹಾಕಿಲ್ಲ. ಈ ತತ್ವವನ್ನು ನಾವು ರೈತರ ಮೇಲೆ ಹೇರುತ್ತೇವೆಯೇ ಹೊರತು ಪೇಟೆ ಪಟ್ಟಣ ಗಳಲ್ಲಿದ್ದವರ ಮೇಲೆ ಇದನ್ನು ಎಂದೂ ಹಾಕಿಲ್ಲ. ಈ ಬೆಟರ್‌ಮೆಂಟ್ ಲೆವಿಯ ವಾದ ಏನಿದೆ ಇದು ಖಂಡಿತವಾಗಿಯೂ ಸರಿಯಾದಂಥ ವಾದವಲ್ಲ. ನಾವು ಏನು ಸೋಷಿಯಲ್ ಕ್ಯಾಪಿಟಲ್ ಕ್ರಿಯೇಟ್‌ಮಾಡು ವಂಥ ಕೆಲಸ ಮಾಡುತ್ತಿದ್ದೇವೆ ಅದನ್ನು ರಾಜ್ಯದ ಹಿತದೃಷ್ಟಿಯಿಂದ ಮಾಡುತ್ತಿದ್ದೇವೆ. ಶರಾವತಿಯಲ್ಲಿ ಎಲೆಕ್ಟ್ರಿಸಿಟಿ ಪ್ರಾಜೆಕ್ಟ್ ಮಾಡಿದ್ದೇವೆ, ಯಾವ ಇಂಡಸ್ಟ್ರಿ ಮೇಲೆ ಬೆಟರ್‌ಮೆಂಟ್ ಲೆವಿ ಹಾಕಿದ್ದೀರಿ ; ಯಾವ ಇಂಡಸ್ಟ್ರಿ ಮೇಲೆಯೂ ಬೆಟರ್‌ಮೆಂಟ್ ಲೆವಿ ಹಾಕಿಲ್ಲ. ರೈತರ ಮೇಲೆ ಹಾಕಬೇಕೇ ?

ಇನ್ನೊಂದು ವಿಚಾರವೇನೆಂದರೆ, ಕರಾವಳಿ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ನಮ್ಮಲ್ಲಿ ಕರಾವಳಿಯಲ್ಲಿ ಮೀನುಗಾರರಿದ್ದಾರೆ, ಇವರು ರೈತರ ಹಾಗೆ ; ಅವರೂ ರೈತರೇ. ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಕರಾವಳಿ ಪ್ರದೇಶಕ್ಕೆ ಹೋದಾಗ ೧೪ ಲಕ್ಷ ರೂಪಾಯಿಗಳ ಸಾಲ ಮನ್ನಾ ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದರ ಬಗ್ಗೆ ನಾನು ತಿಳಿದುಕೊಂಡಿರತಕ್ಕಂಥಾದ್ದು ಏನೆಂದರೆ, ನಮ್ಮಲ್ಲಿ ಎರಡು ನಮೂನೆಯ ಮೀನುಗಾರರಿದ್ದಾರೆ. ಯಾಂತ್ರಿಕ ದೋಣಿ ನಡೆಸತಕ್ಕ ಮೀನುಗಾರರು ಮತ್ತು ಸಾಂಪ್ರ ದಾಯಿಕ ರಂಪಣಿ ಮೀನುಗಾರರು ಎಂದು ಎರಡು ನಮೂನೆಯ ಮೀನುಗಾರರಿದ್ದಾರೆ. ಮೊದಲು ೨೮ ಲಕ್ಷ ರೂಪಾಯಿಗಳ ಸಾಲ ಇತ್ತು. ಅದರಲ್ಲಿ ಅವರು ೧೪ ಲಕ್ಷ ರೂಪಾಯಿಗಳ ಸಾಲವನ್ನು ಮರುಪಾವತಿ ಮಾಡಿದ್ದಾರೆ. ಇದರಲ್ಲಿ ಹೆಚ್ಚಿನ ಭಾಗ ಅಂದರೆ ೯೦ ಪರ್ಸೆಂಟ್ ಸಾಂಪ್ರದಾಯಿಕ ಮೀನುಗಾರರು ; ಇವರು ಸಣ್ಣ ಮೀನುಗಾರರು. ಇವರು ಮರುಪಾವತಿ ಮಾಡಿದ್ದಾರೆ. ಬಾಕಿಯುವರು ಮರುಪಾವತಿ ಮಾಡಿಲ್ಲ, ಅವರು ಬುದ್ಧಿವಂತರು. ಈಗ ಸಾಲ ಮನ್ನಾ ಮಾಡಿದೆ ಎಂದು ಹೇಳುವಾಗ ಸಾಂಪ್ರದಾಯಿಕ ಮೀನುಗಾರರಿಗೆ ಆದರಿಂದ ಏನೂ ಲಾಭ ಸಿಕ್ಕಿಲ್ಲ. ಬಾಕಿಯುವರಿಗೆ ಮಾತ್ರ ಲಾಭ ಸಿಕ್ಕಿದೆ. ನಮ್ಮ ಜಿಲ್ಲೆಯಲ್ಲಿ ೫೨ ರಂಪಣಿಗಳಿವೆ. ಇದು ಕೋಆಪರೇಷನ್ ಫಿಷಿಂಗ್ ಇದ್ದಹಾಗೆ, ಕೋಆಪರೇಟೀವ್ ಪದ್ಧತಿ ಯಲ್ಲಿ ಬಂದಿದ್ದು. ಎಷ್ಟೋ ಕುಟುಂಬಗಳು ರಂಪಣಿಯನ್ನು ಅವಲಂಬಿಸಿಕೊಂಡಿವೆ. ಕಳೆದ ಒಂದು ಸೀಸನ್‌ನಲ್ಲಿ ಅಂದರೆ ನಾಲ್ಕೈದು ತಿಂಗಳಿಗೆ ಒಂದೊಂದು ಫ್ಯಾಮಿಲಿಗೆ ಸಿಕ್ಕಿದ್ದು ೩೦೦ ರೂಪಾಯಿ ಎಂದು ತಿಳಿದುಬಂದಿದೆ. ಇಡೀ ಸೀಸನ್‌ಗೆ ಒಂದು ಫ್ಯಾಮಿಲಿಗೆ ೩೦೦–೩೫೦ ರೂಪಾಯಿಗಿಂತ ಹೆಚ್ಚಿಗೆ ಸಿಕ್ಕಿಲ್ಲ. ಇಂಥಾ ಒಂದು ಶೋಚನೀಯ ಸ್ಥಿತಿಯಲ್ಲಿ ನಮ್ಮ ಸಾಂಪ್ರದಾಯಿಕ ಮೀನುಗಾರರಿದ್ದಾರೆ. ಅವರೇ ಹೆಚ್ಚಾಗಿ ಇರುವಂಥಾದ್ದು. ಇದನ್ನು ಸರ್ಕಾರ ಗಮನಿಸಿ ಸಾಂಪ್ರದಾಯಿಕ ಮೀನುಗಾರರ ಕುಟುಂಬಗಳಿಗೆ ತಕ್ಷಣ ಒಂದು ಪರಿಹಾರವನ್ನು ಕೊಡುವಂಥಾದ್ದು ಬಹಳಷ್ಟು ಅಗತ್ಯವಿದೆ. ಈ ಒಂದು ದಿಶೆಯಲ್ಲಿ ಕಡಿಮೆ ಎಂದರೆ ೫೦೦ ರೂಪಾಯಿಯಾದರೂ ಒರದು ಫ್ಯಾಮಿಲಿಗೆ ಕೊಡಬೇಕು ಎಂದು ನಾನು ಸರ್ಕಾರ ವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸಾಂಪ್ರದಾಯ ಮೀನುಗಾರರಿಗೆ ಸರ್ಕಾರದವರು ಸಬ್ಸಿಡಿ ಕೊಟ್ಟು, ಸಾಲವನ್ನು ಕೊಟ್ಟು ೩೬ ಪರ್ಸೀನ್ ದೋಣಿಗಳನ್ನು ಒದಗಿಸಿ ಕೊಟ್ಟಿದೆ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—೩೬ ಪರ್ಸೀನ್ ದೋಣಿಗಳನ್ನು ಒದಗಿಸಿದರೆ ಅದರಲ್ಲಿ ಕೆಲಸ ಮಾಡು ವವರು ಎಷ್ಟು ಎಂದರೆ ೩೬ × ೩೦ ಅಷ್ಟೇನೇ. ಆದರೆ ಇನ್ನು ೫೨ ರಂಪಣಿ ದೋಣಿಗಳಲ್ಲಿ, ಸಣ್ಣ ಸಣ್ಣ ನಾಡ ದೋಣಿಗಳಲ್ಲಿ ಕೆಲಸ ಮಾಡುವವರು ಬಹಳಷ್ಟು ಜನರಿದ್ದಾರೆ, ಅವರ ಬಗ್ಗೆ ನಾನು ಹೇಳುತ್ತಿದ್ದೇನೆ. ಇವತ್ತು ರಂಪಣಿ ಬೆಲೆ ಏನಿದೆ ಅದನ್ನು ರಿಪೇರಿ ಮಾಡಿಸುವುದಕ್ಕೆ ಅವರಿಗೆ ಶಕ್ತಿ ಇಲ್ಲ, ಅಂಥವರಿಗೆ ೧೫ ಸಾವಿರ ರೂಪಾಯಿಗಳನ್ನು ಸುಲಭ ಬಡ್ಡಿದರದಲ್ಲಿಯೇ ಅಥವಾ ಸಬ್ಸಿಡಿ ರೂಪದಲ್ಲಿ ಕೊಟ್ಟರೆ ೫೨ × ೧೫

ಸಾವಿರ ಎಂದರೆ ಅದು ಏನು ಅಷ್ಟು ಜಾಸ್ತಿ ಅಮೌಂಟ್ ಅಲ್ಲ, ಮೀಗರ್ ಅಮೌಂಟ್ ಆಗುತ್ತದೆ. ಆದುದರಿಂದ ಸರ್ಕಾರ ಇದರ ಕಡೆಗೆ ಸಹ ಗಮನ ಕೊಡಬೇಕೆಂದು ಹೇಳಬಯಸುತ್ತೇನೆ. ಮತ್ತೆ ನಮ್ಮ ಕಾರ್ಮಿಕ ರೈತರ ಡಿಮ್ಯಾಂಡ್ ಏನಿದೆ ಅದರಲ್ಲಿ ವಯಸ್ಸಾದ ಮೀನುಗಾರರಿಗೂ ಸಹ ವೃದ್ಧಾಪ್ಯ ವೇತನವನ್ನು ಕೊಡಬೇಕೆಂದಿದೆ. ಆದುದರಿಂದ ಅರ್ಹರಾದವರಿಗೆ ವೃದ್ಧಾಪ್ಯ ವೇತನವನ್ನು ಕೊಡಬೇಕೆಂದು ಒತ್ತಾಯಪಡಿಸುತ್ತೇನೆ.

ಇನ್ನು ಮೊನ್ನೆ ಕನ್ನಡಪ್ರಭಾ ಪತ್ರಿಕೆಯಲ್ಲಿಯೋ ಅಥವಾ ಪ್ರಜಾವಾಣಿ ಪತ್ರಿಕೆಯಲ್ಲಿ ಏನೋ ಒಂದು ವಿಚಾರ ಬಂದಿದೆ. ಅದು ಏನೆಂದರೆ ದೇವದಾಸಿ ಪದ್ಧತಿಯ ಬಗ್ಗೆ ಅದನ್ನು ಓದಿ ನನಗೆ ಕಣ್ಣೀರು ಬಂದು ಹೋಯಿತು. ಅದು ಏನು ಎಂದರೆ ಎಲ್ಲಮ್ಮನ ಗುಡ್ಡ ಅಂತ ಹೇಳಿ ಬೆಳಗಾಂನ ಹತ್ತಿರವಿದೆಯಂತೆ. ಅವರು ವರದಿ ಕೊಟ್ಟಿರುವ ಪ್ರಕಾರ ಅಂಥವರು ಬಹಳಷ್ಟು ಜನ ಹಿಂದುಳಿದಂಥ ವರ್ಗಕ್ಕೆ ಸೇರಿದವರು ಇದ್ದಾರೆ ಎನ್ನುವ ಸಂಗತಿ ಬಂದಿದೆ.

MR. SPEAKER.—According to SITA Act the woman is the acused. The man is not the acused. None of us have championed the cause of woman.

SRI A. LAKSHMISAGAR.—This lacuna has been pointed out by various writers and commented.

MR. SPEAKER.—Why only writers? We the representatives...

SRI A. LAKSHMISAGAR.—It is a Central Act.

MR. SPEAKER.—You also know and I also know that when she comes to the Courts, the Magistrate first asks the question: Whether she is guil y of the offence.

SRI A. LAKSHMISAGAR.—But invariably the police brings both, including the people who are...

MR. SPEAKER.—Why defending this? Because we are men we should defend? is it? I am yet to see a man being arrested and brought there. It is only the ladies that have been arrested and they have been made to come there and the first question that is put is whether she has committed the offence.

SRI A. LAKSHMISAGAR.—As a matter of fact, the man also is, arrested.

MR. SPEAKER.—He should be the first offender; the lady should not be.

SRI A. LAKSHMISAGAR.—At least as an abettor.

MR. SPEAKER.—He is an offender. Why an abettor? He abets and he offends.

SRI B. SUBBAIAH SHETTY.—In a lighter vein, I can understand his feelings.

SRI A. LAKSHMISAGAR.—I have been championing. I was the first person. In fact, I placed my services at the disposal of a particular expert who wanted the factual data and also the legal position con-

cerning this point. I gave him all the details necessary. I pleaded with him about the crime under Suppression of Immoral Traffic in women and children where only a single party is made punishable and only an Assistant Commissioner of Police is the person who is specially empowered to carry on prosecution. The lucuna is that the main culprit is the man and he is left scot-free. This is the greatest lacuna that has been pointed out by various people. Unfortunately, the State Government cannot...because it is a Central Act. We may make strong recommendation to the Central Government.

SRI B. SUBBAIAH SHETTY.—I reciprocate the sentiments expressed by the Hon. Speaker. It is in a men dominated world that this happens. That should be definitely amended. ಆ ಪತ್ರಿಕೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಅದು ಏನೆಂದರೆ ೧೩ ವರ್ಷದ ಒಂದು ಮಗು ರಿಪೋರ್ಟರ ಹತ್ತಿರ ಬಂದು, ಸ್ವಾಮಿ, ನಾನು ಸೂಳೆ ನನಗೆ ಹಣ ಕೊಡಿ ಎಂದು ಕೇಳಿತು ಎಂದರೆ ಇದು ನಿಜವಾಗಿಯೂ ಕಣ್ಣೀರು ಬರಿಸುವಂಥ ವಿಚಾರವಾಗಿದೆ. ಈ ವಿಚಾರದಲ್ಲಿ ಸರ್ಕಾರ ಹೆಚ್ಚು ಗಮನವನ್ನು ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅದಕ್ಕೆ ನನ್ನದೊಂದು ಸೂಚನೆ, ಸಲಹೆ ಏನೆಂದರೆ ವಿಮೆನ್ ಅಂಡ್ ಚಿಲ್ಡ್ರನ್ ವೆಲ್‌ಫೇರ್ ಮಿನಿಸ್ಟರ್‌ರವರು ಇದಕ್ಕಾಗಿ ಒಂದು ಮಹಿಳೆಯರ ಕಮಿಟಿಯನ್ನು ಮಾಡಿ, ಅಲ್ಲಿಗೆಲ್ಲಾ ವಿಷಯವನ್ನು ಮತ್ತು ಹೆಚ್ಚಿನ ಮಾಹಿತಿ ಯನ್ನು ಸಂಗ್ರಹಿಸಲು ಕಳುಹಿಸಿ ಕೊಡಲಿ, ಇದೇ ರೀತಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕೂಡ ಇಂಥಾ ಒಂದು ರಾಕೆಟ್ಸ್‌ಗಳು ನಡೆಯುತ್ತಿದ್ದು, ಬೊಂಬಾಯಿ, ಮುಂತಾದ ಕಡೆಗಳಿಗೆಲ್ಲಾ ಸಾಗಿಸು ತ್ತಿದ್ದಾರೆ ಎನ್ನುವುದು ನನ್ನ ಗಮನಕ್ಕೂ ಬಂದಿದೆ. ಆದುದರಿಂದ ಇದೆಲ್ಲದರ ಬಗ್ಗೆ ಕೂಲಂಕಷವಾಗಿ ಅಧ್ಯಯನ ಮಾಡಿ ಅವರನ್ನು ಹೇಗೆ ರಿಹ್ಯಾಬಿಲಿಟೇಟ್ ಮಾಡಬಹುದು, ಹೇಗೆ ಇದನ್ನು ಪ್ರಿವೆಂಟ್ ಮಾಡ ಬಹುದು, ಯಾವ ರೀತಿಯಾಗಿ ತಡೆಗಟ್ಟಬಹುದು ಎನ್ನುವ ಬಗ್ಗೆ ಯೋಚನೆ ಮಾಡಿ ಸೂಕ್ತವಾದ ಕಾರ್ಯ ಕ್ರಮವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ನಮ್ಮ ಮುಖ್ಯಮಂತ್ರಿಗಳವರು ಕಾಸರ ಗೋಡಿನ ಬಗ್ಗೆ ಬಹಳಷ್ಟು ಸ್ಟೇಟ್ ಮೆಂಟ್‌ಗಳನ್ನು ಮಾಡಿದ್ದಾರೆ. ಸಂತೋಷ. ಅವರ ಹೇಳಿಕೆಗಳೆಲ್ಲಾ ಸ್ಟೇಟ್‌ಮೆಂಟಿನಲ್ಲಿ ಹೋಯಿತೋ ಅಥವಾ ಇನ್ನು ಏನಾದರೂ ಕಾರ್ಯಕ್ರಮ ಕೈಗೊಂಡಿದ್ದಾರೋ ಎಂಬುದನ್ನು ತಿಳಿಸಬೇಕಾಗುತ್ತದೆ. ಸುಪ್ರೀಂ ಕೋರ್ಟಿಗೂ ಹೋಗುತ್ತೇವೆಂದು ತಿಳಿಸಿದ್ದಾರೆ, ಹಾಗಿದ್ದರೆ ಈ ವಿಷಯದಲ್ಲಿ ಕೇಂದ್ರ ಸರ್ಕಾರದ ಮೇಲೆ ಯಾವ ರೀತಿಯ ಒತ್ತಡವನ್ನು ಬೀರುತ್ತಿದ್ದಾರೆ ಎಂಬುದನ್ನು ಸಹ ಈ ಸದನಕ್ಕೆ ತಿಳಿಸ ಬೇಕಾಗುತ್ತದೆಂದು ತಮ್ಮ ಮುಖಾಂತರ ಒತ್ತಾಯ ಪಡಿಸುತ್ತೇನೆ. ರಾಜ್ಯಪಾಲರ ಭಾಷಣವೇನಿದೆ ಅದು ಬರೀ ಪೊಳ್ಳು ಮಾತುಗಳಿಂದ ಸೃಷ್ಟಿಯಾದಂಥ ಭಾಷಣವಾಗಿದೆ ಮತ್ತು ಲಾ ಅಂಡ್ ಆರ್ಡರ್ ಪರಿಸ್ಥಿತಿ ಕೂಡ ಇವತ್ತು ಬಹಳ ಡೀಲ್ ಆಗಿದೆ, ಇವತ್ತು ನಮ್ಮ ರಾಜ್ಯದಲ್ಲಿರುವ ವೀಕರ್ ಸೆಕ್ಷನ್ಸ್ ಏನಿದ್ದಾರೆ ಅವರಿಗೆ ಅಭದ್ರತೆಯ ವಾತಾವರಣ ಕಂಡು ಭಯ ಭೀತರಾಗಿದ್ದಾರೆಂದು ಹೇಳಿ ಇನ್ನು ಹೆಚ್ಚಿನ ಕಾಲಾವಕಾಶವಿಲ್ಲದೇ ಇರುವುದರಿಂದ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶ್ರೀ ಎ. ಲಕ್ಷ್ಮೀಸಾಗರ್ ರವರೇ ನಿಮ್ಮ ಹೆಸರು ಕಾಂಗ್ರೆಸ್ (ಯು) ನಲ್ಲಿಯೂ ಇದೆ ಮತ್ತು ಜನತಾ ಪಕ್ಷದವರ ಪಟ್ಟಿಯಲ್ಲಿಯೂ ಇದೆ. ಆದುದರಿಂದ ಯಾವ ಪಕ್ಷದಲ್ಲಿ ತಾವು ಇದ್ದೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ನಾನು ಜನತಾ ಪಕ್ಷದಲ್ಲಿದ್ದೇನೆ.

ಅಧ್ಯಕ್ಷರು.—ಸರಿ ತಾವು ಭಾಷಣ ಪ್ರಾರಂಭ ಮಾಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ದಯವಿಟ್ಟು ನಾನು ನಾಳೆಯ ದಿವಸ ಭಾಷಣ ಮಾಡುತ್ತೇನೆ.

ಅಧ್ಯಕ್ಷರು.—ಶ್ರೀ ಕೆ. ಹೆಚ್. ಹನುಮೇಗೌಡ ನೀವು ನಿಮ್ಮ ಭಾಷಣವನ್ನು ಶುರು ಮಾಡಿ.

ಶ್ರೀ ಕೆ. ಹೆಚ್. ಹನುಮೇಗೌಡ.—ಇಲ್ಲ ಅಧ್ಯಕ್ಷರೇ ನಾನು ನಾಳೆ ಮಾತನಾಡುತ್ತೇನೆ. ನಾಳೆಯ ದಿವಸ ನನ್ನ ಹೆಸರು ಬರುತ್ತದೆಂದು ಹೇಳಿದ್ದರು ಅದಕ್ಕೆ ನಾನು ತಯಾರಾಗಿ ಬಂದಿಲ್ಲ.

ಅಧ್ಯಕ್ಷರು.—ಹೀಗೆ ಹೇಳಿದರೆ ಹೇಗೆ, ನೆಕ್ಸ್‌ಟ್ ಶ್ರೀ ಡಿ. ಟಿ. ರಾಮು...

ಶ್ರೀ ಡಿ. ಟಿ. ರಾಮು.—ನಾಳೆ ಮಾತನಾಡುತ್ತೇನೆ.

(ಸಭೆಯಲ್ಲಿ ನಗು)

MR. SPEAKER.—I am very sorry: I am really sorry. I am not going to permit them to speak tomorrow. Those who do not want to speak now, I am not going to permit them. What is the use in giving names to the Whips and not taking part in the proceedings?

† ಶ್ರೀ ಡಿ. ಟಿ. ರಾಮು (ಚನ್ನಪಟ್ಟಣ).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಮಾಡಿರತಕ್ಕ ಭಾಷಣವನ್ನು ನಾನು ಸ್ವಾಗತ ಮಾಡುತ್ತಾ, ಕೆಲವು ಸಲಹೆಗಳನ್ನು ಮತ್ತು ಸೂಚನೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮೊಟ್ಟಮೊದಲನೆಯದಾಗಿ, ಕಳೆದ ವರ್ಷ ದುರಾದೃಷ್ಟವಶಾತ್ ಈ ರಾಜ್ಯ ಪ್ರಕೃತಿಯ ವಿಕೋಪಕ್ಕೆ ಸಿಕ್ಕಿ ಕೆಲವು ಕಡೆ ಅನಾವೃಷ್ಟಿ ಮತ್ತೆ ಕೆಲವು ಕಡೆ ಅತಿವೃಷ್ಟಿ ಪ್ರಸಂಗಗಳನ್ನು ಎದುರಿಸಬೇಕಾಗಿ ಬಂತು. ಅತಿವೃಷ್ಟಿ ಆದಾಗ ಸರ್ಕಾರ ದಕ್ಷತೆಯಿಂದ ಅದನ್ನು ಎದುರಿಸಿತು. ಆ ಸಂದರ್ಭದಲ್ಲಿ, ಸಂಕಷ್ಟಗಳಿಗೆ ಸಿಕ್ಕಿದಂತಹ ಅನೇಕ ಜನರನ್ನು ಉಳಿಸಿ ಒಂದು ದಾಖಲೆಯನ್ನು ನಮ್ಮ ಸರ್ಕಾರ ಸ್ಥಾಪಿಸಿತು. ಎರಡನೆಯದಾಗಿ, ಇವತ್ತಿನ ದಿವಸ ಈ ರಾಜ್ಯ ಕ್ಷಾಮದ ದವಡೆಗೆ ಸಿಕ್ಕಿದೆ. ಎಲ್ಲಿ ನೋಡಿದರೂ ಕ್ಷಾಮ ಜನರಿಗೆ ಕುಡಿಯುವುದಕ್ಕೆ ನೀರಿಲ್ಲ, ಆಹಾರ ಇಲ್ಲ ದನಕರುಗಳಿಗೆ ಹುಲ್ಲು ಇಲ್ಲ ಇಂಥ ಪರಿಸ್ಥಿತಿಯನ್ನು ನಮ್ಮ ರಾಜ್ಯ ಎದುರಿಸುತ್ತಿದೆ. ಆದಕಾರಣದಿಂದಲೇ, ಕೇಂದ್ರ ಸರ್ಕಾರದ ಒಂದು ತಂಡವನ್ನು ಕರೆಸಿ ಅದಕ್ಕೆ ಈ ರಾಜ್ಯದ ಪರಿಸ್ಥಿತಿಯನ್ನು ತೋರಿಸಿ, ಅದಕ್ಕಾಗಿ ಸುಮಾರು ೨೨೫ ಕೋಟಿ ರೂಪಾಯಿಗಳನ್ನು ಕೊಡಬೇಕೆಂಬ ಒಂದು ಕಳಕಳಿಯ ಮನವಿಯನ್ನು ನಮ್ಮ ಸರ್ಕಾರ ಸಲ್ಲಿಸಲಾಗಿ, ಈಗಾಗಲೇ ಅದು ೫ ಕೋಟಿ ರೂಪಾಯಿಗಳಷ್ಟು ಸಹಾಯ ಧನವನ್ನು ಬಿಡುಗಡ ಮಾಡಿದೆ. ಇದು, ಬಂದಂತಹ ಸಮಸ್ಯೆಗಳನ್ನು ಬಹಳ ಜಾಗ್ರತೆಯಾಗಿ ದಿಟ್ಟತನದಿಂದ ಸರ್ಕಾರ ಎದುರಿಸುತ್ತಿದೆ ಎನ್ನತಕ್ಕದ್ದರ ದ್ಯೋತಕ ಎಂಬುದು ನನ್ನ ಭಾವನೆ. ಇಷ್ಟು ಹೇಳುತ್ತಾ, ಇವತ್ತಿನ ದಿವಸ ನಮ್ಮ ಸರ್ಕಾರ ಈ ಕ್ಷಾಮ-ಡಾಮರಗಳಿಗೆ ಸಿಕ್ಕಿರತಕ್ಕ ತಾಲ್ಲೂಕುಗಳಿಗೆ ಬಹು ಬೇಗನೆ ಇನ್ನೂ ಹೆಚ್ಚಿನ ಸಹಾಯ ಹಸ್ತವನ್ನು ನೀಡಬೇಕು. ಆ ಜನಗಳಿಗೆ ಮತ್ತು ದನಗಳಿಗೆ ಮೊದಲು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಕುಡಿಯುವ ನೀರು ಅಂದ ತಕ್ಷಣ ಸರ್ಕಾರ ಸಾಕಷ್ಟು ಹಣವನ್ನು ನೀಡಿ ಪ್ರತಿಯೊಂದು ಹಳ್ಳಿಗಳಲ್ಲೂ ಕೊಳವೆ ಬಾವಿಗಳನ್ನು ತೋಡಿಸುತ್ತಿದೆ. ಯಾವುದೇ ಸರ್ಕಾರವಾಗಲೀ, ಅದರ ಪ್ರಮುಖ ನೈತಿಕ ಕರ್ತವ್ಯ ಎಂದರೆ ತನ್ನ ಜನತೆಗೆ ಸಾಕಷ್ಟು ಒಳ್ಳೆಯ ಆರೋಗ್ಯಕರ ನೀರನ್ನು ಕೊಡತಕ್ಕದು ಎಂದು ನನ್ನ ಮನೋಭಾವನೆ. ಆದಕಾರಣದಿಂದ ಪ್ರತಿಯೊಂದು ಊರಿಗೂ ಕೊಳವೆ ಬಾವಿಗಳನ್ನು ತೋಡಿಸತಕ್ಕ ಒಂದು ಪ್ರಾಮಾಣಿಕ ಪ್ರಯತ್ನವನ್ನು ನಮ್ಮ ಸರ್ಕಾರ ಮಾಡುತ್ತಿದೆ. ಇದರ ಬಗ್ಗೆ ಸಾಕಷ್ಟು ಹಣವನ್ನು ಸರ್ಕಾರ ಖರ್ಚು ಮಾಡಿದೆ. ಆದರೂ ಸಹ ಒಂದೊಂದು ತಾಲ್ಲೂಕಿನಲ್ಲಿ ಇನ್ನೂ ೭೦-೮೦ ಗ್ರಾಮಗಳಿಗೆ ಕುಡಿಯುವ ನೀರಿನ ಬಾವಿಗಳು ಇಲ್ಲ, ಉದಾಹರಣೆಗೆ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿ ಸುಮಾರು ೭೦-೮೦ ಗ್ರಾಮಗಳಿಗೆ ಕೊಳವೆ ಬಾವಿಗಳನ್ನು ತೋಡಿಸಿಲ್ಲ. ಆದಕಾರಣ, ಕೊನೇ ಪಕ್ಷ ೪-೫ ಕೋಟಿ ರೂಪಾಯಿಗಳನ್ನಾದರೂ ಒದಗಿಸಿ ಕುಡಿಯುವ ನೀರಿನ ಸರಬರಾಜಿನ ವ್ಯವಸ್ಥೆಗೆ ಆದ್ಯತೆ ನೀಡಿದರೆ ಬಹುಶಃ ರಾಜ್ಯದ ಎಲ್ಲ ಹಳ್ಳಿಗಳಿಗೂ ನೀರು ಸರಬರಾಜು ಮಾಡಲು ಸಾಧ್ಯವಾಗುತ್ತದೆ. ಇದರಿಂದ ಜನತೆಗೆ ಸರ್ಕಾರ ತನ್ನ ಪ್ರಮುಖ ಕರ್ತವ್ಯವನ್ನು ಮಾಡಿದಂತಾಗುತ್ತದೆಂದು ನನ್ನ ಭಾವನೆ. ಕಳೆದ ವರ್ಷ ನಮ್ಮ ಗುಂಡೂರಾಯರ ಸರ್ಕಾರ ಬಂದಮೇಲೆ ಬಹಳಷ್ಟು ಒಳ್ಳೆಯ ಕೆಲಸಗಳನ್ನು ಮಾಡಿದೆ.

ಕಡತಗಳ ವಿಲೇವಾರಿ ಬಗ್ಗೆ ಮಾನ್ಯ ಮಿತ್ರರೊಬ್ಬರು ಹೇಳಿದರು, ಕಡತಗಳ ವಿಲೇವಾರಿಯಿಂದ ಏನಾಯಿತು ಎಂದು. ಸಮಾಜವಾದಿ ಮಿತ್ರರಾದ ಮಾನ್ಯ ಜೆ. ಹೆಚ್. ಪಟೇಲರು ಮಾತನಾಡುತ್ತಾ ೨ ಲಕ್ಷ ಫೈಲುಗಳ ವಿಲೇವಾರಿ ಆದರೆ ಏನಾಯಿತು. ಜನಗಳಿಗೆ ಆಹಾರ ಸಿಕ್ಕಿತೆ, ಆಹಾರದ ಪರಿಸ್ಥಿತಿ ಉತ್ತಮವಾಯಿತೆ ಎಂದು ಕೇಳಿದರು. ಒಂದು ಅರ್ಜಿಯನ್ನು ಕೊಟ್ಟು ೬ ತಿಂಗಳು ಅಲ್ಲ, ೬ ವರ್ಷ ಗಳಾದರೂ ಅದು ಹೊರಗೆ ಬಾರದಿದ್ದಂತಹ ಸಂದರ್ಭದಲ್ಲಿ ಕೇವಲ ೬ ವಾರಗಳಲ್ಲಿ ವಿಲೇವಾರಿ ಆಗಬೇಕೆಂದು ಸೂಚನೆ ನೀಡಿ ಆಡಳಿತ ವ್ಯವಸ್ಥೆ ಚನ್ನಾಗಿ ನಡೆಯುವಂತೆ ಮಾಡಿದ್ದರಿಂದ ಒಳ್ಳೆಯದು ಆಗಲಿಲ್ಲವೆ ? ಆದರೂ ಸಹ, ಕಡತ ವಿಲೇವಾರಿ ಕಾರ್ಯಕ್ರಮದಿಂದ ಏನಾಯಿತು ಎಂಬ ಪ್ರಶ್ನೆಯನ್ನು ಎತ್ತುವುದಾದರೆ ನಮ್ಮ ಸಮಾಜವಾದಿ ಮಿತ್ರರ ತಲೆಯಲ್ಲಿ ಏನು ಇದೆಯೋ ಗೊತ್ತಾಗುವುದಿಲ್ಲ. ಎರಡನೆ ಯದಾಗಿ ವರ್ಗಾವರ್ಗಿಯ ಬಗ್ಗೆ ಸರ್ಕಾರ ದಿಟ್ಟ ನಿಲುವನ್ನು ತಾಳಿದೆ. ಅದು ಸ್ವಾಗತಾರ್ಹವಾದ ವಿಷಯ. ಅದರ ಬಗ್ಗೆ ಮಾನ್ಯ ಪಟೇಲರು ಮಾತನಾಡುತ್ತಾ, ಅದರಿಂದ ನಮಗೂ ಅನುಕೂಲವಾಗಿದೆ ಎಂದರು. ಬೆಳಿಗ್ಗೆ ಎದ್ದು ಯಾರನ್ನಾದರೂ ಕಂಡರೆ ಸಾಕು, ನನ್ನನ್ನು ಗುಲ್ಬರ್ಗಕ್ಕೆ ಹಾಕಿದ್ದಾರೆ, ನನ್ನನ್ನು ಬಿಜಾಪುರಕ್ಕೆ ಹಾಕಿದ್ದಾರೆ, ನನ್ನನ್ನು ಧಾರವಾಡಕ್ಕೆ ಹಾಕಿದ್ದಾರೆ; ಏನಾದರೂ ಮಾಡಿ ನಮ್ಮ ಸ್ಥಳಕ್ಕೆ ವರ್ಗ ಮಾಡಿಸಿಕೊಡಿ ಎಂದು ಕೇಳುವವರ ಸಂಖ್ಯೆ (ಕಾಟ) ಅಧಿಕವಾಗಿತ್ತು. ಹಾಗಾಗಿ, ಶಾಸಕರಾಗಿ ನಾವು ನಮ್ಮ ಕ್ಷೇತ್ರಕ್ಕೆ ನಿರ್ವಹಿಸತಕ್ಕ ಕಾರ್ಯಚ್ಯುತಿಯನ್ನು ಮಾಡಬೇಕಾಗಿತ್ತು. ಅದನ್ನು ಈಗ ನಾವು ತಪ್ಪಿಸಿಕೊಂಡಿದ್ದೇವೆ. ಇನ್ನೊಂದು ನಮ್ಮ ಸರ್ಕಾರ ಮಾಡಿರತಕ್ಕ ಸಾಧನೆ ಏನೆಂದರೆ, ಸರ್ಕಾರದ ಯಾವ ನೌಕರನೇ ಆಗಿರಲಿ, ಆತನನ್ನು ೫೫ ವರ್ಷಗಳಿಗಿಂತ ಹೆಚ್ಚು ಕಾಲ ಮುಂದುವರಿಸ ಬಾರದೆಂಬ ನಿರ್ಣಯವನ್ನು ಕೈಗೊಂಡಿತು. ಒಂದು ವೇಳೆ ಸರ್ಕಾರ ಈ ನಿರ್ಣಯವನ್ನು ಕೈಗೊಳ್ಳ ದಿದ್ದರೆ, ಇವತ್ತಿನ ದಿವಸ ನಮ್ಮ ದೇಶ ಏನು ಒಂದು ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿದೆ ಅದನ್ನು ಇನ್ನೂ ತೀವ್ರ ರೀತಿಯಲ್ಲಿ ಎದುರಿಸಬೇಕಾಗಿತ್ತು. ಇದರಿಂದ ಸಾರ್ವಜನಿಕರಿಗೆ ತೊಂದರೆ ಯಾಗುವುದರ ಜೊತೆಗೆ ಸರ್ಕಾರ ಸಹ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆಂಬ ಉದ್ದೇಶದಿಂದ ಪ್ರತಿ ಯೊಬ್ಬ ಸರ್ಕಾರೀ ನೌಕರನೂ ತನ್ನ ೫೫ನೇ ವಯಸ್ಸಿಗೆ ನಿವೃತ್ತನಾಗುವಂತೆ ಮಾಡಿತು. ನಂತರ, ಅವರ ಸೇವೆಯನ್ನು ವಿಸ್ತರಣೆ ಮಾಡತಕ್ಕ ಪರಿಸ್ಥಿತಿ ಇಲ್ಲ ಎಂದು ಘೋಷಿಸಿದ್ದು ಒಳ್ಳೆಯ ಯೋಜನೆ ಅನ್ನಿಸುತ್ತದೆ.

ಇನ್ನು ರೈತರ ವಿಚಾರವನ್ನು ತೆಗೆದುಕೊಂಡರೆ, ರೈತರ ಜಾಥಾ, ರೈತರ ಭವಣೆ ಎಂದು ಕರೆಯು ತ್ತೇವೆ. ಸ್ವಾತಂತ್ರ ಪೂರ್ವದಿಂದ ಇಲ್ಲಿಯವರೆಗೆ ಅಂದರೆ ೩-೪ ದಶಕಗಳ ಕಾಲದಿಂದ ರೈತ ಸಂಕಷ್ಟಕ್ಕೆ ಸಿಲುಕಿದ್ದಾನೆ. ಅವನ ಉತ್ಪನ್ನಕ್ಕೆ ಸಾಕಷ್ಟು ಬೆಲೆ ಸಿಕ್ಕುತ್ತಿಲ್ಲ. ಆದರೆ ಅದೃಷ್ಟವಶಾತ್ ನಮ್ಮ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಏನು ಬೆಲೆ ನೀಡುತ್ತದೆ ಅದಕ್ಕಿಂತ ಹೆಚ್ಚಿನ ಬೆಲೆಯನ್ನು ರೈತರ ಉತ್ಪನ್ನಗಳಿಗೆ ನೀಡತಕ್ಕ ಪ್ರಯತ್ನವನ್ನು ಮಾಡುತ್ತಿದೆ ಎಂದು ತಿಳಿಸುವುದಕ್ಕೆ ಸಂತೋಷವಾಗುತ್ತದೆ. ಜೊತೆಗೆ, ಇವತ್ತಿನ ದಿವಸ ಇದನ್ನು ಮಾನ್ಯ ಗುಂಡೂರಾಯರ ಸರ್ಕಾರ ಮಾಡುತ್ತಿದೆ ಎಂದು ಹೇಳುತ್ತೇನೆ. ಅವರೇನು ರೈತರ ಮಕ್ಕಳು ಅಲ್ಲ. ನನ್ನ ಹಾಗೆ ಅವರೂ ಕೂಡ ಉಪಾಧ್ಯಾಯರ ಮಕ್ಕಳು. ರೈತರ ಬಗ್ಗೆ ಅವರಿಗೆ ಇರತಕ್ಕ ಕಳಕಳಿಯನ್ನು ನೋಡಿದಾಗ ರೈತ ಮುಖ್ಯ ಮಂತ್ರಿಗಳಾಗಿದ್ದಾಗಲೂ ಸಹ ರೈತರಿಗೆ ಇಂಥ ಸವಲತ್ತುಗಳನ್ನು ಕೊಟ್ಟಿರಲಿಲ್ಲ, ರಿಯಾಯಿತಿಗಳನ್ನು ಕೊಟ್ಟಿರಲಿಲ್ಲವೆಂದು ತಮ್ಮ ಮೂಲಕ ಈ ಸದನಕ್ಕೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ ೧೦ ಎಕರೆಗಿಂತ ಕಡಿಮೆ ಇರತಕ್ಕ ಜಮೀನಿಗೆ ಕಂದಾಯ ಮಾಫಿ ಮಾಡಿರುವುದು, ಅಭಿವೃದ್ಧಿ ತೆರಿಗೆಯನ್ನು ಕಡಿಮೆ ಮಾಡಿರುವುದು, ನೀರಿನ ತೆರಿಗೆ ಯನ್ನು ಕಡಿಮೆ ಮಾಡಿರುವುದು ಇತ್ಯಾದಿ. ಆದರೆ ಇವತ್ತಿನ ದಿವಸ, ನಮ್ಮ ವಿರೋಧ ಪಕ್ಷದ ನಾಯಕರುಗಳು ಒಂದು ದೊಡ್ಡ ಜಾಥಾವನ್ನು ಲೀಡ್ ಮಾಡುತ್ತಿದ್ದಾರೆ. ಅಭಿವೃದ್ಧಿ ತೆರಿಗೆ ಹಾಕಿದ್ದು ನಮ್ಮ ಸರ್ಕಾರವೇನು ? ಕಂದಾಯವನ್ನು ಹೆಚ್ಚು ಮಾಡಿದ್ದು ನಮ್ಮ ಸರ್ಕಾರವೇನು ? ಬೆಟರ್ ಮೆಂಟ್ ಲೆವಿಯನ್ನು ನಾವು ಹಾಕಿದೆವೇನು ? ನಮ್ಮ ಸರ್ಕಾರ ಒಂದು ಪೈಸೆ ಕಂದಾಯವನ್ನು ಹೆಚ್ಚಿಸಲಿಲ್ಲ. ಆದರೂ ಸಹ ಏನಾಗುತ್ತಿದೆ ಎಂದರೆ, ರೈತರನ್ನು ಬಗ್ಗು ಬಡಿಯುತ್ತಿರುವ ಸರ್ಕಾರ ಎಂಬ ಅಪವಾದವನ್ನು (ಹೆಸರನ್ನು) ಹೊರೆಸುತ್ತಿದ್ದಾರೆ. ಆದಕಾರಣ, ನಾನು ಹೇಳುವುದು ಇಷ್ಟೆ : ನಾವು ರೈತರಿಗೆ ಏನೂ ಕೆಡಕು ಮಾಡಿಲ್ಲ. ನಮ್ಮ ಸರ್ಕಾರ ರೈತರಿಗೆ ಒಳ್ಳೆಯದನ್ನೇ ಮಾಡಿದೆ. ಏನೇನು

ಒಳ್ಳೆಯದನ್ನು ಮಾಡಿದ್ದೇವೆಂದರೆ, ೧೦ ಎಕರೆಗಿಂತ ಕಡಿಮೆ ಇರತಕ್ಕ ಭೂಮಿಗೆ ಕಂದಾಯವನ್ನು ತೆಗೆದಿದ್ದೇವೆ; ಅಭಿವೃದ್ಧಿ ತೆರಿಗೆಯನ್ನು ಕಡಿಮೆ ಮಾಡಿದ್ದೇವೆ; ಜೊತೆಗೆ ರೈತನಿಗೆ ಅತಿ ಮುಖ್ಯವಾಗಿ ಬೇಕಾಗಿರತಕ್ಕ ವಿದ್ಯುತ್ ದರವನ್ನು ಕಡಿಮೆ ಮಾಡಿದ್ದೇವೆ. ಹಿಂದೆ ಒಬ್ಬ ರೈತ ೫ ಹೆಚ್.ಪಿ. ಮೋಟಾರ್ ಇಟ್ಟುಕೊಂಡು ನೀರಾವರಿ ಬೇಸಾಯ ಮಾಡುತ್ತಿದ್ದರೆ ಅವನು ಒಂದು ವರ್ಷಕ್ಕೆ ಸುಮಾರು ಒಂದು ಸಾವಿರ ರೂಪಾಯಿಗಳನ್ನು ಕಟ್ಟಬೇಕಾಗಿತ್ತು.

ಅಧ್ಯಕ್ಷರು.—ಇನ್ನು ನೀವು ನಾಳೆ ನಿಮ್ಮ ಭಾಷಣವನ್ನು ಮುಂದುವರಿಸಬಹುದು. ಈಗ ಸಭೆಯು ಮುಕ್ತಾಯಗೊಂಡು ನಾಳೆ ಮಧ್ಯಾಹ್ನ ಒಂದು ಗಂಟೆಗೆ ಸೇರುವುದು.

ಸಭೆಯು ಸಂಜೆ ಆರು ಘಂಟೆಗೆ ಸರಿಯಾಗಿ ಮುಕ್ತಾಯವಾಗಿ ಪುನಃ ದಿನಾಂಕ ೪ನೇ ಫೆಬ್ರವರಿ ೧೯೮೧, ಬುಧವಾರದಂದು ಮಧ್ಯಾಹ್ನ ಒಂದು ಗಂಟೆಗೆ ಸರಿಯಾಗಿ ಸೇರಲು, ನಿರ್ಧರಿಸಿತು.